645

ಮೈಸೂರಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನ್‌ರವರು ಮಾಡಿದ ಉಪನ್ಯಾಸ.

1903ನೆಯ ಇಸವಿ ಅಕ್ಟೋಬರ್ ತಾರೀಖು 5ನೆಯ ಸೋಮವಾರ.

ಶ್ರೀಮನ್ಮಹಾರಾಜರವರು ರಾಜ್ಯಭಾರವನ್ನು ವಹಿಸಿದ್ದು.

ಶ್ರೀಮನ್ಮಹಾರಾಜರವರು, ಹೋದ ವರ್ಷ ತಾವು ರಾಜ್ಯಭಾರವನ್ನು ವಹಿಸಿದ ಆರು ದಿವಸಗಳಲ್ಲಿಯೆ ಎಂದರೆ ಆಗಸ್ಟು 14ನೆಯ ತಾರೀಖಿನಲ್ಲಿ–ತತ್ಕಾಲವಿಶೇಷಕ್ಕಾಗಿ ಸೇರಿದ ತಮ್ಮ ಮಂತ್ರಾಲೋಚನಾ ಸಭೆಯ ಅಗ್ರಾಸನಾಧಿಪತ್ಯವನ್ನು ವಹಿಸಿದ್ದಕಾಲದಲ್ಲಿ "ಮೈಸೂರು ಸಂಸ್ಥಾನದಲ್ಲಿ ನಾವು ಪುನಃ ಮಾತೃತ್ತೊಂದು ಹೊಸ ಏರ್ಪಾಡನ್ನು ಉಪಕ್ರಮಿಸಿದೇವೆ." ಎಂಬದಾಗಿ ಅಪ್ಪಣೆಕೊಡಿಸಿದರು. ರಾಜ್ಯಭಾರವನ್ನು ವಹಿಸಿದ ಮಹೋತ್ಸವ ನಡೆದ ದಿವಸ ಶ್ರೀವೈಸರಾಯರವರು ಇಲ್ಲಿಯ ಪೂರ್ವಸ್ಥಿತಿಯ ವಿಷಯವಾಗಿ ಪ್ರಸ್ತಾಪಿಸುವ ಕಾಲದಲ್ಲಿ, ನಮ್ಮ ಮಹಾರಾಜರವರ ವಂಶೀಯರೂ ಮತ್ತು ರಾಜಭಕ್ತರೂ ದೇಶಾಭಿಮಾನಿಗಳೂ ಆದ ಇಲ್ಲಿಯ ಮಂತ್ರಿಗಳೂ ಈ ಸಂಸ್ಥಾನವನ್ನು ತೃಪ್ತಿಕರವಾಗಿ ಪರಿಪಾಲಿಸುತ್ತ ಬಂದ ಅಂಶವನ್ನು ದೃಢೀಕರಿಸಿದರು. ನಮ್ಮ ಹಿಂದಿನ ಮಹಾರಾಜರು ತಮ್ಮ ಉತ್ತಮಗುಣಗಳಿಂದಲೂ ದೇಶಕ್ಕೆ ಹಿತಕರವಾದ ತಮ್ಮ ರಾಜ್ಯಭಾರದಿಂದಲೂ ಪ್ರಜೆಗಳ ಪ್ರೀತಿಗೂ ಕೃತಜ್ಞತೆಗೂ ಪಾತ್ರರಾಗಿದ್ದರು. ಅವರು ಸ್ವರ್ಗಸ್ಥರಾದ ನಂತರ, ಅವರ ಧರ್ಮಪತ್ನಿಗಳಾದ ಶ್ರೀಮನ್ಮಹಾರಾಣಿಯವರು ರೀಜಂಟರಾಗಿ ರಾಜ್ಯಭಾರವನ್ನು ಕೈಕೊಂಡು, ನಮ್ಮ ಮಹಾರಾಜರವರು ಪ್ರಾಪ್ತವಯಸ್ಕರಾಗುವವರೆಗೆ ರಾಜ್ಯವನ್ನು ಎಂಟುವರ್ಷಗಳಕಾಲ ಸರ್ವರೂ ಶ್ಲಾಘಿಸುವಂತೆ ಪರಿಪಾಲಿಸಿದರು. ಈರೀತಿಯಾಗಿ ಪ್ರಖ್ಯಾತವಾದ ಎರಡು ನಿದರ್ಶನಗಳಿರುವಲ್ಲಿ ನಮ್ಮ ಮಹಾರಾಜರವರು ತಮ್ಮ ಮಂತ್ರಾಲೋಚನ ಕೌನ್ಸಿಲ್ಲಿನಲ್ಲಿ ಪ್ರಥಮತಃ ಮಾಡಿದ ಉಪನ್ಯಾಸದಲ್ಲಿ ವಿಶೇಷವಾಗಿ ವಿನಯವನ್ನು ತೋರಿಸಿ ತಮ್ಮ ರಾಜ್ಯಕಾರ್ಯನಿರ್ವಹಣ ಸಾಮರ್ಥ್ಯದಲ್ಲಿ ಸಂಕೋಚವನ್ನು ವ್ಯಕ್ತಪಡಿಸಿದ್ದು ಏನೂ ಆಶ್ಚರ್ಯವಲ್ಲ. ಶ್ರೀಮನ್ಮಹಾರಾಜರವರು ರಾಜ್ಯಭಾರವನ್ನು ವಹಿಸಿ ಈಗ ಒಂದು ವರ್ಷಕಾಲ ಕಳೆಯಿತು. ಈ ಕಾಲದಲ್ಲಿ ಅವರಲ್ಲಿ ಕಂಡುಬಂದ ಕಾರ್ಯನಿರ್ವಹಣಾಸಕ್ತಿಯನ್ನೂ ಏಕರೂಪವಾದ ವಾತ್ಸಲ್ಯವನ್ನೂ ನೋಡಿದರೆ ಈ ಸದ್ಗುಣಗಳು ಇವರ ಮಹನೀಯರಾದ ಮಾತಾಪಿತೃಗಳಲ್ಲಿ ಹೇಗೆ ನೆಲೆಗೊಂಡಿದ್ದವೋ ಹಾಗೆಯೇ ಇವರಲ್ಲಿಯೂ ಸಂಪೂರ್ಣವಾಗಿ ನೆಲೆಗೊಂಡಿವೆಯೆಂಬಂಶವನ್ನು, ಇವರ ಮುಖ್ಯ ಮಂತ್ರಿಯಾದಪ್ರಯುಕ್ತ, ನಾನು ಅನುಭವಪೂರ್ವಕವಾಗಿ ತಿಳಿಸಬಲ್ಲೆನು.

ರಾಜ್ಯಕ್ರಮ.—ಮಹಾರಾಜರವರು ಸ್ವತಃ ಅಪ್ಪಣೆ ಕೊಡಿಸಿದಂತೆ, 'ಹೊಸರಾಜ್ಯಭಾರಕ್ರಮವು ವಿಶೇಷ ಕಾಲವಿಳಂಬ ವಿಲ್ಲದೆ ತನ್ನ ಸ್ಥಿತಿಯನ್ನು ಕಾರ್ಯತಃ ಪ್ರಕಟಪಡಿಸಲೆಂಬ' ಉದ್ದೇಶದಿಂದಲೂ ಮತ್ತು 'ಸಾಧ್ಯವಾದಷ್ಟು ಕ್ಷಿಪ್ರದಲ್ಲಿಯೇ ದಿವಾನರವರು ಕೌನ್ಸಿಲರವರು ಇವರುಗಳನ್ನು ಅವರು ನಿರ್ವಹಿಸುವ ರಾಜ್ಯಕಾರ್ಯಗಳಲ್ಲಿ ಏಕಮುಖವಾಗಿ ಸೇರಿಸಿ ತಾವು ಪ್ರತ್ಯಕ್ಷವಾಗಿ ಪರಾಂಬರಿಸಬೇಕೆಂಬ'

646

ಉದ್ದೇಶದಿಂದಲೂ ಆಗ ಸಭೆ ಸೇರಿಸಿದರು. 1881 ರಲ್ಲಿ ಮೈಸೂರು ಸಂಸ್ಥಾನದ ರಾಜ್ಯಭಾರ ಕ್ರಮವನ್ನು ಪ್ರಥಮತಃ ಏರ್ಪಡಿಸಿದವರ ಉದ್ದೇಶಗಳು ಏನಾದರೂ ಆಗಿರಲಿ; ಹಿಂದಿನ ಮಹಾರಾಜರವರು ಸ್ವರ್ಗಸ್ಥರಾಗುವದಕ್ಕೆ ಮುಂಚೆ ಇದ್ದ ರಾಜ್ಯಭಾರಸ್ಥಿತಿಯು ಈ ರೀತಿಯಲ್ಲಿ ಇದ್ದುದಾಗಿ ಹಿಂದಿನ ದಿವಾನರು ಸರ್ ಕೆ. ಶೇಷಾದ್ರಿಐಯ್ಯರವರು ಹೇಳಿರುವರು; ಅದೇನೆಂದರೆ:—ರಾಜ್ಯಭಾರದ ಕಾರ್ಯನಿರ್ವಹಣವಿಷಯದಲ್ಲಿ ದಿವಾನರು ಮಹಾರಾಜರವರಿಗೆ ಜವಾಬ್ದಾರರಾಗಿರುವರು. 1881ನೆಯ ಜುಲೈ ತಿಂಗಳಲ್ಲಿ ಹುಟ್ಟಿದ ನಿಬಂಧನೆಗಳಲ್ಲಿ ಕ್ಲಿಪ್ತಪಡಿಸಿದ ರಾಜ್ಯಭಾರಕ್ಕೆ ಸಂಬಂಧಪಟ್ಟ ಅತಿಶಯವಾದ ವಿಷಯಗಳನ್ನು ಕುರಿತು ಮಂತ್ರಾಲೋಚನೆಯನ್ನು ಹೇಳುವದರಲ್ಲಿ ದಿವಾನರವರೂ ಕೌನ್ಸಿಲರವರೂ ಒಟ್ಟಾಗಿ ಮಹಾರಾಜರವರಿಗೆ ಜವಾಬ್ದಾರರಾಗಿರುವರು. ದಿವಾನರವರು ಕೌನ್ಸಿಲರವರಿಗೆ ವಹಿಸಿರುವ ರಾಜ್ಯಭಾರಕಾರ್ಯಗಳನ್ನು ಕ್ರಮವಾಗಿ ನಿರ್ವಹಿಸುವ ವಿಷಯದಲ್ಲಿ ಕೌನ್ಸಿಲರವರು ದಿವಾನರವರಿಗೂ, ದಿವಾನರವರು ಮಹಾರಾಜರವರಿಗೂ, ಜವಾಬ್ದಾರರಾಗಿರುವರು.—ಎಂಬುದೇ.

1895ನೆಯ ವರ್ಷದಲ್ಲಿ ರೀಜನ್ಸಿರಾಜ್ಯಭಾರಕ್ಕೆ ಅಪ್ಪಣೆಕೊಡುವ ಕಾಲದಲ್ಲಿ ಇಂಡಿಯಾ ಗವರ್ನಮೆಂಟಿನವರು, ತಮ್ಮ ಉದ್ದೇಶಾನುಸಾರವಾಗಿ ಹಿಂದಿನ ಕೌನ್ಸಿಲರುಗಳು ಏಕೀಭಾವದಿಂದ ನಡಿಸತಕ್ಕ ಕಾರ್ಯಗಳನ್ನು ಸಮರ್ಪಕವಾಗಿ ನಡಿಸದೆ ಹೋದದ್ದನ್ನು ಪರ್ಯಾಲೋಚಿಸಿ, ಅಲ್ಲಿಂದ ಮುಂದೆ ರಾಜ್ಯಕಾರ್ಯ ನಿರ್ವಾಹವಿಷಯದಲ್ಲಿ ಸಭೆಯು ಕೇವಲ ಹೆಸರುಮಾತ್ರಕ್ಕೇ ಅಲ್ಲದೆ ವಾಸ್ತವವಾಗಿಯೂ ಭಾಗವನ್ನು ನಿರ್ವಹಿಸುವಂತೆ ಮಾಡುವದು ಅವಶ್ಯಕವೆಂದು ಭಾವಿಸಿ, ಅದಕ್ಕಾಗಿಯೇ ಮೂರುಮಂದಿ ಕೌನ್ಸಿಲರುಗಳನ್ನು ನಿಯಮಿಸಿ ಅವರು ಮಾಡತಕ್ಕ ಕೆಲಸಗಳನ್ನೂ ಗೊತ್ತುಮಾಡಿ ಅವರು ದಿವಾನರನ್ನು ಪ್ರಧಾನರನ್ನಾಗಿಟ್ಟುಕೊಂಡು ರಾಜ್ಯಕಾರ್ಯನಿರ್ವಾಹದಲ್ಲಿ ಭಾಗಿಗಳಾಗಿರಬೇಕೆಂದು ಅಪ್ಪಣೆಮಾಡಿದರು. ಈ ರಾಜ್ಯಭಾರದ ಏರ್ಪಾಡು ಶ್ರೀಮನ್ಮಹಾರಾಣಿಯವರು ರೀಜಂಟರಾಗಿದ್ದ 8 ವರ್ಷ ಕಾಲ ನಡೆಯಿತು. ಈ ರಾಜ್ಯಭಾರದ ಉಪಕ್ರಮದಿಂದಲೂ ನಾನು, ಕೆಲವು ಕಾಲ ದಿವಾನ್ ಸರ್. ಕೆ. ಶೇಷಾದ್ರಿಐಯ್ಯರವರ ಸಂಗಡ ಕೌನ್ಸಿಲರಾಗಿಯೂ, ಅವರನಂತರ ದಿವಾನ್ ಅಧಿಕಾರದಲ್ಲಿಯೂ, ರೀಜನ್ಸಿ ಕೌನ್ಸಲಿನ ಕಾರ್ಯದಲ್ಲಿ ಭಾಗಿಯಾಗಿದ್ದು ನೋಡಿದ್ದರಲ್ಲಿ ಆ ಏರ್ಪಾಡು ಪ್ರಾಯಶಃ ಉದ್ದೇಶವನ್ನು ಸಮರ್ಪಕವಾಗಿಯೇ ನೆರವೇರಿಸಿತೆಂದು ನಾನು ಅಭಿಪ್ರಾಯಪಡುತ್ತೇನೆ. ಆದರೂ ಅದು ತಾತ್ಕಾಲಿಕಮಾತ್ರವಾದ್ದಾಗಿತ್ತು. ಬಳಿಕ ಶ್ರೀಮನ್ಮಹಾರಾಜರವರು ರಾಜ್ಯಭಾರವನ್ನು ವಹಿಸಿದ ಕೂಡಲೆ ನೂತನವಾದ ಈಗಿನ ರಾಜ್ಯಭಾರಕ್ರಮವು ಪ್ರಾರಂಭವಾಯಿತು. ಈ ರಾಜ್ಯಭಾರದ ಕ್ರಮವನ್ನು ಏರ್ಪಡಿಸುವದರಲ್ಲಿ ನನ್ನ ಸಲಹೆಯೂ ವಿಶೇಷವಾಗಿ ಸೇರಿರುವದರಿಂದಲೂ, ಈ ಒಂದು ವರ್ಷದ ಅನುಭವದಿಂದ ನೋಡುವಲ್ಲಿಯೂ, ಈ ರಾಜ್ಯಭಾರಕ್ರಮವು ಮುಂದೆ ಸರಿಯಾಗಿ ನಡೆಯುವುದು ಎಂಬ ವಿಷಯವನ್ನು ಸೂಚಿಸುವ ಅನೇಕ ಉತ್ತಮವಾದ ಅಂಶಗಳು ಇದರಲ್ಲಿ ಕಂಡು ಬಂದಿವೆ ಎಂದು ನಿಸ್ಸಂದೇಹವಾಗಿ ಹೇಳಬಹುದು.

ಮುಖ್ಯವಾದ ವಿಷಯಗಳೆಲ್ಲಾ ಶ್ರೀಮನ್ಮಹಾರಾಜರವರಿಂದಲೇ ತೀರ್ಮಾನವಾಗತಕ್ಕವಾದ್ದರಿಂದ ಇದಕ್ಕೆ ವಿರೋಧವಿಲ್ಲದಂತೆಯೂ, ಕೌನ್ಸಿಲ್ಲಿನ ಪ್ರಯೋಜನಕ್ಕೆ ಕುಂದಕವಿಲ್ಲದಂತೆಯೂ, ಕೌನ್ಸಿಲರುಗಳಲ್ಲಿ ಕಾರ್ಯೋತ್ಸಾಹವನ್ನುಂಟುಮಾಡಿ ಅವರು ಸಹಕಾರಿಗಳಾಗಿರುವಂತೆ ಮಾಡುವದು ಈ ಹೊಸ ಏರ್ಪಾಡುಗಳ ಮುಖ್ಯೋದ್ದೇಶವಾಗಿತ್ತು. ಆದಕಾರಣ ಮಹಾರಾಜರವರು ರಾಜ್ಯವನ್ನು ವಹಿಸಿಕೊಂಡ ಬಳಿಕಲೂ, ಆ ಹಿಂದೆ ಇದ್ದ ಕೌನ್ಸಿಲನ್ನೇ ಇಟ್ಟುಕೊಳ್ಳುವದು ಸರಿಯಲ್ಲವಾದ್ದರಿಂದ, ಅದನ್ನು ಮಂತ್ರಾಲೋಚಕವಾಗಿ ಏರ್ಪಡಿಸುವದು ಅವಶ್ಯಕವಾಯಿತು. ಇದಕ್ಕಾಗಿ ಕೌನ್ಸಿಲರುಗಳ ಪರ್ಯಾಲೋಚನೆಗೆ ಬರತಕ್ಕ ವಿಷಯಗಳ ಸಂಖ್ಯೆಯನ್ನು ವಿಮರ್ಶೆಯಿಂದ ಹೆಚ್ಚಿಸಲಾಯಿತು. ಈಗ ರಾಜ್ಯದ ಆಡಳಿತದ ಎಲ್ಲ ಇಲಾಖೆಗಳಲ್ಲಿಯೂ ಕಾರ್ಯಗಳು ಸಮರ್ಪಕವಾಗಿ ನಡೆಯುವದಕ್ಕೆ ದಿವಾನರವರೇ ಮಹಾರಾಜರವರಿಗೆ ಜವಾಬ್ದಾರರಾದ ಅಧಿಕಾರಿಗಳಾಗಿರುತ್ತಾರೆ. ಮಹಾರಾಜರವರ ಬಳಿಗೆ ಹೋಗಿ ಬರುವ ಎಲ್ಲಾ ವಿಷಯಗಳೂ ಇವರ ಮೂಲಕವಾಗಿಯೆ ಹೋಗಿಬರಬೇಕು. ಆದರೂ ಕೌನ್ಸಿಲರುಗಳಿಗೆ ಆಯಾ ಇಲಾಖೆಗಳ ಆಡಳಿತಗಳ ಪೂರ್ವಾಪರ ತಿಳಿವಳಿಕೆಯನ್ನೂ ಅವುಗಳಲ್ಲಿ ಆಸಕ್ತಿಯನ್ನೂ ಉಂಟುಮಾಡುವದಕ್ಕಾಗಿ, ಅವರಿಗೆ ಸರಕಾರದ ತೀರ್ಮಾನಕ್ಕೆ ಹೋಗಬೇಕಾದ ಆಯಾ ಇಲಾಖೆಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಕೊಡುವಂತೆ ಅಧಿಕಾರವನ್ನೂ ಕೊಟ್ಟು, ಇಲಾಖೆಗಳು ಹಂಚಲ್ಪಟ್ಟಿವೆ.

ಮೇಲೆ ವಿವರಿಸಿದ ಈ ರಾಜ್ಯಕ್ರಮವು 1902ನೆಯ ಆಗಸ್ಟು ೬ನೆಯ ತಾರೀಖಿನಿಂದ ನಡೆಯುತ್ತಾ ಇದೆ. ಈಪಕ್ಕದ ಪಟ್ಟಿಯು, ಇನ್ನೂ ತೀರ್ಮಾನವಾಗದ ವಿಷಯಗಳು ವಿನಾ, ಕಳೆದ ವರ್ಷದಲ್ಲಿಯೂ ರೀಜನ್ಸಿಯ ಕಡೆಯ ವರ್ಷದಲ್ಲಿಯೂ ನಡೆದ ಕೆಲಸಗಳನ್ನು ಹೋಲಿಸಿ ತೋರಿಸುತ್ತದೆ. ಮಹಾರಾಜರವರ ತೀರ್ಮಾನಕ್ಕೆ ಕಳುಹಿಸಿದ ವಿಷಯಗಳು 800ಕ್ಕಿಂತ ಹೆಚ್ಚಾಗಿದ್ದವು. ಮಹಾರಾಜರವರಿಂದ ತೀರ್ಮಾನವಾಗಿ ಬಂದ ವಿಷಯಗಳು ಅರ್ಜಿಗಳು ಸಹಿತವಾಗಿ 900ಕ್ಕಿಂತ ಹೆಚ್ಚಾಗಿದ್ದವು. ಕೇವಲ ಪರಿಮಾಣವನ್ನೇ ನೋಡಿದರೂಕೂಡ ಮಹಾರಾಜರವರು ರಾಜ್ಯಕಾರ್ಯದಲ್ಲಿ ಬಹಳ ಭಾಗವನ್ನು ನಿರ್ವಹಿಸಿರುವುದು ವ್ಯಕ್ತವಾಗುತ್ತದೆ. ಮಹಾರಾಜರವರು ತೀರ್ಮಾನ ಮಾಡಿದ ಬೇರೆ ಬೇರೆ ವಿಷಯಗಳು ಯಾವವೆಂದರೆ:— ರಾಜ್ಯದಲ್ಲಿ ನಡೆಯತಕ್ಕ ಅತಿಶಯವಾದ ಸಂಗತಿಗಳನ್ನೆಲ್ಲಾ, ಶ್ರೀಮನ್ಮಹಾರಾಜರವರಿಂದ ತೀರ್ಮಾನ ಹೊಂದಬೇಕಾದುದರಿಂದ, ನಾನಾ ವಿಧವಾದ ಅನೇಕ ಸಂಗತಿಗಳು ಅವರ ಪರಾಮರಿಕೆಗೆ ಹೋದವೆಂದು ಹೇಳಬೇಕಾದುದೇ ಇಲ್ಲ.

		ವ್ಯವಸ್ಥೆಯಾದ ವಿಷಯಗಳ ಸಂಖ್ಯೆ.	
		1901-02.	1902-03.
ರೆವಿನ್ಯು	..	2,941	2,652
ಜನರಲ್	..	2,802	3,529
ಪೊಲಿಟಿಕಲ್ ಪೆನ್ಷನ್	..	90	97
ವಿದ್ಯಾಭ್ಯಾಸ	..	344	467
ಜ್ಯುಡಿಷಿಯಲ್	...	1,735	1,740
ಲೆಜಿಸ್ಲೇಟಿವ್	..	76	53
ಲೋಕಲ್ ಫಂಡ್	..	550	445
ಲೋಕಲ್ ಬೋರ್ಡ್	...	1,283	765
ಮ್ಯುನಿಸಿಪಲ್ ಫಂಡ್	..	1,546	1,368
ಫೈನಾನ್ಷಲ್	...	1,037	1,322
ಅಬ್ಕಾರಿ	..	646	433
ಅರ್ಜಿ	...	3,063	2,780
ಜಂಗಲು	...	566	443
ಸೈನ್ಯ	...	81	173
ಮುಜರಾಯಿ	...	1,450	1,606
ಮರಮ್ಮತ್ (ಜನರಲ್)	...	800	963
„ ರೇಲ್ವೆ	..	307	320
ಜಿಯೊಲಾಜಿಕಲ್	..	343	431
ಒಟ್ಟು	..	19,660	19,584

ಡಿಲ್ಲಿ ದರ್ಬಾರ್.—ಶ್ರೀಮಚ್ಚಕ್ರವರ್ತಿಗಳವರು ಪ್ರಬಲವಾದ ಖಾಯಿಲೆಯಿಂದ ಗುಣಹೊಂದಿದ್ದೂ ನಮ್ಮ ಶ್ರೀಮನ್ಮಹಾರಾಜರವರು ರಾಜ್ಯಭಾರವನ್ನು ವಹಿಸಿದ ಪೂರನೆಯ ದಿವಸಚಕ್ರವರ್ತಿಗಳವರಿಗೆ ಲಂಡನ್‌ಪಟ್ಟಣದಲ್ಲಿ ಪಟ್ಟಾಭಿಷೇಕಮಹೋತ್ಸವವಾದದ್ದೂ ಸರ್ವಸಾಮಾನ್ಯವಾಗಿ ಬ್ರಿಟಿಷ್‌ರಾಷ್ಟ್ರಕ್ಕೇ ಆನಂದಕರವಾದ ವಿಷಯಗಳಾಗಿವೆ. ಈ ವರ್ಷದ ಜನವರಿ ಮೊದಲನೆಯ ತಾರೀಖಿನಲ್ಲಿ, ಮಹಾರಾಜರವರು, ಹಿಂದೂ ದೇಶದ ಚರಿತ್ರದಲ್ಲಿ ಸ್ಮರಣೀಯವಾದ ಡಿಲ್ಲಿಯ ಮಹಾದರ್ಬಾರಿನಲ್ಲಿ ಅನ್ವಯಿಸಿದ್ದು ತಮಗೆಲ್ಲಾ ವೇದ್ಯವಾಗಿಯೇ ಇದೆ. ಆಕಾಲದಲ್ಲಿ ಮೈಸೂರು ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟ್ ಹೆಡ್ಕ್ವಾರ್ಟರುಗಳಲ್ಲಿಯೂ ಇತರ ಸ್ಥಳಗಳಲ್ಲಿಯೂ ಅಲ್ಲಲ್ಲಿ ದರ್ಬಾರುಗಳನ್ನು ನಡಿಸಿ ಆ ಸಭೆಗಳಲ್ಲಿ ಚಕ್ರವರ್ತಿಯವರ ಸಿಂಹಾಸನಾರೋಹಣ ಶುಭಸಮಾಚಾರವನ್ನು ಪ್ರಕಟಿಸುವ ಇಂಗ್ಲಿಷ್ ಮತ್ತು ಕನ್ನಡಭಾಷೆಯ ಪತ್ರಿಕೆಗಳನ್ನು ಓದಲಾಯಿತು. ಆ ದಿವಸ, ವಿದ್ಯಾರ್ಥಿಗಳ ವಿನೋದಾರ್ಥವಾದ ಆಟಗಳೂ, ದೀಪೋತ್ಸವಗಳೂ, ಬಾಣಗಳೂ ಎಲ್ಲೆಲ್ಲಿಯೂ ನಡೆದವು. ಎಲ್ಲಾ ದೇವಸ್ಥಾನಗಳಲ್ಲಿಯೂ ಮಸೀತಿಗಳಲ್ಲಿಯೂ ಪೂಜೆಗಳು ನಡೆದವು. ಎಲ್ಲಾ ಜಾತಿಯ ದೀನಾನಾಥರಿಗೂ ಅನ್ನದಾನ ಮಾಡಲಾಯಿತು. ಆ ಮಹೋತ್ಸವದ ಗೌರವಾರ್ಥವಾಗಿ ಅನೇಕ ಬಂದಿವಾನರನ್ನು ಸೆರೆಯಿಂದ ಬಿಡುಗಡೆ ಮಾಡಲಾಯಿತು. ಆ ಕಾಲದಲ್ಲಿ ಈ ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಪ್ರಜೆಗಳು ಉತ್ಸಾಹಪುರಸ್ಸರವಾಗಿ ಮಾಡಿದ ಸಹಾಯವೂ ತೋರಿಸಿದ ರಾಜಭಕ್ತಿಯೂ ವಿಶೇಷವಾಗಿ ಆಹ್ಲಾದಕರವಾಗಿದ್ದವು. ಮೈಸೂರು ರಾಷ್ಟ್ರಸಹಾಯಕ ಸೈನ್ಯದವರು, ಡಿಲ್ಲಿಯಲ್ಲಿ ಪಟ್ಟಾಭಿಷೇಕಮಹೋತ್ಸವ ಕಾಲದಲ್ಲಿ ನಡೆದ ಕವಾಯಿತಿನಲ್ಲಿ ಸೇರಿ, ತಮ್ಮ ಸುಲಕ್ಷಣವಾದ ಉಡುಪುಗಳಿಂದಲೂ ಶಿಪಾಯಿಗಳಿಗೆ ಉಚಿತವಾದ ತಮ್ಮ ಧೀರಸ್ವಭಾವದಿಂದಲೂ ಶ್ರಮಕರವಾದ ಸಂದರ್ಭಗಳಲ್ಲಿಯೂ ಕೂಡ ಶ್ಲಾಘ್ಯವಾಗಿದ್ದ ತಮ್ಮ ನಡತೆಯಿಂದಲೂ ಬ್ರಿಟಿಷ್ ಮಿಲಿಟರಿ ಇಲಾಖೆಯವರ ಶ್ಲಾಘನೆಗೆ ಪಾತ್ರರಾದರು. ಆಗ ಶ್ಲಾಘಾರೂಪವಾಗಿ ಬಂದ ಅನೇಕ ಹುಕುಂಗಳನ್ನು ಶ್ರೀಮನ್ಮಹಾರಾಜರವರ ಆಜ್ಞಾನುಸಾರವಾಗಿ ಹಿಂದೂಸ್ಥಾನಿಗೆ ತರ್ಜುಮೆ ಮಾಡಿ ಕವಾಯಿತ್ ಕಾಲದಲ್ಲಿ ಸೈನಿಕರಿಗೆ ಓದಿ ಹೇಳಲಾಯಿತು.

ಡಿಲ್ಲಿಯಲ್ಲಿ ಆ ಮಹೋತ್ಸವವನ್ನು ಕಣ್ಣಾರನೋಡುವ ಭಾಗ್ಯವನ್ನು ಪಡೆದಿದ್ದವರಿಗೆ ಆದರ್ಬಾರು ವಿಶೇಷಾರ್ಥಸೂಚಕವಾಗದೆ ಇರಲಿಲ್ಲ. ಯದ್ಯಪಿ ಆರೀತಿಯಾದ ಸಾರ್ವಭೌಮತ್ವದ ಸೂಚನೆಗಳ ಹಿಂದೆ ಈ ದೇಶದಲ್ಲಿ ನಡೆಯದಿರಲಿಲ್ಲ; ಆದರೂ ಪ್ರಕೃತದಲ್ಲಿ ನಡೆದ ಉತ್ಸವವು ಅದ್ವಿತೀಯವಾದದ್ದು:

ಪೂರ್ವದಲ್ಲಿ ಹಿಂದೂಗಳ ಉಚ್ಛ್ರಾಯಸ್ಥಿತಿಯಲ್ಲಿಯೂ ಮಹಮ್ಮದೀಯರ ಪ್ರಾಬಲ್ಯದಶೆಯಲ್ಲಿಯೂ ಈ ದೇಶದ ಬೇರೆಬೇರೆ ರಾಜರುಗಳ ಮೇಲೆ ಸಾರ್ವಭೌಮತ್ವವನ್ನು ಒಬ್ಬೊಬ್ಬ ಪ್ರಬಲನಾದ ಪುರುಷನು ತನ್ನ ಚಿತ್ತಸ್ಥೈರ್ಯದಿಂದ ಸ್ಥಾಪಿಸಿದ್ದುಂಟು. ಅಂಥಾವನ ಕಾಲಾನಂತರ ರಾಜ್ಯವು ಬಹುಮುಖವಾಗಿ ಒಡೆದು ಹೋಗಿ, ಪರಾಕ್ರಮಿಯಾದ ಒಬ್ಬ ರಾಜನು ಪುನಃ ಒಂದುಗೂಡಿ ಕಟ್ಟುವವರೆಗೂ ಅನಾಯಕವಾಗಿರುತ್ತಿತ್ತು. ಆದರೆ ಮನುಷ್ಯಬುದ್ಧ್ಯಾ ಆಲೋಚಿಸುವಲ್ಲಿ, ಈಗಿನ ಇಂಗ್ಲಿಷ್ ಸಾರ್ವಭೌಮತ್ವವು, ಅಂಥ ಶೋಚನೀಯವಾದ ಯಾವ ವಿಚ್ಛಿತ್ತಿಗಳೂ ಇಲ್ಲದೆ, ಚಿರಸ್ಥಾಯಿಯಾಗಿ ನೆಲಸುವುದಕ್ಕೆ ಬೇಕಾದ ಅಂಶಗಳುಳ್ಳದ್ದಾಗಿದೆ ಎಂದರು ಕಾಣುತ್ತದೆ. ಪ್ರಬಲರಾದ ಇಂಗ್ಲಿಷರವರ ನಿರಂತರವಾದ ಪಾಲನೆಯನ್ನೂ ಹಿಂದೂ ದೇಶದೊಳಗೆ ಅಪ್ರತಿಹತವಾದ ಅವರ ಸಾರ್ವಭೌಮತ್ವವನ್ನೂ ಈ ದೇಶೀಯರು ತಮ್ಮ ಪ್ರಯೋಜನಕ್ಕೋಸ್ಕರವೇ ಉಂಟಾದ ವಿಷಯಗಳೆಂದು ಭಾವಿಸಬೇಕು. ಹೀಗೆ ಭಾವಿಸಿ ನೋಡಿದಲ್ಲಿ, ಡಿಲ್ಲಿಯಲ್ಲಿ ಸೇರಿದ ಮಹಾಜನಸಮುದಾಯವು ಹಿಂದೂದೇಶದ ಚರಿತ್ರದಲ್ಲಿ ಒಂದು ಮುಖ್ಯತಮವಾದ ವಿಷಯವಾಗಿದೆ. ಇದು ವಿಸ್ತಾರವಾದ ಈ ರಾಜ್ಯದ ಎಲ್ಲಾ ಭಾಗದ ರಾಜರುಗಳನ್ನೂ ಪ್ರಜೆಗಳನ್ನೂ ಮೈತ್ರೀಭಾವದಲ್ಲಿ ಒಂದುಗೂಡಿಸಿದ್ದು ಮಾತ್ರವೇ ಅಲ್ಲದೆ, ನಿರಪಾಯವಾದ ರಾಜ್ಯ ಕ್ಷೇಮಾಭಿವೃದ್ಧಿಗೆ ಈ ರೀತಿಯಾದ ಭರವಸೆಯಿರುವುದು ಎಷ್ಟೊಂದು ಪ್ರಯೋಜನಕರವೆಂಬಂಶವನ್ನೂ ಕೂಡ ಎಲ್ಲರ ಮನಸ್ಸಿನಲ್ಲಿಯೂ ಚೆನ್ನಾಗಿ ಖಚಿತವಾಗುವಂತೆಯೂ ಮಾಡಿತು.

ಪ್ರಜಾಸಂಖ್ಯೆ.—ಈ ಕಳೆದ ಹತ್ತು ವರ್ಷಗಳಲ್ಲಿ ಆದಿಭಾಗದಲ್ಲಿ ಕಾಲರಾಉಪದ್ರವದಿಂದಲೂ ಅಂತ್ಯಭಾಗದಲ್ಲಿ ಪ್ಲೇಗಿನ ಹಾವಳಿಯಿಂದಲೂ ಅನೇಕ ಮರಣಗಳು ಸಂಭವಿಸಿದಾಗ್ಯೂ ಕಳೆದ ವರ್ಷ ಪ್ರಕಟಿತವಾದ ಸೆನ್ಸಸ್ ರಿಪೋರ್ಟಿನಪ್ರಕಾರ ಪ್ರಜಾಸಂಖ್ಯೆಯು ಆದಿಯಲ್ಲಿ 48·4 ಲಕ್ಷವಿದ್ದುದ್ದು ಕೊನೆಗೆ 54·5 ಲಕ್ಷಕ್ಕೆ—ಎಂದರೆ ಸೇಕಡ 12½ ಯಷ್ಟು—ಏರಿತು. ಒಟ್ಟು ಜನಸಂಖ್ಯೆಯಲ್ಲಿ ಸೇಕಡ 5ರಂತೆ ಪರಸ್ಥಳದವರು ಎಂದರೆ ಪರಸ್ಥಳದಲ್ಲಿ ಹುಟ್ಟಿ ಇಲ್ಲಿಗೆ ಬಂದವರಾಗಿದ್ದರು. 1891ರಲ್ಲಿ ಈ ಸಂಸ್ಥಾನದ ಅನೇಕ ಭಾಗಗಳಲ್ಲಿದ್ದ ಇಂಥವರ ಸಂಖ್ಯೆಯು 166,688 ಇದ್ದದ್ದು, 1901ರಲ್ಲಿ 2,81,526ಕ್ಕೆ—ಎಂದರೆ ಸೇಕಡ 69ರಂತೆ—ಏರಿತು. ಹೀಗೆ ಪರಸ್ಥಳದಿಂದ ಬಂದವರಸಂಖ್ಯೆಯು ಹೆಚ್ಚಿದ್ದು ಇಲ್ಲಿಯ ಒಟ್ಟು ಪ್ರಜಾಸಂಖ್ಯೆಯ ಹೆಚ್ಚಿಗೆಯಲ್ಲಿ ಆರನೆಯ ಭಾಗದ ಹೆಚ್ಚಿಗೆ ಕಾರಣವಾಯಿತು. ಕೋಲಾರದ ಚಿನ್ನದಗಣಿಗಳು ಮತ್ತು ಮರಮ್ಮತ್ ಇಲಾಖೆಯ ಭಾರಿಕಾಂಗಾರಿಗಳೂ ಇವೇ, ಪರಸ್ಥಳದವರನ್ನು ಹೆಚ್ಚಾಗಿ ಇಲ್ಲಿಗೆ ಆಕರ್ಷಿಸುವುದಕ್ಕೆ ಕಾರಣವಾಗಿವೆ. ಇಲ್ಲಿಂದ ಪರಸ್ಥಳಗಳಿಗೆಹೋಗಿ ನೆಲಸಿದವರಸಂಖ್ಯೆಯು ಹಿಂದಿನ ಸೆನ್ಸಸ್ಸಿನ ಪ್ರಕಾರ 1,43,553 ಇದ್ದದ್ದು, ಈ ಸೆನ್ಸಸ್ಸಿನಲ್ಲಿ 132,342ಕ್ಕೆ ಇಳಿಯಿತೆಂದು, ದೇಶದ ಇತರಭಾಗಗಳ ಸೆನ್ಸಸ್ ಲೆಕ್ಕಗಳಿಂದ ತಿಳಿದುಬರುತ್ತದೆ. ಹತ್ತು ವರ್ಷ ವಯಸ್ಸಾಗದ ಹೆಣ್ಣುಮಕ್ಕಳಲ್ಲಿ ಮದುವೆಯಾದವರ ಸಂಖ್ಯೆಯೂ ಸಂಸಾರ ತಪ್ಪಿಹೋದವರ ಸಂಖ್ಯೆಯೂ 1891ರಲ್ಲಿದ್ದದ್ದಕ್ಕಿಂತ ಕಡಮೆಯಾಯಿತು—ಎಂದರೆ ಹತ್ತು ವರ್ಷ ವಯಸ್ಸಾಗದ ಹೆಣ್ಣುಮಕ್ಕಳಲ್ಲಿ ಮದುವೆಯಾದವರ ಸಂಖ್ಯೆಯು 1891ನೆಯ ವರ್ಷದ ಸೆನ್ಸಸ್ಸಿನಪ್ರಕಾರ 18,072 ಇದ್ದದ್ದು ಈ ಸೆನ್ಸಸ್ಸಿನಲ್ಲಿ 7,130ಕ್ಕೂ, ಸಂಸಾರತಪ್ಪಿದವರ ಸಂಖ್ಯೆಯು 257 ಇದ್ದದ್ದು 91ಕ್ಕೂ ಇಳಿದವು. ಹತ್ತು ವರ್ಷ ವಯಸ್ಸಾಗದ ಗಂಡು ಹುಡುಗರಲ್ಲಿ ಮದುವೆಯಾದವರ ಸಂಖ್ಯೆಯು 1891ರಲ್ಲಿ 705 ಇದ್ದದ್ದು 1901ರಲ್ಲಿ 235ಕ್ಕೆ ಇಳಿಯಿತು. ಹುಚ್ಚರು, ಮೂಗರು, ಹುಟ್ಟುಕುರುಡರು, ಕುಷ್ಠ ಜಾಡ್ಯದವರು, ಇವರ ಸಂಖ್ಯೆಯು 1891ರಲ್ಲಿದ್ದದ್ದಕ್ಕಿಂತ ಕಡಿಮೆಯಾಯಿತು, ಎಂದರೆ ಕುರುಡರಲ್ಲಿ ಸೇಕಡ 23 ರಂತೆಯೂ ಕುಷ್ಠರೋಗಿಗಳಲ್ಲಿ ಸೇಕಡ 18ರಂತೆಯೂ ಕಿವುಡ ಮೂಗರಲ್ಲಿ ಸೇಕಡ 11ರಂತೆಯೂ ಹುಚ್ಚರಲ್ಲಿ ಸೇಕಡ 4ರಂತೆಯೂ ಕಡಿಮೆಯಾಯಿತು. ಬೇರೆ ಬೇರೆ ಪಂಗಡದವರು ಮಾತನಾಡುತ್ತಿದ್ದ ಭಾಷೆಗಳ ಸಂಖ್ಯೆಯು ಹಿಂದಿನ ಸೆನ್ಸಸ್ಸಿನಪ್ರಕಾರ 51 ಇದ್ದದ್ದು, ಈಗಿನ ಸೆನ್ಸಸ್‌ಪ್ರಕಾರ 56ಕ್ಕೆ ಹೆಚ್ಚಿದ್ದಾಗಿ ತಿಳಿಯುಬರುತ್ತದೆ. ವಿದ್ಯಾಭ್ಯಾಸದ ವಿಷಯದಲ್ಲಿ ಯಾವದಾದರೂ ಒಂದು ಭಾಷೆಯನ್ನು ಓದುವದಕ್ಕೂ ಬರೆಯುವದಕ್ಕೂ ಬಂದರೆ ಸಾಕೆಂದು ಪರಿಗಣಿಸುವ ಸೆನ್ಸಸ್ಸಿನ ವಿದ್ಯಾಭ್ಯಾಸದ ಪರಿಮಾಣವೇ ಬಹಳ ಮಿತವಾದದ್ದು. ಆ ರೀತಿಯಲ್ಲಿ ನೋಡಿದಾಗ್ಯೂ ಕೂಡ, ಓದು ಬರಹ ತಿಳಿದವವರ ಸಂಖ್ಯೆಯು, ಒಟ್ಟು ಪ್ರಜಾಸಂಖ್ಯೆಯಲ್ಲಿ ಸೇಕಡ ಐದರಷ್ಟು ಕೂಡ ಇರಲಿಲ್ಲ—ಎಂದರೆ ಗಂಡಸರಲ್ಲಿ ಸೇಕಡ 8·8ರಂತೆಯೂ ಹೆಂಗಸರಲ್ಲಿ ಸೇಕಡ 0·6ರಂತೆಯೂ ಇತ್ತು.

ಋತುಧರ್ಮ ಮತ್ತು ಪ್ರಜಾರೋಗ್ಯ.—ಶ್ರೀಮನ್ಮಹಾರಾಜರವರ ಆಳ್ವಿಕೆಯ ಈ ಪ್ರಥಮವರ್ಷದಲ್ಲಿ ಮಳೆಯು ಸಮೃದ್ಧಿಯಾಗಿ ಬಿತ್ತು, ಋತುಗಳು ಸೌಮ್ಯವಾಗಿದ್ದವು. ಫಸಲುಗಳು ಚೆನ್ನಾಗಿ ಆದವು, ವ್ಯವಸಾಯದ ಸ್ಥಿತಿಯು ಒಟ್ಟು ಬಹಳ ತೃಪ್ತಿಕರವಾಗಿತ್ತು, ಆಹಾರಕ್ಕೆ ಉಪಯೋಗಿಸುವ ದವಸಧಾನ್ಯಗಳೆಲ್ಲಾ ಹಿಂದಿನ ವರ್ಷಕ್ಕಿಂತ ಅಗ್ಗವಾಗಿದ್ದವು.

ಆದಾಗ್ಯೂ ಪ್ರಜೆಗಳ ಆರೋಗ್ಯಾಭಿವೃದ್ಧಿಯ ವಿಷಯದಲ್ಲಿ ಒಟ್ಟು ಅನೇಕ ಕೊರತೆಗಳಿದ್ದವು. ಕಳೆದ ವರ್ಷ ಕಾಲರಾತಗುಲಿದವರ ಸಂಖ್ಯೆಯು 202ಮಾತ್ರವೇ ಆದ್ದರಿಂದಲೂ ಹಿಂದಿನವರ್ಷ ಅದಕ್ಕಿಂತಲೂ ಹನ್ನೆರಡರಷ್ಟು ಹೆಚ್ಚಾಗಿದ್ದದ್ದರಿಂದಲೂ ಕಳೆದ ವರ್ಷ ಕಾಲರಾ ಜಾಡ್ಯವು ಇರಲೇ ಇಲ್ಲವೆಂದು ಹೇಳಬಹುದು. ಸಿಡುಬು ತಗುಲಿದವರ ಸಂಖ್ಯೆಯೂ ಬಹಳ ಮಟ್ಟಿಗೆ ಕಡಿಮೆಯಾಯಿತು—ಎಂದರೆ ಹಿಂದಿನ ವರ್ಷ 7,032 ಇದ್ದದ್ದು ಕಳೆದ ವರ್ಷ 4,216 ಕ್ಕೆ ಇಳಿಯಿತು. ಜ್ವರ ಪ್ಲೇಗು ಈ ರೋಗಗಳ ವಿಷಯದಲ್ಲಿ ಹೀಗೆ ಹೇಳಲಾಗಲಿಲ್ಲವಲ್ಲಾ ಎಂದು ವಿಷಾದಿಸುತ್ತೇನೆ. ಜ್ವರತಗುಲಿದವರ ಸಂಖ್ಯೆಯು ಹಿಂದಿನ ವರ್ಷಕ್ಕಿಂತ ಕಳೆದ ವರ್ಷ 3,000 ಹೆಚ್ಚಾಯಿತು ; ಈ ವ್ಯಾಧಿಯಿಂದ 47,047 ಮಂದಿ ಮೃತಪಟ್ಟರು. ಪ್ಲೇಗು ತಗುಲಿದವರ ಸಂಖ್ಯೆಯೂ ಪ್ಲೇಗಿನಿಂದ ಸತ್ತವರ ಸಂಖ್ಯೆಯೂ ಹಿಂದಿನ ವರ್ಷಕ್ಕಿಂತ ಹೆಚ್ಚಾಗಿದ್ದವು. ಕಳೆದ ವರ್ಷ ಸಂಸ್ಥಾನದಲ್ಲಿ ಜಾಡ್ಯತಗುಲಿದವರ ಒಟ್ಟು ಸಂಖ್ಯೆ 35,480 ಆಗಿಯೂ ಮರಣಸಂಖ್ಯೆ 6,155 ಆಗಿಯೂ ಇದ್ದವು. ತುಮಕೂರು ಚಿತ್ರದುರ್ಗದ ಡಿಸ್ಟ್ರಿಕ್ಟುಗಳುವಿನಾ ಉಳಿದ ಎಲ್ಲಾ ಭಾಗಗಳಲ್ಲಿಯೂ ಕಳೆದ ವರ್ಷ ಈ ಜಾಡ್ಯವು ಮೊದಲಿಗಿಂತ ಹೆಚ್ಚಿತು.

ಈ ಜಾಡ್ಯವನ್ನು ಪರಿಹರಿಸುವದಕ್ಕಾಗಿ ಗುಡಿಸಲು ಹಾಕುವ ಸಾಮಾನುಗಳನ್ನು ಬಡವರಿಗೆ ಧರ್ಮಾರ್ಥವಾಗಿಯೂ ಇತರರಿಗೆ ಅಸಲು ಖರೀದಿಗೂ ಕೊಟ್ಟು ಸರ್ಕಾರ ನೌಕರರು ರೋಗಪೀಡಿತವಾದ ಊರಹೊರಗೆ ಗುಡಿಸಲುಗಳನ್ನು ಕಟ್ಟಿಕೊಳ್ಳುವಂತೆ ಅವರಿಗೆ ಅಲ್ಪಸ್ವಲ್ಪ ಮೊಬಲಗನ್ನು ಮುಂಗಡವಾಗಿಕೊಟ್ಟು, ಸಾಧ್ಯವಾದಮಟ್ಟಿಗೆ ಜನಗಳಿಗೆ ಸಹಾಯಮಾಡುತ್ತ ಬರಲಾಯಿತು. ಹೊಸರಸ್ತೆಗಳನ್ನು ಹಾಕುವುದು, ಸೀನೀರು ಬಾವಿಗಳನ್ನು ತೆಗಿಸುವುದು, ಚರಂಡಿ ಕಟ್ಟಿಸುವುದು ಇವೇಮೊದಲಾದ ಅನೇಕ ಆರೋಗ್ಯಾಭಿವರ್ಧಕ ಕಾರ್ಯಗಳನ್ನು ಕೂಡ ಮಾಡಿಸಲಾಯಿತು. ರಸಾಯನ ಪದಾರ್ಥಗಳ ಪ್ರಯೋಗದಿಂದಲೂ ತೇವವನ್ನು ಹೋಗಲಾಡಿಸುವದರಿಂದಲೂ (Dessiccation) ರೋಗದ ಸೋಂಕನ್ನು ಮುರಿಯುವ ಪ್ರಯತ್ನ ಮಾಡಿತು. ಗೌರೀಬಿದನೂರು ತಾಲ್ಲೂಕಿನಲ್ಲಿ ಚರಕನಹಳ್ಳಿ ಯೆಂಬಗ್ರಾಮದಲ್ಲಿ ಮನೆಗಳು ಅನಾರೋಗ್ಯಕರವಾಗಿಯೂ ಒತ್ತೊತ್ತಾಗಿಯೂ ಇದ್ದುದರಿಂದ ಆ ಗ್ರಾಮವನ್ನು ಸರಿಯಾದ ಸ್ಥಳದಲ್ಲಿ ಹೊಸದಾಗಿ ಕಟ್ಟಿಸಲಾಯಿತು. ಪ್ಲೇಗುರೋಗದ ನಿವಾರಣೆಗಾಗಿ ಇದುವರೆಗೂ ಒಟ್ಟು 18 ಲಕ್ಷಕ್ಕೆ ಮೀರಿ ಖರ್ಚುಮಾಡಲಾಗಿದೆ.

ಮೈಸೂರುಪಟ್ಟಣವು ಸಂಸ್ಥಾನದ ರಾಜಧಾನಿಯಾದಕಾರಣ ಅದರ ಪ್ರಾಮುಖ್ಯತೆಯನ್ನು ಪರ್ಯಾಲೋಚಿಸಿ, ಮಹಾರಾಜರವರು, ಊರಿನಲ್ಲಿ ಜನಗಳು ಅತಿನಿಬಿಡವಾಗಿ ವಾಸಮಾಡುವಂತೆ ಕಟ್ಟುಮಾಡಿ ಕೆಟ್ಟಚರಂಡಿಯೇ ಮೊದಲಾದ ಅನಾರೋಗ್ಯಕರವಾದ ದೋಷಗಳ ನಿವಾರಣೆಗೆ ಬೇಕಾದ ಸಂಪೂರ್ಣವಾದ ಏರ್ಪಾಡುಗಳನ್ನು ಮಾಡುವುದಕ್ಕಾಗಿ ಒಂದು ಸಂಘವನ್ನು ನಿಯಮಿಸಿ, ಅವರ ಸಹಾಯಕ್ಕೆ ಒಬ್ಬ ಅಸಿಸ್ಟೆಂಟ್ ಇಂಜನಿಯರನ್ನೂ ಇವರ ಕೈಕೆಳಗೆ ಸರ್ವೆಯರ್ ಮೊದಲಾದವರನ್ನೂ ಇಡುವಂತೆ ಅಪ್ಪಣೆ ದಯಪಾಲಿಸಿದರು. ಈ ಕಮಿಟಿಯವರು ತಮ್ಮ ಕೆಲಸವನ್ನು ಪೂರ್ತಿಮಾಡಿದ್ದಾರೆ. ಅವರ ಪ್ರಾಥಮಿಕಸಲಹೆಗಳನ್ನು ಕೂಡಲೆ ಜಾರಿಗೆ ತರುವಂತೆ ಉದ್ದೇಶಿಸಿದೆ. ಅವು ಯಾವವೆಂದರೆ—(1) ಅತಿನಿಬಿಡವಾದ ಭಾಗಗಳಲ್ಲಿ ಮನೆಗಳನ್ನು ತೆಗೆದುಹಾಕಿ ಬಿಡುವಾಗಿ ಮಾಡುವುದು. (2) ಅನಾರೋಗ್ಯಕರವಾದ ಕಟ್ಟಡಗಳನ್ನು ತೆಗೆದುಹಾಕುವುದು. (3) ಇಂಥ ಭಾಗಗಳಿಂದ ಹೊರಟುಹೋದ ಹೆಚ್ಚು ಜನರ ನಿವಾಸಕ್ಕಾಗಿ ಹೊಸಬಡಾವಣೆಗಳನ್ನು ಮಾಡಿಸುವುದು. (4) ಚರಂಡಿಮೊದಲಾದವುಗಳನ್ನು ಕಟ್ಟಿಸುವುದು, ಇವೇ. ಈ ಕಾರ್ಯಗಳನ್ನು ನಡಿಸುವದಕ್ಕಾಗಿ ಸರ್ಕಾರದವರು 1903–4ನೆಯ ವರ್ಷದ ಖರ್ಚಿಗೆ 3 ಲಕ್ಷ ರೂಪಾಯಿಗಳನ್ನು ಮಂಜೂರ್ಮಾಡಿದಾರೆ. ಬೆಂಗಳೂರಿನ ಅಭಿವೃದ್ಧಿಗಾಗಿ 1,07,500 ರೂಪಾಯಿಯ ಭಾರಿಮೊಬಲಗನ್ನು ಮಂಜೂರ್ಮಾಡಿದಾರೆ. ರೋಗ ತಗುಲಿದ ಇತರ ಸ್ಥಳಗಳಲ್ಲಿಯೂ ಆರೋಗ್ಯಾಭಿವೃದ್ಧಿಗಾಗಿ ಮಿತವಾದ ಅನೇಕ ಏರ್ಪಾಡುಗಳನ್ನು ಮಾಡುತ್ತಾ ಇದೆ. ಬರುವ ವರ್ಷದಲ್ಲಿ ಈ ಘೋರವಾದ ಜಾಡ್ಯವು ಬಹಳಮಟ್ಟಿಗೆ ಕಡಿಮೆಯಾಗಲೆಂದು ಹಾರೈಸುತ್ತೇವೆ.

ಆದಾಯವ್ಯಯ.—ರೀಜನ್ಸಿಕಾಲದ ಲೆಕ್ಕಗಳನ್ನೆಲ್ಲಾ ಮ॥ ಕೀರ್‌ನಾಂಡರವರು ಪರೀಕ್ಷಿಸಿ ಮುಗಿಸಿದ್ದೆ ಈ ವರ್ಷ ನಡೆದ ಮುಖ್ಯವಾದ ಕೆಲಸವಾಗಿದೆ. ಅವರ ರಿಪೋರ್ಟು, ಸರ್ಕಾರದ 1903ನೆಯ ಫೆಬ್ರವರಿ 7ನೆಯ ತಾರೀಖಿನ ಪ್ರೊಸೀಡಿಂಗ್ಸ್ ನಂಬರು Fl. 1150-1192—18ರಲ್ಲಿ ರಿವ್ಯು ಆಗಿದೆ. ಅವರ ರಿಪೋರ್ಟನ್ನನುಸರಿಸಿ, ಹಿಂದೆ ಕ್ಲಿಪ್ತವಾದ ನಿಯಮಗಳಿಗೆ ಒಳಪಡದಿದ್ದ ಈ ಬಾಬಿಗೆ ಸೇರಿದ ಅನೇಕ ವಿಷಯಗಳನ್ನು ಕ್ರಮವಾಗಿಯೂ ಏತದುದ್ದೇಶವಾಗಿ ನಿಯಮಿತವಾದ ವಿಧಿಗನುಸಾರವಾಗಿಯೂ ವ್ಯವಸ್ಥೆ ಮಾಡುವಂತೆ ಹುಕುಂ ಮಾಡಲ್ಪಾಯಿತು. ಪ್ರೊಗದಿಯ ಮೊಬಲಗು, ಸಾಧಾರಣ ವ್ಯಯ, ಕಾವೇರೀ ವೈದ್ಯುತಶಕ್ತಿ ವ್ಯಾಪೋಷಣ, ಮತ್ತು ಇತರವಿಷಯಗಳು ಇವುಗಳಿಗಾಗಿ ವಿಶೇಷವಾಗಿ ಖರ್ಚು ಹೆಚ್ಚಾದರೂ ಕೂಡ

1894—95 ನೆಯ ವರ್ಷದಿಂದ ಈ ಸಂಸ್ಥಾನದ ಸುವರ್ಣಾದಾಯವು ಉತ್ತಮಸ್ಥಿತಿಯಲ್ಲಿರುವದಾಗಿ ಮಿ॥ ಕೀರ್ನಾಂಡರವರು ಅಭಿಪ್ರಾಯ ಪಟ್ಟಿದ್ದಾರೆ. ಹೀಗೆ ಖರ್ಚು ಹೆಚ್ಚಿದ್ದರಿಂದ ಖಜಾನೆಯಲ್ಲಿದ್ದ ನಗದೂ ಸರ್ಕಾರಿ ಪತ್ರಗಳೂ ಕಡಿಮೆಯಾಗಿ, 1,13,22,723 ರೂಪಾಯಿ ಉಳಿದಿದ್ದವು. ಈ ಮೊಬಲಗಿನಲ್ಲಿ ಸರ್ಕಾರದಿಂದ ಪಾವತಿಯಾಗತಕ್ಕ ಸೇವಿಂಗ್ಸ್ ಬ್ಯಾಂಕ್‌ಠೇವಣಿ ಸುಮಾರು 60 ಲಕ್ಷ ರೂಪಾಯಿಯೂ, ಸರ್ಕಾರಿ ಭೀಮಾ ಫಂಡ್ 8 ಲಕ್ಷ ರೂಪಾಯಿಯೂ, ಸಾವಕಾರಿ ಧರ್ಮಫಂಡ್ 3,26,600 ರೂಪಾಯಿಯೂ ಸೇರಿವೆ.

ಈ ವರ್ಷದ ಆದಾಯ ವ್ಯಯಗಳು, ಮೊದಲು ಮಾಡಿದ್ದ ಅಂದಾಜಿನ ಆದಾಯವ್ಯಯದ ಪಟ್ಟಿಗೆ (Budget) ಬಹಳಮಟ್ಟಿಗೆ ಸರಿಹೋಲುತ್ತವೆ ಎಂದು ತಿಳಿಸಲು ಸಂತೋಷವಾಗಿದೆ. ಎಲ್ಲಾ ಬಾಬುಗಳಿಂದಲೂ ಆದ ಒಟ್ಟು ಸುವರ್ಣಾದಾಯವು 2,07,24,127 ರೂಪಾಯಿ, ಎಂದರೆ ಆದಾಯವ್ಯಯದ ಅಂದಾಜು ಪಟ್ಟಿಯಲ್ಲಿ ಕಾಣಿಸಿದ್ದಕ್ಕಿಂತ 57,127 ರೂಪಾಯಿ ಮಾತ್ರ ಹೆಚ್ಚಾಗಿತ್ತು. ಒಟ್ಟು ವ್ಯಯವು 2,01,09,277 ರೂಪಾಯಿ ಅಂದಾಜು ಪಟ್ಟಿಯಲ್ಲಿ ಕಾಣಿಸಿದ್ದದ್ದು 2,01,00,000 ರೂಪಾಯಿ.

ಸಂಸ್ಥಾನದ ಸಾಧಾರಣಾದಾಯವು 1,72,48,412 ರೂಪಾಯಿ, ಸರ್ಕಾರಿ ಠೇವಣಾತಿಯಿಂದ ಬಂದ ಬಡ್ಡಿ 2,52,231 ರೂಪಾಯಿ, ರೇಲ್ವೆಯಿಂದ ಆದದ್ದು 5,27,237 ರೂಪಾಯಿ, ಕಾವೇರೀ ಪ್ರಪಾತದ ವೈದ್ಯುತಶಕ್ತಿಯ ಮಾರಾಟದಿಂದ ಉತ್ಪತ್ತಿಯಾದ್ದು 11,85,148 ರೂಪಾಯಿ, ಚಿನ್ನದಗಣಿಗಳಿಂದ ಹುಟ್ಟುವಳಿಯಾದ್ದು 15,32,099 ರೂಪಾಯಿ.

ಚಿನ್ನದ ಗಣಿಗಳಿಗಾಗಿ ಖರ್ಚಾದ ಚಿಲ್ಲರೆ ಮೊಬಲಗು 13,245 ರೂಪಾಯಿಯೂ ಸೇರಿ ಸಾಧಾರಣವ್ಯಯವು 1,87,72,002, ರೂಪಾಯಿ ರೇಲ್ವೆಯಲ್ಲಿ ಆದ ಖರ್ಚು 5,69,641 ರೂಪಾಯಿ, ಕಾವೇರೀಪ್ರಪಾತದ ವಿದ್ಯುಚ್ಛಕ್ತಿಯ ಸಿಬ್ಬಂದಿಖರ್ಚು 7,67,634 ರೂಪಾಯಿ.

ಒಟ್ಟು ಫಲಿತಾಂಶವೇನೆಂದರೆ—ಹಿಂದಿನ ವರ್ಷದಲ್ಲಿ ಆದಾಯಕ್ಕಿಂತ ವ್ಯಯವು 22,65,249 ರೂಪಾಯಿ ಹೆಚ್ಚಾಗಿದ್ದದ್ದು (ಆದಾಯಗಳು 1,91,95,773 ರೂಪಾಯಿ, ವ್ಯಯ 2,14,61,022 ರೂ.) ಈ ವರ್ಷ ಜುಲೈ ಗುರ್ರೆಯಲ್ಲಿ ಖರ್ಚುಕಳೆದು 6,14,850 ರೂಪಾಯಿಯಷ್ಟು ಶಿಲ್ಕು ಉಳಿಯಿತು.

ತಮಗೆ ಕೊಟ್ಟಿರುವ ಪಟ್ಟಿಯನ್ನು ನೋಡಿದರೆ, ಕಳೆದ ವರ್ಷದಲ್ಲಿಯೂ ಹಿಂದಿನ ವರ್ಷದಲ್ಲಿಯೂ ಬೇರೆಬೇರೆ ಬಾಬುಗಳಲ್ಲಿ ಆದ ಆದಾಯವ್ಯಯಗಳ ವ್ಯತ್ಯಾಸವು ವ್ಯಕ್ತವಾಗುತ್ತದೆ. ಕಳೆದ ವರ್ಷ ಜಮೀನ್ ಕಂದಾಯ, ಆಬ್ಕಾರಿ, ಮತ್ತು ಜಂಗಲು ಈ ಬಾಬುಗಳಲ್ಲಿ ಹೆಚ್ಚು ಉತ್ಪತ್ತಿಯಾಗಿದೆ. ಜಮೀನ್ ಕಂದಾಯವನ್ನೂ ಚಿಲ್ಲರೆ ಇನಾಮುಗಳ ಮೇಲಿನ ಕ್ವಿಟ್‌ರೆಂಟನ್ನೂ ಚೆನ್ನಾಗಿ ವಸೂಲ್ಮಾಡಿದ್ದರಿಂದಲೂ, ಸಾಗುವಳಿಯನ್ನು ಹೆಚ್ಚಿಸಿದ್ದರಿಂದಲೂ, ಜಮೀನು ಬಾಬಿನಲ್ಲಿ ಹೆಚ್ಚು ಉತ್ಪತ್ತಿಯಾಯಿತು. ಸಾರಾಯದ ಕುಡಿತವು ಹೆಚ್ಚಾದ್ದರಿಂದಲೂ, ಸೇಂದಿ ಅಂಗಡಿಗಳ ಬಾಡಿಗೆ ಹೆಚ್ಚಿದ್ದರಿಂದಲೂ, ಈ ದೇಶದ ಬಿಯರಿನಮೇಲಿನ ತೆರಿಗೆಯಿಂದಲೂ, ಆಬ್ಕಾರಿ ಬಾಬಿನಲ್ಲಿ ಸುಮಾರು 2 ಲಕ್ಷ ರೂಪಾಯಿ ಹೆಚ್ಚು ಉತ್ಪತ್ತಿಯಾಯಿತು. ಜಮೀನ್ ಕಂದಾಯ, ಆಬ್ಕಾರಿ ಈ ಎರಡು ಬಾಬುಗಳಲ್ಲಿ ಆದ ಗತವರ್ಷದ ಉತ್ಪತ್ತಿಯು ಹಿಂದಿನ ಎಲ್ಲಾ ವರ್ಷಗಳ ಉತ್ಪತ್ತಿಗಿಂತಲೂ ಹೆಚ್ಚಾಗಿತ್ತು. ಜಂಗಲ್‌ಬಾಬಿನಲ್ಲಿ ಸುಮಾರು $\frac{3}{4}$ ಲಕ್ಷದಷ್ಟು ನಿವ್ವಳಹುಟ್ಟುವಳಿ ಅಧಿಕವಾಯಿತು. ಈ ಪೈಕಿ ರಾಜ್ಯಭಾರವಹನ ಕಾಲದಲ್ಲಿ ನಡೆದ ಖೆಡ್ಡಾವಿನಲ್ಲಿ ಹಿಡಿಯಲ್ಪಟ್ಟ ಆನೆಗಳ ಮಾರಾಟದಿಂದ ಬಂದ 27,504 ರೂಪಾಯಿಯೂ ಒಂದು ವಿಶೇಷವಾದ ಬಾಬಾಗಿದೆ. ಗಂಧದಮರದ ಬಾಬಿನಲ್ಲಿ ಗಿರಾಕಿ ಕಡಿಮೆಯಾದ್ದರಿಂದ ಹುಟ್ಟುವಳಿ ಕಡಿಮೆಯಾದಾಗ್ಯೂ ಇತರ ಬಾಬುಗಳಿಂದ 85,000 ರೂಪಾಯಿನಷ್ಟು ಹೆಚ್ಚು ಹುಟ್ಟುವಳಿ ಯಾಯಿತು. ಚಿನ್ನದ ಗಣಿಯಲ್ಲಿ ಹಿಂದಿನ ವರ್ಷಕ್ಕಿಂತ ಗತವರ್ಷದಲ್ಲಿ 73 ಲಕ್ಷ ರೂಪಾಯಿ ಬೆಲೆಬಾಳುವ ಚಿನ್ನವು ಹೆಚ್ಚಾಗಿ ಉತ್ಪತ್ತಿಯಾಗಿ ಸುಮಾರು 4 ಲಕ್ಷ ರೂಪಾಯಿನಷ್ಟು ಹೆಚ್ಚು ರಾಜಾದಾಯವು ಬಂದದ್ದರಿಂದ ಈ ಬಾಬಿನಲ್ಲಿ ಹಿಂದಿನ ವರ್ಷಕ್ಕಿಂತ ಕಡಿಮೆಯಾಯಿತೆಂದು ತೋರಿಸಿರುವ 74,403 ರೂಪಾಯಿಯು ನಿಜವಾದ ಕಮ್ಮಿಯೆಂದು ಹೇಳಲಾಗದು. ವರ್ಷಾಂತ್ಯದೊಳಗಾಗಿ ಹನ್ನೊಂದು ಗಣಿಗಳ ಪೈಕಿ ನಾಲ್ಕು ಗಣಿಗಳ ಲೆಕ್ಕವು ಬಾರದೆ ಇದ್ದದ್ದರಿಂದ ಮೇಲೆಕಂಡ ಮೊಬಲಗನ್ನು ಲೆಕ್ಕಕ್ಕೆ ಜಮೆಕಟ್ಟುವದಕ್ಕೆ ಆಗಲಿಲ್ಲ. ಕಾವೇರೀವಿದ್ಯುಚ್ಛಕ್ತಿಯ ಬಾಬಿನಲ್ಲಿ ಈಸಲ ಪ್ರಥಮತಃ 12 ಲಕ್ಷ ರೂಪಾಯಿ ಜಮೆಯಾದ್ದು ತಮಗೆಲ್ಲಾ ಸಂತೋಷಕರವಾಗಿರುವದು. ಇತರ ಬಾಬುಗಳಿಂದ ಆದ ಹುಟ್ಟುವಳಿಯ ಹೆಚ್ಚುಕಡಿಮೆಗಳ ವಿಷಯದಲ್ಲಿ ಪಟ್ಟಿಯಲ್ಲಿ ತೋರಿಸಿರುವದಕ್ಕಿಂತ ಹೆಚ್ಚಾಗಿ ಹೇಳಬೇಕಾದ್ದಿಲ್ಲ.

ರಾಜ್ಯಭಾರವನ್ನು ವಹಿಸಿದ ಉತ್ಸವದ ಖರ್ಚು 3,83,671 ರೂಪಾಯಿಯೂ ದೇಹಲಿಪ್ರಯಾಣದ ಖರ್ಚು 3,46,204 ರೂಪಾಯಿಯೂ ಖರ್ಚುಬಾಬಿನಲ್ಲಿ ಮುಖ್ಯವಾದ ಅಂಶಗಳಾಗಿವೆ. ಈ ಹೆಚ್ಚು ಬಾಬುಗಳಿಗಾಗಿಯೂ ಇತರ ಚಿಲ್ಲರೆ ಬಾಬುಗಳಿಗಾಗಿಯೂ 7½ ಲಕ್ಷ ರೂಪಾಯಿ ಹೆಚ್ಚು ಖರ್ಚು ಆಗದಿದ್ದಲ್ಲಿ ಈಗ ಉಳಿದಿರುವ ಶಿಲ್ಕು 6,14,850 ರೂಪಾಯಿಗೆ ಬದಲಾಗಿ 13½ ಲಕ್ಷಕ್ಕಿಂತ ಹೆಚ್ಚಾಗಿ ಉಳಿಯುತ್ತಿತ್ತು. 1902ನೆಯ ಆಗಸ್ಟು ತಿಂಗಳಲ್ಲಿ ಪಾವತಿಯಾಗಬೇಕಾಗಿದ್ದ ಮೈಸೂರು ರೇಲ್ವೆ ಸಾಲದ ಬಾಬತು 20 ಲಕ್ಷ ರೂಪಾಯಿ ತೀರಿಸಲ್ಪಟ್ಟು ತತ್ಪ್ರಯುಕ್ತವಾದ ಸಾಲದ ಭಾರವು ನಿವೃತ್ತಿಯಾಯಿತು.

ಈ ವರ್ಷದ ಜುಲೈ ಮೊದಲನೆಯ ತಾರೀಖಿನಲ್ಲಿ 1,25,44,246 ರೂಪಾಯಿ ಶೇಷವು ಉಳಿದಿತ್ತು. ಈ ಪೈಕಿ 42,87,700 ರೂಪಾಯಿ ಸರ್ಕಾರಿ ಪತ್ರರೂಪವಾಗಿತ್ತು. ಮದ್ರಾಸ್ ಬ್ಯಾಂಕಿನಲ್ಲಿ ನಗದು 45,26,083 ರೂಪಾಯಿ ಉಳಿದಿತ್ತು. ಸರ್ಕಾರಿ ಖಜಾನೆಗಳಲ್ಲಿ 36,67,783 ರೂಪಾಯಿಯೂ ಬೇರೆಬೇರೆ ಇಲಾಖೆ ಉದ್ಯೋಗಸ್ಥರಲ್ಲಿ 62,680 ರೂಪಾಯಿಗಳೂ ಇದ್ದವು. ಈ ಪೈಕಿ ಖರ್ಚು ಜಾತಾ ಶಿಲ್ಕು 51,01,320 ರೂಪಾಯಿಗಳು ಉಳಿದಿದ್ದವು.

ಈ ವರ್ಷಕ್ಕೆ ಮಂಜೂರಾಗಿರುವ ಆದಾಯವ್ಯಯದ ಪಟ್ಟಿಯಲ್ಲಿ; ಸಾಮಾನ್ಯಾದಾಯವು 1,68,94,000 ರೂಪಾಯಿ ಬಡ್ಡಿ 2,86,000 ರೂಪಾಯಿ, ರೇಲ್ವೆ ಹುಟ್ಟುವಳಿ 5,15,000 ರೂಪಾಯಿ, ಕಾವೇರೀ ವೈದ್ಯುತಶಕ್ತಿ 13,64,000 ರೂಪಾಯಿ, ಚಿನ್ನದಗಣಿಯ ರಾಜಾಯ 16,00,000 ಒಟ್ಟು 2,06,59,000 ರೂಪಾಯಿ ಎಂದು ನಮೂದಾಗಿದೆ.

ಮರಮ್ಮತ್ ಇಲಾಖೆಯ ಖರ್ಚು 38,28,000 ರೂಪಾಯಿಯೂ ಸೇರಿ ಸಾಮಾನ್ಯ ಬಾಬುಗಳ ಖರ್ಚು 1,96,25,000 ರೂಪಾಯಿ ಎಂದೂ, ಬಂಡವಾಳದ ಖರ್ಚು 1,83,000 ಸೇರಿ ರೇಲ್ವೆ ಖರ್ಚು 9,05,000 ರೂಪಾಯಿ ಎಂದೂ ಶಕ್ತಿಯನ್ನು ಹೆಚ್ಚಿಸುವುದಕ್ಕಾಗಿ ಮಂಜೂರಾಗಿರುವ 7,50,000 ರೂಪಾಯಿ ಸೇರಿ ಕಾವೇರಿ ವೈದ್ಯುತ ಶಕ್ತಿಗಾಗಿ ಖರ್ಚು 10,03,000 ರೂಪಾಯಿ ಎಂದೂ ಅಂದಾಜಾಗಿದೆ. ಹೀಗೆ ಅಂದಾಜಾದ ಒಟ್ಟು ಖರ್ಚು 2,15,33,000 ರೂಪಾಯಾಗುತ್ತದೆ. ಇದರಿಂದ ಆದಾಯಕ್ಕಿಂತ 9 ಲಕ್ಷದಷ್ಟು ಅಧಿಕವಾಗಿ ವ್ಯಯವಾದಂತಾಗುತ್ತದೆ. ಆದರೆ ಇವುಗಳಲ್ಲಿ ವೈದ್ಯುತಶಕ್ತಿಯ ಕೆಲಸಗಳಾಗಿಯೂ ಭ[illegible] ಮರಮ್ಮತ್ ಕೆಲಸಗಳಿಗಾಗಿಯೂ ಇತರ ಹೆಚ್ಚು ಬಾಬುಗಳ ಖರ್ಚಿಗಾಗಿಯೂ ಆಗುವ ಖರ್ಚು ಫಲಾಪೇಕ್ಷೆಯಿಂದ ಮಾಡುವ ಖರ್ಚಾಗಿದೆ. ಅವುಗಳನ್ನು ಕೆಳಗೆ ತೋರಿಸಿದೆ:—

		ರೂ.
(a)	ರಾಷ್ಟ್ರೀಯ ಯುದ್ಧಸಾಮಗ್ರಿವಾಹಕ ಸೈನ್ಯಕ್ಕೆ ಲೈನುಗಳು ...	15,000
(b)	ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆ	60,000
(c)	ಮೈಸೂರಿನಲ್ಲಿ ಅರಮನೆಯ ಕಟ್ಟಡ	3,50,000
(d)	ಮೈಸೂರು ನಗರಾಭಿವೃದ್ಧಿ	3,00,000
(e)	ಬೆಂಗಳೂರು ಬಡಾವಣೆ	1,07,500
(f)	ಕೋಲಾರದ ಚಿನ್ನದ ಗಣಿಗಳಿಗೆ ನೀರುಸರಬರಾಯಿ	6,34,000
(g)	ಸ್ವರ್ಗಸ್ಥರಾದ ಮಹಾರಾಜರವರ ಜ್ಞಾಪಕಾರ್ಥವಾಗಿ ಶ್ರೀರಂಗ ಪಟ್ಟಣದಲ್ಲಿಯೂ ಕಲ್ಕತ್ತಾದಲ್ಲಿಯೂ ಕಟ್ಟಿಸುವ ಕಟ್ಟಡಗಳು ...	49,000
(h)	ಚಿಕ್ಕದೇವರಾಯ ಸಾಗರದ ಅಣೆಕಟ್ಟನ್ನು ಪುನಃ ಕಟ್ಟುವದು ...	60,000
(i)	ಮಾರಿಕಣಿವೆ ಕೆರೆ	3,00,000
(j)	ಅಚ್ಚು ಯಂತ್ರಗಳು	30,000
(k)	ರಾಜ್ಯಭಾರವಹನಮಹೋತ್ಸವದ ಮತ್ತು ದೇಹಲಿ ಪ್ರಯಾಣದ ಖರ್ಚುಗಳು...	1,63,000
(l)	ಕಲ್ಕತ್ತಾವಿನಲ್ಲಿ ಚಕ್ರವರ್ತಿನಿಯವರ ಸ್ಮಾರಕಕಾರ್ಯಕ್ಕಾಗಿ ಕೊಟ್ಟ ಹೆಚ್ಚು ಚಂದಾ	1,50,000
(m)	ಪ್ಲೇಗು ಖರ್ಚು	1,00,000
	ಒಟ್ಟು ...	23,18,500

ಲೋಕಲ್‌ಫಂಡುಗಳ ನಾನಾಬಾಬುಗಳ ಆದಾಯವ್ಯಯಗಳನ್ನು ಇದಕ್ಕೆ ಸೇರಿಸಿರುವ ಪಟ್ಟಿಯಲ್ಲಿ ತೋರಿಸಿದೆ. ಅವುಗಳ ವಿಷಯವಾಗಿ ಇಲ್ಲಿ ಏನೂ ಹೇಳತಕ್ಕ ಪ್ರಕೃತವಿಲ್ಲ.

ಮೈಸೂರು ಸಂಸ್ಥಾನದ ಒಟ್ಟು ಆದಾಯ ವ್ಯಯವನ್ನು ನೋಡುವಲ್ಲಿ, ಮಹಾರಾಜರವರು ಪ್ರಾಪ್ತ

	1903	1881
ಜಮೀನ್ ಕಂದಾಯ	18,13,000	14,01,966
ಜಂಗಲು	4,86,000	2,23,071
ಆಬ್ಕಾರಿ	3,22,000	31,000
ಸಾಯರು	15,000	15,260
ಸ್ಟಾಂಪು	27,000	14,083
ಒಟ್ಟು...	26,63,000	16,85,985

ವಯಸ್ಕರಾಗುವದಕ್ಕೆ ಪೂರ್ವ 7 ವರ್ಷ ಕಾಲವಲ್ಲಿ, ಮೆ॥ ಕೇನಿಂಗ್‌ಹಾಂಕರವರ ಲೆಕ್ಕದ ಪ್ರಕಾರ, ನಿವ್ವಳ ಆದಾಯವು 8 ಲಕ್ಷದಷ್ಟಾಯಿತು. ರೀಜನ್ಸಿಯ ಕಡೆಯ ವರ್ಷಾಂತ್ಯದವರೆಗೆ ಕಾವೇರೀ ವಿದ್ಯುಚ್ಛಕ್ತಿ ಸ್ಥಾಪನೆಗಾಗಿ ಆದ 26 ಲಕ್ಷ ರೂಪಾಯಿ ಖರ್ಚಲ್ಲದೆ ಸಾಮಾನ್ಯ ವ್ಯಯವು ಸುಮಾರು 21 ಲಕ್ಷದಷ್ಟು ಹೆಚ್ಚಾಯಿತು. ಬ್ರಿಟಿಷ್ ಸರ್ಕಾರಕ್ಕೆ ಪ್ರತಿ ವರ್ಷವೂ ಸಲ್ಲತಕ್ಕ 10½ ಲಕ್ಷ ರೂಪಾಯಿ ಹೆಚ್ಚು ಪೊಗದಿಯನ್ನು 1881—82 ರಿಂದ 1895—96 ನೆಯ ವರ್ಷದವರೆಗೆ—ಎಂದರೆ 15 ವರ್ಷಕಾಲ—ಬ್ರಿಟಿಷ್ ಸರ್ಕಾರದವರು ತೆಗೆದುಕೊಳ್ಳದೆ ಮನ್ನಿಸಿದ್ದರಿಂದ, ರೀಜನ್ಸಿಗೆ ಪೂರ್ವ, ಮೈಸೂರು ಸರ್ಕಾರದಲ್ಲಿ ಭಾರಿ ಶಿಲ್ಕು ಉಳಿಯುವದಕ್ಕೆ ಕಾರಣವಾಯಿತು. ಪ್ರಕೃತ ಸ್ಥಿತಿಯಲ್ಲಿ ಸಾಮಾನ್ಯ ಬಾಬುಗಳಿಂದ ಹುಟ್ಟುವಳಿಯಾಗುವ ವಾರ್ಷಿಕಾದಾಯವು, ಕಂದಾಯದ ವಸೂಲಾತಿಗಾಗಿ ಆಗುವ 26½ ಲಕ್ಷ ರೂಪಾಯಿ ಖರ್ಚು ಸೇರಿ, ಅತ್ಯಂತ ಮಪಕ್ಷ ಸುಮಾರು 180 ಲಕ್ಷದಷ್ಟಾಗುತ್ತದೆ. ಇದಕ್ಕೆ ಪ್ರತಿಯಾಗಿ 1881ನೆಯ ವರ್ಷದಲ್ಲಿ ಸಾಮಾನ್ಯಾದಾಯವು 107½ ಲಕ್ಷವಾಗಿಯೂ ವಸೂಲಾತಿ ಖರ್ಚು 17 ಲಕ್ಷವಾಗಿಯೂ ಇದ್ದವು.

ಇನ್ನುಮುಂದೆ, ಜಮೀನ್ ಕಂದಾಯದ ಬಾಬಿನಲ್ಲಿ ತರಿ ಮತ್ತು ಖುಷ್ಕಿ ವ್ಯವಸಾಯಗಳು ಹೆಚ್ಚುವದರಿಂದಲೂ, ನಾಯಿದೆ ಕಳೆದ್ದರಿಂದ ಪುನಃ ಮಾಡಬೇಕಾಗಿಬಂದ ಸರ್ವೆ ಸೆಟಲ್‌ಮೆಂಟಿನಿಂದಲೂ, ಸರ್ಕಾರದ ಹುಟ್ಟುವಳಿಯು ಸ್ವಲ್ಪಮಟ್ಟಿಗೆ ಹೆಚ್ಚಬಹುದಾದರೂ, ಈ ಬಾಬಿನಲ್ಲಿ ಮುಖ್ಯತಮವಾದ ಜಮೀನ್ ಕಂದಾಯದ ಹುಟ್ಟುವಳಿಯು ಕೆಲವು ಕಾಲದವರೆಗೆ ವಿಶೇಷವಾಗಿ ಹೆಚ್ಚುವ ಸಂಭವವಿಲ್ಲ. ಇದಕ್ಕೆ ಎರಡನೆಯದಾದ ಆಬ್ಕಾರಿ ಹುಟ್ಟುವಳಿಯೂಕೂಡ ಈಗ್ಗೆ ಕೆಲವು ಕಾಲದಿಂದ ಹೆಚ್ಚುತ್ತಬಂದು ಜಮೀನ್ ಕಂದಾಯದ ಹುಟ್ಟುವಳಿಯಂತೆಯೇ ಸುಮಾರಾಗಿ ಒಂದು ಸ್ತಿಮಿತಕ್ಕೆ ಬಂದಿದೆ. ಈ ಇಲಾಖೆಯನ್ನು ಸರಿಯಾದ ಸ್ಥಿತಿಯಲ್ಲಿಟ್ಟುಕೊಂಡು ಈ ಬಾಬಿನ ಉತ್ಪತ್ತಿಯನ್ನು ಇಷ್ಟಕ್ಕೆ ನಿಲ್ಲಿಸಿಕೊಂಡರೇ ಸಾಕಾಗಿರುತ್ತದೆ. ಇನ್ನು ಜಂಗಲ್, ಸ್ಟಾಂಪು ಇವೇ ಇಲ್ಲಿ ವಿಚಾರಿಸತಕ್ಕ ಉಳಿದ ಆದಾಯದ ಬಾಬುಗಳಾಗಿವೆ. ಕಂದಾಯದ ಹುಟ್ಟುವಳಿಯಂತೆಯೇ ಸ್ಟಾಂಪಿನ ಹುಟ್ಟುವಳಿಯೂ ಕೂಡ ವ್ಯವಸಾಯದಿಂದ ಉಂಟಾಗುವ ಫಲಕ್ಕೆ ಅನುರೂಪವಾಗಿರುವದರಿಂದ, ಈ ಹುಟ್ಟುವಳಿಯೂ ಪ್ರಾಯಶಃ ಕ್ಲಿಪ್ತವಾಗಿದೆಯೆಂದು ಭಾವಿಸಬಹುದು. ಜಂಗಲ್‌ಬಾಬಿನಲ್ಲಿ ಮುಖ್ಯತಮವಾದ ಭಾಗವು ಗಂಧದ ಮರದಿಂದ ಉತ್ಪತ್ತಿಯಾಗುತ್ತದೆ. ಈ ಹುಟ್ಟುವಳಿಯು, ಚೀನಾ ದೇಶಕ್ಕೂ ಜಪಾನಿಗೂ ಯುದ್ಧವಾದಕಾಲದಲ್ಲಿ ಕಂಡುಬಂದಹಾಗೆ, ಯೂರೋಪಿನಲ್ಲಿಯೂ ಚೀನಾದಲ್ಲಿಯೂ ಗಂಧದ ಮರಕ್ಕೆ ಗಿರಾಕಿ ಬಂದಹಾಗೆಲ್ಲಾ ವ್ಯತ್ಯಾಸವಾಗುತ್ತದೆ. ಗಂಧದಮರವಲ್ಲದೆ ಚಾಬೀನಿಯೇ ಮೊದಲಾದ ಇತರ ಜಂಗಲುತ್ಪತ್ತಿಗಳಿಂದ ಆಗುವ ಹುಟ್ಟುವಳಿಯನ್ನು ಕ್ರಮವಾಗಿ ಅಭಿವೃದ್ಧಿಪಡಿಸುವದಕ್ಕೂ ಈಗ ಇರುವ ಜಂಗಲ ಸಂಪತ್ತು ಪೋಲಾಗದಂತೆ ನೋಡಿಕೊಂಡು ಮುಂದೆ ಅದನ್ನು ಅಭಿವೃದ್ಧಿ ಮಾಡುವದಕ್ಕೂ ಪ್ರಕೃತದಲ್ಲಿ ಕ್ರಮವಾದ ಪ್ರಯತ್ನಗಳನ್ನು ಮಾಡುತ್ತಿರುವದರಿಂದ ಜಂಗಲಿನ ಹುಟ್ಟುವಳಿಯು ಈಗ ಇರುವ ಸ್ಥಿತಿಯಲ್ಲಿಯೇ ನಿಲ್ಲಬಹುದು.

ಚಿನ್ನದ ಗಣಿಗಳಿಂದ ಉತ್ಪತ್ತಿಯಾಗುವ ರಾಜಾಯವು ಅಲ್ಲಿನ ಅದುರಿನಲ್ಲಿ ದೊರಕುವ ಚಿನ್ನಕ್ಕೆ ಅನುಗುಣವಾಗಿರುತ್ತದೆ. ಗಣಿಗಳ ಸಂಗತಿಯನ್ನು ತಿಳಿದವರು ಮಾಡಿದ ಅಂದಾಜು ಸರಿಯಾದ ಪಕ್ಷಕ್ಕೆ, ಈ ಬಾಬಿನ ವರಮಾನವು ಕನಿಷ್ಠಪಕ್ಷ ಇನ್ನು ಕೆಲವು ವರ್ಷಗಳವರೆಗಾದರೂ ಕಡಿಮೆಯಾಗದೆ ಇರಬಹುದು. ಆದರೆ, ನಾನು ಕಳೆದ ಉಪನ್ಯಾಸದಲ್ಲಿ ಸೂಚಿಸಿದಂತೆ, ಅದುರಿನ ಗುಣವು ಇನ್ನೂ ಕ್ಷೀಣಸ್ಥಿತಿಯಲ್ಲಿಯೇ ಇದೆ. ಆದರೂ ಹಿಂದಿನ ವರ್ಷಕ್ಕಿಂತ ಹೆಚ್ಚಾಗಿ ಅದುರನ್ನು ಉಪಯೋಗಿಸಿದ್ದೇ 1902-03 ರಲ್ಲಿ ಹೆಚ್ಚು ಬೆಲೆಬಾಳುವ ಚಿನ್ನದ ಉತ್ಪತ್ತಿಗೆ ಕಾರಣವಾಗಿದೆ. ಕಾವೇರೀ ವಿದ್ಯುಚ್ಛಕ್ತಿಯಿಂದ ವರ್ಷವೊಂದಕ್ಕೆ 12 ಲಕ್ಷಕ್ಕೆ ಕಡಿಮೆಯಿಲ್ಲದೆ ಹುಟ್ಟುವಳಿಯಾಗುತ್ತದೆ. 1905ರಲ್ಲಿ ಎರಡನೆಯ ಶಕ್ತಿಸ್ಥಾಪನೆಯು ಮುಗಿಯುವ ಕಾರಣ ಅಲ್ಲಿಂದ ಮುಂದೆ ಈ ವರಮಾನವು 17 ಲಕ್ಷಕ್ಕೆ ಏರುತ್ತದೆ.

ವ್ಯಯದ ವಿಷಯವಾಗಿ ವಿಚಾರವಾಡುವಲ್ಲಿ, ಅವಶ್ಯಕಬಿದ್ದಾಗ ಕಡಿಮೆಮಾಡುವುದಕ್ಕಾಗದ ಮತ್ತು ನಿಯತವ್ಯಯವೆಂದು ಪರಿಗಣಿಸ ಬಹುದಾದ ವ್ಯಯವು, 1881ರಲ್ಲಿ ಸುಮಾರು 58 ಲಕ್ಷವಿದ್ದದ್ದು ಈಗ $95\frac{1}{4}$ ಲಕ್ಷದಷ್ಟಾಗಿದೆಯೆಂದು ತಿಳಿಯಬರುತ್ತದೆ. ಈ ಹೆಚ್ಚು ವ್ಯಯವು ಸ್ವಲ್ಪಮಟ್ಟಿಗೆ ಪ್ರೋಗದಿ, ಇತರ ಅಲೋವೆನ್ಸುಗಳು, ಅರಮನೆ ಖರ್ಚು ಮೊದಲಾದವುಗಳ ಆಧಿಕ್ಯದಿಂದಲೂ ಸ್ವಲ್ಪ ಮಟ್ಟಿಗೆ ಜಮೀನು ಕಂದಾಯದ ವಸೂಲಿ ಖರ್ಚಿನ ಆಧಿಕ್ಯದಿಂದಲೂ, ಉಂಟಾಗಿದೆ. 8 ಲಕ್ಷ ರೂಪಾಯಿಗಿಂತ ಸ್ವಲ್ಪ ಹೆಚ್ಚಾಗಿ ಆಗುತ್ತಿರುವ ಈ ವಸೂಲಿಖರ್ಚನ್ನು, 1881ರಲ್ಲಿ ಆಗುತ್ತಿದ್ದ ವಸೂಲಿ ಖರ್ಚಿನೊಡನೆ ಹೋಲಿಸಿ ನೋಡಿದರೆ, ಒಟ್ಟು ವರಮಾನವು 72 ಲಕ್ಷ ಹೆಚ್ಚಿದ್ದರೂ ಇದು ಅದಕ್ಕೆ ಅನುಗುಣವಾಗಿ ಹೆಚ್ಚಿಲ್ಲವೆಂಬುದು ವ್ಯಕ್ತವಾಗುತ್ತದೆ.

		1881.	1903.
ಪ್ರೋಗದಿ	.. ..	24,50,000	35,00,000
ಅರಮನೆಯ ಖರ್ಚು	..	10,38,986	14,00,000
ರಾಜಬಂಧುಗಳಿಗೆ ಪೆನ್ಷನ್	..	..	2,40,000
ಪೊಲಿಟಿಕಲ್ ಪೆನ್ಷನ್	..	58,933	86,315
ನೀರುಸರದಿ ಮತ್ತು ಇತರ ಖಾಯಂ ಬಾಬುಗಳು	..		2,44,737
ಜಮೀನು ಕಂದಾಯ	..	14,01,966	17,11,534
ಸ್ಟಾಂಪು	.. ..	1	27,400
ಆಬ್ಕಾರಿ	.. ..	31,605	3,26,312
ಸಾಯರು	.. ..	15,260	14,146
ಜಂಗಲು	..	2,23,071	4,80,137
ಮುಜರಾಯಿ	.. ..	2,69,763	3,25,094
ವಯಸ್ಸುಕಳೆದವರಿಗೆ ಪೆನ್ಷನ್	..	2,65,456	3,66,026
ಸದರ್ನ ಮರಾಟ ರೇಲ್ವೆ ಕಂಪೆನಿಯವರಿಂದ ತೆಗೆದುಕೊಂಡಿರುವ ಸಾಲದ ಬಡ್ಡಿ	..	..	7,00,000
ಜುಮ್ಲಾ....		57,69,123	95,21,701

ಅತ್ಯವಶ್ಯಕವಾದಾಗ ಕಡಿಮೆ ಮಾಡಬಹುದಾದ ಇತರ ಬಾಬುಗಳ ಒಟ್ಟು ಖರ್ಚು 1881ರಲ್ಲಿ ಸುಮಾರು 39 ಲಕ್ಷವಿದ್ದದ್ದು ಈಗ ಸುಮಾರು 88ಲಕ್ಷದಷ್ಟಾಗಿದೆ. ಈ ವಿಶೇಷವಾದ ಖರ್ಚುಗಳು ಪ್ರಜೆಗಳಿಗೆ ಅತ್ಯುಪಯುಕ್ತವಾದ ವೈದ್ಯ, ವಿದ್ಯಾಭ್ಯಾಸ, ಮರಾಮ್ಮತ್ತು, ಪೊಲೀಸು, ಲಾ ಮತ್ತು ಜಸ್ಟಿಸ್ ಇಂಥವುಗಳಿಗೆ ಸಂಬಂಧಪಟ್ಟವೆ. ಈ ಇಲಾಖೆಗಳಲ್ಲಿ ಆಗುವ ಖರ್ಚನ್ನು ಕಡಿಮೆ ಮಾಡಿದರೆ, ಇದುವರೆಗೂ ಆಗಿರುವ ದೇಶಾಭಿವೃದ್ಧಿಗೆ ಪ್ರಬಲವಾದ ಪ್ರತಿ ಬಂಧಕವನ್ನುಂಟು ಮಾಡಿದಂತಾಗುತ್ತದೆ. ಮಿಲಿಟೆರಿ ಇಲಾಖೆಯ ಖರ್ಚು ಅನೇಕವಾಗಿ ರಾಷ್ಟ್ರೀಯ ಸಹಾಯ ಸೈನ್ಯಕ್ಕೂ ಯುದ್ಧ ಸಾಮಗ್ರಿವಾಹಕ ಸೈನ್ಯಕ್ಕೂ ಸಂಬಂಧಪಟ್ಟಿರುವದರಿಂದ ಈ ಬಾಬಿನಲ್ಲಿ ಖರ್ಚನ್ನು ಕಡಿಮೆ ಮಾಡಲಾಗುವ ವಿಷಯವು ಸಂದೇಹಾಸ್ಪದವಾಗಿದೆ. ಆದಕಾರಣ ಒಟ್ಟು ಖರ್ಚನ್ನು ಕಡಿಮೆ ಮಾಡಬಹುದಾದ ಭಾಗವು ಅತಿಮಿತವಾಗಿಯೇ ಇದೆ. ಯದ್ಯಪಿ ಮಳೆಬೆಳೆಗಳು ಸರಿಯಾಗಿ ನಡೆಯದೆ ಸಂಸ್ಥಾನದ ಹುಟ್ಟುವಳಿಯು ಕಡಿಮೆಯಾದಾಗ ಮಾತ್ರವೇ ಈ ಇಲಾಖೆಗಳ ಖರ್ಚನ್ನು ಹೀಗೆ ಕಡಿಮೆ ಮಾಡಬೇಕಾಗುತ್ತದೆ. ಹಾಗೆ ಕಡಿಮೆ ಮಾಡಿದಲ್ಲಿ, ಅಂಥ ಅವಶ್ಯಕತೆಯು ತಪ್ಪಿ ಹೋದಮೇಲೆಯೂ ಕೂಡ, ಅನೇಕ ಕಾಲದವರೆಗೂ, ಆಯಾ ಇಲಾಖೆಗಳ ಕಾರ್ಯ ನಿರ್ವಾಹ ಸಾಮರ್ಥ್ಯವು ಕುಗ್ಗಿ ಹೋಗಿ ಬಹಳ ಹಾನಿಗೆ ಕಾರಣವಾಗುತ್ತದೆ.

		1881.	1902—03.
[illegible] ಪೆನ್ಷನ್	...	23,528	78,916
ರಾಜ್ಯಭಾರದ ಮೇಲ್ವಿಚಾರಣೆ ಸಿಬ್ಬಂದಿ	...	4,35,151	4,97,113
ಲಾ ಮತ್ತು ಜಸ್ಟಿಸ್	..	5,35,582	10,14,234
ಪೊಲೀಸು	..	4,44,549	10,11,377
ವಿದ್ಯಾಭ್ಯಾಸ	..	1,35,628	6,90,288
ವೈದ್ಯ	..	1,45,407	4,92,447
ಶಾಸ್ತ್ರೀಯ	..	89,659	2,85,825
ಮರಾಮ್ಮತ್ ಇಲಾಖೆ	...	10,70,702	26,87,725
ಸೈನ್ಯ	..	7,59,850	14,42,522
ಅಮೃತಮಹಲ್	..	..	31,799
ಚಿನ್ನದ ಗಣಿ	..	...	13,245
ಇತರ ಬಾಬುಗಳು	..	2,37,911	5,59,118
ಒಟ್ಟು....		38,77,967	88,04,609

ಶೇಕದಾರಿಯನ್ನು ಉತ್ತಮಸ್ಥಿತಿಗೆ ತರಬೇಕಾದ್ದು ಅತ್ಯವಶ್ಯಕವಾಗಿರುವದರಿಂದ ಲ್ಯಾಂಡ್ ರೆವಿನ್ಯು ಇಲಾಖೆಯಲ್ಲಿ ಆಗಬೇಕಾದ ಕೆಲವು ಹೆಚ್ಚು ಖರ್ಚುಗಳನ್ನು ಬಹಳಕಾಲ ತಳ್ಳುವುದಕ್ಕಾಗುವದಿಲ್ಲವೆಂಬ ವಿಷಯವನ್ನು ನೆನಪಿನಲ್ಲಿಡಬೇಕು. ಒಂದೆರಡು ಇತರ ಇಲಾಖೆಗಳಲ್ಲಿಯೂ ಕೂಡ ಈರೀತಿಯಾಗಿ ಅಭಿವೃದ್ಧಿ ಮಾಡಬೇಕಾಗಿದೆ. ಕಳೆದ ವರ್ಷದ ಉಪನ್ಯಾಸದಲ್ಲಿ ನಾನು ಸೂಚಿಸಿದ ಇರ್ರಿ

ಗೇಷನ್ ಕಮಿಟಿಯವರ ಕೆಲಸವು ಪೂರ್ತಿಯಾಗಿ ಅವರ ರಿಪೋರ್ಟು ಸರ್ಕಾರದವರ ಪರ್ಯಾಲೋಚನೆಯಲ್ಲಿರುವದರಿಂದ ಕೆರೆಯೇ ಮೊದಲಾದ ನೀರಾವರಿ ಕೆಲಸಗಳ ರಕ್ಷಣೆಗಾಗಿ ಹೆಚ್ಚು ಹಣವನ್ನು ಕೊಡಬೇಕಾದ ಅವಶ್ಯಕತೆಯೂ ಕ್ಷಿಪ್ರದಲ್ಲಿಯೇ ಪ್ರಾಪ್ತವಾಗುತ್ತದೆ. ಮಲೆನಾಡು ಅಡಕೆಯ ಮೇಲಿನ ಸಾಯರ್ ಕಂದಾಯವು ಬಹಳ ಹಿಂಸೆಯನ್ನು ಮಾಡುವದೆಂದು ಫಿರ್ಯಾದು ಬಂದಿದ್ದಾಗ್ಯೂ ಅದರ ವಿಷಯದಲ್ಲಿ ಸದ್ಯಃ ಏನು ಮಾಡಲು ಸಾಧ್ಯವೋ ಅದನ್ನು ಪ್ರಕೃತದಲ್ಲಿ ತಿಳಿಸುವದು ಸೂಕ್ತವಾಗಿ ತೋರುವದಿಲ್ಲ. ಈಗಿರುವ ತೆರಿಗೆಯನ್ನು ಕಡಿಮೆ ಮಾಡಬೇಕಾದ್ದು ಅವಶ್ಯಕವೆಂದು ತಿಳಿಸುವದಕ್ಕಾಗಿ, ಮಾತ್ರವೇ ಇಲ್ಲಿ ಅದರ ವಿಷಯವಾಗಿ ಪ್ರಸ್ತಾಪಿಸಲಾಯಿತು. ಮುಂದೆ ವಿವರಿಸುವಮೇರೆ ವಿದ್ಯಾಭ್ಯಾಸಕ್ಕೂ ಕೂಡ ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಪಾಳು ನಿವೇಶನಗಳು ಮತ್ತು ಮನೆ ಕಟ್ಟದೆ ನಿಂತಿರುವ ನಿವೇಶನಗಳು ಇವುಗಳ ತೆರಿಗೆಯ ವಿಷಯವು ವ್ಯವಸ್ಥೆಯಾದ ಬಳಿಕ ಆ ಬಾಬಿನ ಹುಟ್ಟುವಳಿಯು ಸ್ವಲ್ಪ ಕಡಿಮೆಯಾಗುತ್ತದೆ.

ಈ ಸನ್ನಿವೇಶದಲ್ಲಿ, ಸಾಧಾರಣವಾದ ಖರ್ಚುಗಳಲ್ಲಿ ಯಥೋಚಿತವಾಗಿ ಮಿತವಾಗಿದ್ದುಕೊಂಡು, ಹೆಚ್ಚು ಖರ್ಚಿನ ಬಾಬುಗಳಿಗೆ ವಿಶೇಷಜಾಗರೂಕತೆಯಿಂದ ಪ್ರವೇಶಮಾಡುವದೇ ಅತ್ಯುತ್ತಮವಾದ ಮಾರ್ಗವೆಂದು ತೋರುತ್ತದೆ. ಪ್ರಕೃತದಲ್ಲಿ ನಡೆಯುತ್ತಿರುವ ಭಾರಿ ಕೆಲಸಗಳು ಪೂರ್ತಿಯಾದತರುವಾಯ, ಚಿನ್ನದಗಣಿಯ ರಾಜಾಯ, ವೈದ್ಯುತಶಕ್ತಿಯ ವಿಕ್ರಯ, ಚಿನ್ನದಗಣಿಯ ನೀರುಸರಬರಾಯಿ ಇವೇ ಮೊದಲಾದ ನಿಯತವಲ್ಲದ ಬಾಬುಗಳಿಂದ ಉತ್ಪತ್ತಿಯಾಗುವ ಹಣವನ್ನು, ಸಂಸ್ಥಾನಕ್ಕೆ ನಿಯತವಾಗಿ ಹೆಚ್ಚು ಹುಟ್ಟುವಳಿಯನ್ನು ಕೊಡುವ ಕಾರ್ಯಗಳಲ್ಲಿ ವಿನಿಯೋಗಿಸುವದೇ ನಮ್ಮ ಉದ್ದೇಶವಾಗಿರಬೇಕು. ಸಾಲ ತೆಗೆದುಕೊಳ್ಳುವ ಶಕ್ತಿಯು ನಮಗೆ ಬಹು ಮಿತವಾಗಿದೆಯೆಂಬ ಅಂಶವು ತಮಗೆಲ್ಲರಿಗೂ ತಿಳಿದೇ ಇದೆ. ಹೊಸತೆರಿಗೆ ಹಾಕುವ ವಿಷಯದಲ್ಲಿ, ಸಾಮಾನ್ಯವರ್ಷಗಳಲ್ಲಿ ನಾವು ಪ್ರಯತ್ನಿಸದಿರುವದೇ ಒಳ್ಳೆಯದು; ಕ್ಷಾಮಪ್ರಾಪ್ತವಾದ ಕಾಲದಲ್ಲಂತೂ ಅದನ್ನು ಶುದ್ಧಾಂಗವಾಗಿ ಬಿಟ್ಟೇ ಬಿಡಬೇಕು. ಆದಪ್ರಯುಕ್ತ, ಇಂಡಿಯಾದೇಶದ ಇತರ ಭಾಗಗಳಲ್ಲಿ ಪ್ರಾಪ್ತವಾಗುವಂತೆಯೇ, ಇಲ್ಲಿಯೂ ಅಡಿಗಡಿಗೆ ಪ್ರಾಪ್ತವಾಗುತ್ತಿರುವ ಕ್ಷಾಮ ಮತ್ತು ಪ್ಲೇಗು ಮೊದಲಾದ ಕಷ್ಟಗಳನ್ನು ನಿವಾರಣೆಮಾಡುವದಕ್ಕಾಗಿ, ಯಾವವಿಧವಾದ ಸಾಲಕ್ಕೂ ಈಡಾಗದೆಯೂ ಸುಮಾರು ಒಂದುಕೋಟಿಗೆ ಕಡಮೆಯಾಗದೆಯೂ ಇರುವ ಮೂಲಧನವೂ, ವರ್ಷಾದಿಯಲ್ಲಿ ಖರ್ಚಿಗೆ ಒದಗುವಹಾಗೆ 75 ಲಕ್ಷರೂ[illegible] ಸಿಲ್ಕೂ ಇದ್ದರೆ, ನಮ್ಮ ಸಂಸ್ಥಾನದ ಆದಾಯವ್ಯಯವು ನಿರಪಾಯವಾದ ದೃಢವಾದ ಸ್ಥಿತಿಯಲ್ಲಿ ನಿಲ್ಲ[illegible]ವು.

ವ್ಯವಸಾಯ, ಕೈಗಾರಿಕೆ ಮತ್ತು ವ್ಯಾಪಾರ.—ಈವರ್ಷ ಮಹಾರಾಜರವರ ಪರಾಂಬರಿಕೆಗೆ ತಂದ ಮುಖ್ಯ ವಿಷಯಗಳು ಯಾವವೆಂದರೆ—ಸರ್ವೆಸೆಟಲ್ಮೆಂಟಿನ ಪುನರ್ವಿಮರ್ಶೆ, ಕಾಫೀ ವ್ಯವಸಾಯದ ಪುನರುಜ್ಜೀವನ ವ್ಯವಸಾಯಬ್ಯಾಂಕುಗಳ ಅತೃಪ್ತಿಕರವಾದ ಆಡಳಿತ, ಕೃಷಿರಸಾಯನಜ್ಞರನ್ನು ಇನ್ನು ಕೆಲವು ಕಾಲ ಇಟ್ಟುಕೊಂಡದ್ದು, ರೇಷ್ಮೆ ಪೈರಿನ ಅಭಿವೃದ್ಧಿ—ಇವೇ.

ರಿವಿಜನ್ ಸೆಟಲ್‌ಮೆಂಟ್.—ಅನೇಕ ತಾಲ್ಲೂಕುಗಳಲ್ಲಿ ಮೂವತ್ತು ವರ್ಷದ ಮಾಯಿದೆ ಕಳೆದುಹೋದ್ದರಿಂದ ಪುನಃ ಸೆಟಲ್ಮೆಂಟನ್ನು ಉಪಕ್ರಮಿಸಬೇಕೆಂದು 1900 ರಲ್ಲಿ ಹುಕುಂ ಮಾಡಲಾಯಿತು. ಹೀಗೆ ಪುನಃ ಆರಂಭಿಸಿದ ಸರ್ವೆಯಲ್ಲಿ ಬಹಳ ಕೆಲಸ ನಡೆದಿದೆ. ಕಳೆದ ವರ್ಷದಲ್ಲಿ 1,778 ಚದರಮೈಲಿ ಅಳತೆಯ 60,000 ಜಮೀನುಗಳುಳ್ಳ 830 ಗ್ರಾಮಗಳನ್ನು ಸರ್ವೆ ಮಾಡಲಾಯಿತು—ಎಂದರೆ ಚಳ್ಳಕೆರೆ, ಮೊಳಕಾಲ್ಮುರು, ಮಾಜಿ ಬೂದಿಹಾಳು ತಾಲ್ಲೂಕುಗಳಲ್ಲಿ ಪೂರ್ತಿಯಾಗಿಯೂ, ಚೆನ್ನಗಿರಿ ತಾಲ್ಲೂಕಿನಲ್ಲಿ ಬಹಳ ಭಾಗದಲ್ಲಿಯೂ, ಸೊರಬ ಪಾವಗಡ ಮತ್ತು ಸೀರಾ ತಾಲ್ಲೂಕುಗಳಲ್ಲಿ ಕೆಲವು ಭಾಗಗಳಲ್ಲಿಯೂ, ಪುನಃ ಸರ್ವೆ ನಡೆಯಿತು.

ದಾವಣಗೆರೆ ಮತ್ತು ಹಿರಿಯೂರು ತಾಲ್ಲೂಕುಗಳಲ್ಲಿ ಕಂದಾಯದ ಹೊಸದರಗಳನ್ನು ಮುಂದಿನ ಚಳಿಗಾಲದಲ್ಲಿ ಪ್ರಕಟಿಸುವುದಾಗಿ ಸರ್ಕಾರದವರು ಮಂಜೂರ್ಮಾಡಿದಾರೆ. ಮೊದಲಸಲದ ಸರ್ವೆ ಜಮಾಬಂದಿಯಲ್ಲಿ ಮಾಡಿದ ಜಮೀನಿನ ತರಗತಿಯ ವಿಭಾಗವೇ ಬಹಳ ತೃಪ್ತಿಕರವಾಗಿದ್ದದ್ದರಿಂದ ಪುನಃ ತರಗತಿ ವಿಭಾಗದ ಅವಶ್ಯಕತೆಯಿಲ್ಲದೇ ಇದ್ದದ್ದು ವಿಶೇಷವಿಷಯವಾಗಿದೆ. ಈ ಸಂಗತಿಯು ಸರ್ಕಾರದವರಿಗೆ ತೃಪ್ತಿಕರವಾಗಿಯೂ ಕರ್ನಲ್ ಗ್ರಾಂಟ್ ಸಾಹೇಬರವರಿಗೆ ಯಶಸ್ಕರವಾಗಿಯೂ ಇದೆ. ಕರ್ನಲ್ ಗ್ರಾಂಟ್ ಸಾಹೇಬರವರು ಪ್ರಥಮಸೆಟಲ್ಮೆಂಟಿನಲ್ಲಿ ಅನ್ವಯಿಸಿದ್ದು, 30 ವರ್ಷಗಳಿಗೆ ಮೀರಿದಷ್ಟು ದೀರ್ಘಕಾಲಾನಂತರ ಈಗ ರಿವಿಜನಿಗೆ ಸಲಹೆಗಳನ್ನು ಕಳುಹಿಸಿದ್ದು ಈಗಿನ ಇಂಡಿಯಾ ದೇಶದ ಸೆಟಲ್ಮೆಂಟ್ ಚರಿತ್ರದಲ್ಲಿ ಅಪೂರ್ವವಾದ ಸಂಗತಿಯಾಗಿದೆ.

ಬ್ರೇಜಿಲ್ನಲ್ಲೀ ಕಾಫಿ ಪ್ರೋಟಾಪ್ರೋಟಿಯಿಂದಲೂ ಇತರ ಕಾರಣಗಳಿಂದಲೂ ಕಾಫೀ ವ್ಯಾಪಾರವು ಕ್ಷೀಣಸ್ಥಿತಿಗೆ ಬಂದದ್ದರಿಂದ, ಹಿಂದೂ ದೇಶದಲ್ಲೆಲ್ಲಾ ಕಾಫೀ ವ್ಯವಸಾಯಕ್ಕೆ ಕುಂದಕವುಂಟಾಗಿರುವಂಶವು ಎಲ್ಲರಿಗೂ ತಿಳಿದೇ ಇದೆ. ಮೈಸೂರು ಸಂಸ್ಥಾನದಲ್ಲಿ ಕಾಫಿ ವ್ಯವಸಾಯವಾಗುತ್ತಿದ್ದ ಭೂಮಿಯಲ್ಲಿ ಒಟ್ಟು 20,000 ಎಕರೆಯಷ್ಟು ವಿಸ್ತಾರ ಪ್ರದೇಶವು ಕಡಿಮೆಯಾಯಿತು. ಈ ಪೈಕಿ ಈ ವರ್ಷ ಕಡಿಮೆಯಾದ್ದು 2,500 ಎಕರೆಗಳು. ಆದಕಾರಣವೇ, ಉತ್ತರ ಮತ್ತು ದಕ್ಷಿಣ ಮೈಸೂರು ಪ್ಲಾಂಟರ್ ಸಂಘದವರು ಸಭೆಸೇರಿ, ಈ ವಿಷಯವನ್ನು ಚರ್ಚಿಸುವದಕ್ಕಾಗಿ ಮೈಸೂರು ಸರ್ಕಾರದವರ ಪರವಾಗಿ ಒಬ್ಬ ಅಧಿಕಾರಿಯನ್ನು ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳಲು, ಸರ್ಕಾರದವರು ಮನಃಪೂರ್ವಕವಾಗಿ ಒಪ್ಪಿಕೊಂಡು, ಆದಕ್ಕಾಗಿ ಅಲ್ಲಿ ಮಾಡಬೇಕಾದ ಕೆಲಸಗಳನ್ನು ತಿಳಿಸಿ, ಮೆ|| ಮಾಧವರಾವ್, ಸಿ. ಐ. ಇ., ಯವರನ್ನು ಕಳುಹಿಸಿಕೊಟ್ಟರು. ಇವರು ಮೆ|| ಗ್ರಾಹಂ ಅಂಡರ್ಸನ್ ಸಿ. ಐ. ಇ., ಯವರನ್ನೂ ಇತರ ಮುಖಂಡರಾದ ಪ್ಲಾಂಟರುಗಳನ್ನೂ ಕಂಡು, ಕಾಫೀ ವ್ಯವಸಾಯಕ್ಕೆ ಮುಖ್ಯಪ್ರದೇಶಗಳಾದ ಮೂಡಗೆರೆಯಲ್ಲಿಯೂ ಸಕಲೇಶಪುರದಲ್ಲಿಯೂ ಸಭೆಸೇರಿ, ಕಾಫೀ ವ್ಯವಸಾಯದ ಪ್ರಕೃತ ಸ್ಥಿತಿಯನ್ನು ಕುರಿತು ಅವರ ಸಂಗಡ ಪರ್ಯಾಲೋಚನೆ ಮಾಡಿದರು. ಅಲ್ಲಿ ಪರ್ಯಾಲೋಚಿಸಿದ ಮುಖ್ಯ ಸಂಗತಿಗಳು ಯಾವವೆಂದರೆ:— ಪ್ಲಾಂಟರ ಹಕ್ಕುಗಳನ್ನು ರಿಜಿಸ್ಟರ್ ಮಾಡುವದು, ಕಾಫಿ ತೆರಿಗೆಯ ವಸೂಲಿ, ಕಾಫೀ ಕಲಬೆರಕೆಯಾಗದಿರುವಂತೆ ಮಾಡುವ ಉಪಾಯಗಳು, ಇನ್ನು ಕೆಲವು ಇತರ ವಿಷಯಗಳು—ಇವೇ. ಅಲ್ಲಿ, ಕಾಫೀ ಕಳವಿನ ಆಕ್ಟು, ಕೂಲಿಯವರಿಗೆ ಸಂಬಂಧಪಟ್ಟ ಕಾನೂನು, ಇವೂಕೂಡ ಯಥಾಯೋಗ್ಯವಾಗಿ ಆಲೋಚಿಸಲ್ಪಟ್ಟವು. ತಮ್ಮ ಕೃಷಿಯಿಂದ ಈ ಸಂಸ್ಥಾನಕ್ಕೆ ವಿಶೇಷ ಪ್ರಯೋಜನವನ್ನುಂಟುಮಾಡಿದ ಸಾಹಸಿಗಳಾದ ಈ ಕಾಫೀ ಪ್ಲಾಂಟರುಗಳ ಸಂಘದ ವಿಷಯದಲ್ಲಿ ಸರ್ಕಾರದವರು ತಾವು ಅಭಿಮಾನವಿಟ್ಟಿರುವದಾಗಿಯೂ ತಮ್ಮಿಂದಾಗುವ ಸಹಾಯವನ್ನು ಮಾಡುವದಾಗಿಯೂ ಸಂಪೂರ್ಣವಾದ ಭರವಸೆ ಕೊಟ್ಟಿದಾರೆ. 1904ನೆಯ ವರ್ಷದಲ್ಲಿ ಲೂಯಿಸಾನ ಎಂಬಲ್ಲಿ ನಡೆಯುವ ಪರ್ಚೇಸ್ ಎಕ್ಸ್ಪೊಸಿಷನ್ ಎಂಬಸಂತೆಯಲ್ಲಿ ಇಲ್ಲಿಯ ಕಾಫೀ ಮತ್ತು ಏಲಕ್ಕಿಗಳನ್ನು ಪ್ರದರ್ಶನಮಾಡಲು ಸಹಾಯಮಾಡುವದಕ್ಕಾಗಿಸರ್ಕಾರದವರು ಪ್ಲಾಂಟರುಗಳ ಸಂಘಕ್ಕೆ 5,000 ರೂಪಾಯಿ ಕೊಡುವಂತೆ ಈಚೆಗೆ ಮಂಜೂರ್ಮಾಡಿದಾರೆ.

ವ್ಯವಸಾಯದ ಬ್ಯಾಂಕುಗಳು.—ವ್ಯವಸಾಯದ ಬ್ಯಾಂಕುಗಳು ಅತೃಪ್ತಿಕರವಾದ ಸ್ಥಿತಿಯು ಹಿಂದಿನ ಉಪ[illegible]ಸಗಳಲ್ಲಿ ವಿವರಿಸಿದೆ. ಈ ವರ್ಷ, ಸರ್ಕಾರಕ್ಕೆ ಬರಬೇಕಾದ ಕಿಸ್ತುಗಳನ್ನು ಪಾವತಿ ಮಾಡುವದಕ್ಕಾಗಿ ಕ್ಲಿಪ್ತಕಾಲಗಳನ್ನು ವಿಧಿಸಿ, ಹುಕುಂ ಕೊಡಲಾಯಿತು. ಈ ಪ್ರಕಾರ 58,780 ರೂಪಾಯಿ ವಸೂಲಾಯಿತು. ಎಲ್ಲಾ ಬ್ಯಾಂಕುಗಳಿಂದಲೂ ಸರ್ಕಾರಕ್ಕೆ, ಒಟ್ಟು 12,99,523 ರೂಪಾಯಿ ಬಾಕಿ ಬರಬೇಕಾಗಿದೆ. ಚಿಕ್ಕಮಗಳೂರಿನ ಮತ್ತು ಸಕಲೇಶಪುರದ ಕಾಫಿ ಬ್ಯಾಂಕುಗಳಿಗೆ ಆಧಾರವಾಗಿರುವ ಕಾಫಿತೋಟಗಳು ಇತೋಪ್ಯಧಿಕವಾದ ಹೀನಸ್ಥಿತಿಗೆ ಬಾರದಂತೆ ನೋಡಿಕೊಳ್ಳುವದಕ್ಕೋಸ್ಕರ ಮಾಡಬೇಕಾದ ಅಂಶಗಳನ್ನು ಸರ್ಕಾರಕ್ಕೆ ತಿಳಿಸುವದಕ್ಕಾಗಿ ಕಳೆದ ವರ್ಷ ಒಬ್ಬ ಇನ್ಸ್ಪೆಕ್ಟರನ್ನು ನೇಮಿಸಿತು. ಈ ಇನ್ಸ್ಪೆಕ್ಟರವರ ಶಿಫಾರಸ್ಸಿನಮೇರೆ ಅವಶ್ಯಕವಾದ ಮುಂಗಡಗಳನ್ನು ಕೊಡುವದಕ್ಕಾಗಿ 1,10,000 ರೂಪಾಯಿ ಮಂಜೂರ್ಮಾಡಲಾಯಿತು. ಈ ಮೊಬಲಗಿನ ಸರಿಯಾದ ವಿನಿಯೋಗವನ್ನು ನೋಡಿಕೊಳ್ಳುವ ಭಾರವೂ ಕೂಡ ಈ ಇನ್ಸ್ಪೆಕ್ಟರಿಗೇ ಸೇರಿದೆ.

ಈಕೆಲಸಕ್ಕಾಗಿ ಬೇರೆ ಒಬ್ಬ ಅಧಿಕಾರಿಯನ್ನು ನಿಯಮಿಸಲಾಗಿ ಈ ಬ್ಯಾಂಕುಗಳ ಅಭಿವೃದ್ಧಿವಿಷಯದಲ್ಲಿ ಸ್ಥಳೀಯಾಧಿಕಾರಿಗಳಿಗೆ ಅಭಿಮಾನಕಡಿಮೆಯಾಗುವಂತೆ ಕಾಣಬಂದದ್ದರಿಂದ ಶ್ರೀಮನ್ಮಹಾರಾಜರವರ ಸರ್ಕಾರದವರು ವ್ಯವಸಾಯಬ್ಯಾಂಕ್ ಇನ್ಸ್ಪೆಕ್ಟರ್ ಕೆಲಸವನ್ನು ವಜಾಮಾಡಿರುತ್ತಾರೆ.

ಈ ಬ್ಯಾಂಕುಗಳು ದುರದೃಷ್ಟವಶದಿಂದ ಅಭಿವೃದ್ಧಿಗೆ ಬರಲಿಲ್ಲ. ಪ್ರಥಮತಃ ಜನಗಳಲ್ಲಿ ಏಕೀಭವಿಸಿ ಕಾರ್ಯಮಾಡುವ ಗುಣವಿಲ್ಲದ್ದರಿಂದಲೂ ಸಾಲ ತೆಗೆದುಕೊಂಡ ಹಣದ ವಿನಿಯೋಗದ ವಿಷಯದಲ್ಲಿ ಬ್ಯಾಂಕು ಏರ್ಪಡಿಸಿದವರು ಸರಿಯಾಗಿ ನೋಡಿಕೊಳ್ಳದೆ ಹೋದ್ದರಿಂದಲೂ, ಇದುವರೆಗೂ ನೋಡಿದ್ದಲ್ಲಿ, ಈ[illegible]ರ್ಯಾಡು ಸಫಲವಾಗಲಿಲ್ಲವೆಂದು ಹೇಳಬೇಕಾದ್ದಾಗಿದೆ. ಈ ಬ್ಯಾಂಕುಗಳಿಗೆ ಬೇಕಾದ ಎಲ್ಲಾ ಹಣವನ್ನೂ ಸರ್ಕಾರದವರೇ ನೇರಾಗಿ ಕೊಟ್ಟಪ್ರಯುಕ್ತ, ಜನಗಳಲ್ಲಿ, ಸ್ವಸಹಾಯಬುದ್ಧಿಯೂ ಏಕೀಭವಿಸಿ ಕಾರ್ಯಮಾಡುವ ಶಕ್ತಿಯೂ ಕಡಿಮೆಯಾಗುವುದಕ್ಕೆ ಕಾರಣವಾಗಿರಬಹುದು. ಆದಕಾರಣ ಸರ್ಕಾರದವರು ಈ ಬ್ಯಾಂಕುಗಳಿಗೆ ಹೆಚ್ಚು ಮೊಬಲಗನ್ನು ಸಾಲಕೊಡುವ ಸಾಮರ್ಥ್ಯವುಳ್ಳವರಾಗಿದ್ದರೂಕೂಡ ಹಾಗೆ ಕೊಡುವುದು ಸೂಕ್ತವಾಗಿ ತೋರುವುದಿಲ್ಲ. ಇದಕ್ಕೆ ಪ್ರತಿಯಾಗಿ ಸರ್ಕಾರದವರು ಕೆಲವು ಗೊತ್ತಾದ ಸಂದ

ರ್ಭಗಳಲ್ಲಿ ಸಾವಕಾರಿ ಲೇವಣಾತಿಗಳಿಗೆ ತಾವೇ ಜವಾಬ್ದಾರರಾಗಿ ನಿಂತು ಬಾಕಿ ವಸೂಲಾತಿಯಲ್ಲಿಯೂ ಜಮೀನುಗಳ ಬೆಲೆ ಗೊತ್ತು ಮಾಡುವುದರಲ್ಲಿಯೂ ಸಾಲ ತೆಗೆದುಕೊಂಡ ಮೊದಲಿಗನ ಉದ್ದೇಶಾನುಸಾರವಾದ ವಿನಿಯೋಗದಲ್ಲಿಯೂ ಸಾಲಗಾರರ ಮೇಲೆ ಬ್ಯಾಂಕಿಗಿರುವ ಹಕ್ಕನ್ನು ಕ್ಷಿಪ್ರದಲ್ಲಿಯೇ ತೀರ್ಮಾನಮಾಡುವ ಮಾರ್ಗವನ್ನು ಹುಡುಕುವುದರಲ್ಲಿಯೂ ಸಹಾಯಮಾಡಿದಬಳಿಕಲಾದರೂ ಈ ವ್ಯವಸ್ಥೆಗಳು ಸಾವಕಾರಿ ಲೇವಣಾತಿಗಳನ್ನೂ ವ್ಯವಸಾಯ ಕಾರ್ಯಕ್ಕಾಗಿ ಮುಂಗಡದ ಮೊಬಲಗನ್ನೂ ಆಕರ್ಷಿಸುವಪಕ್ಷಕ್ಕೆ ಈ ಬ್ಯಾಂಕುಗಳು ಇಲ್ಲಿಯ ಜನರಲ್ಲಿ ಮಿತವ್ಯಯವನ್ನೂ ಪರಸ್ಪರ ನಂಬಿಕೆಯನ್ನೂ ಸಾಲತೀರಿಸುವ ಶಕ್ತಿಯನ್ನೂ ಪರಸ್ಪರ ಸಹಾಯಮಾಡುವ ಬುದ್ಧಿಯನ್ನೂ ವೃದ್ಧಿಪಡಿಸುವವೆಂದು ಹೇಳಬಹುದು. ಇದು ಬಹಳ ಗೌರವವಾದ ವಿಷಯವಾಗಿದೆ. ಆದ್ದರಿಂದ ಈಗಿರುವ ಬ್ಯಾಂಕುಗಳು ಸಾಧ್ಯವಾದ ಮಟ್ಟಿಗೆ ಒಳ್ಳೆಯ ಸ್ಥಿತಿಗೆ ಬಂದ ಅನಂತರದಲ್ಲಿಯೇ ಮೇಲೆ ವಿವರಿಸಿದ ರೀತಿಯಲ್ಲಿ ಕೆಲಸವನ್ನು ಉಪಕ್ರಮಿಸಬೇಕಾಗುತ್ತದೆ. ಹಣವನ್ನು ಭೂಮಿಯಮೇಲೆಯೂ ಇತರ ಪದಾರ್ಥಗಳ ಮೇಲೆಯೂ ಹಾಕಿ ಮಳೆಬೆಳೆಗಳು ಸರಿಯಾಗಿ ನಡೆಯದಾಗ ಕಷ್ಟಕ್ಕೆ ಸಿಕ್ಕುವ ರೈತರಿಗೆ ಸುಲಭವಾದ ಬಡ್ಡಿಗೆ ಸಾಲವನ್ನು ದೊರಕಿಸಿಕೊಡುವದು ಅತ್ಯವಶ್ಯಕವೆಂಬುದರಲ್ಲಿ ಸಂದೇಹವೇ ಇಲ್ಲ.

ಸಾಮಾನ್ಯ ವ್ಯವಸಾಯಾಭಿವೃದ್ಧಿ.—ರಾಜ್ಯವನ್ನು ವಹಿಸಿಕೊಂಡಂದಿನಿಂದ ರೈತರ ಸ್ಥಿತಿಯು ಏಕರೀತಿಯಾಗಿ ಅಭಿವೃದ್ಧಿಗೆ ಬರುತ್ತಿರುವದರಲ್ಲಿ ಸಂದೇಹವಿಲ್ಲ. ಆದರೂ ಈವಿಷಯದಲ್ಲಿ ಇನ್ನೂ ಮಾಡತಕ್ಕ ಕಾರ್ಯಗಳು ಅನೇಕವಾಗಿವೆ. ರಾಜ್ಯವನ್ನು ವಹಿಸಿಕೊಂಡದ್ದಕ್ಕೆ ಪೂರ್ವ 1875—76ರಲ್ಲಿ ಸರ್ಕಾರದ ಭೂಮಿಯ ಪೈಕಿ ರೈತರ ಹಿಡುವಳಿಯಲ್ಲಿದ್ದ ಜಮೀನಿನ ವಿಸ್ತಾರವು ಹಿಂದಿನವರ್ಷಗಳಲ್ಲಿದ್ದದ್ದಕ್ಕಿಂತ ಬಹಳ ಹೆಚ್ಚಾಗಿತ್ತು—ಎಂದರೆ 42,31,826 ಎಕರೆಯಷ್ಟಿತ್ತು. ಬಳಿಕ ಕ್ಷಾಮದದೆಸೆಯಿಂದ ಹಿಡುವಳಿಯು ಕಡಿಮೆಯಾಗುತ್ತ ಬಂದು 1881—82 ರಲ್ಲಿ, ಕಾಫಿಜಮೀನ್ಹೊರತು, 42,13,505 ಎಕರೆಗಳು ಮಾತ್ರ ಹಿಡುವಳಿಯಲ್ಲಿದ್ದವು. ಅಲ್ಲಿಂದೀಚೆಗೆ, ವ್ಯವಸಾಯವಾಗುವ ಜಮೀನುಗಳು ಏಕರೀತಿಯಾಗಿ ಹೆಚ್ಚುತ್ತಾ ಬಂದಿವೆ. ಈವರ್ಷದ ಜುಲೈ ಗುರ್ರೆಯಲ್ಲಿ ವ್ಯವಸಾಯದಲ್ಲಿದ್ದ ಜಮೀನನ್ನು ಈ[illegible]ಯಲ್ಲಿ ತೋರಿಸಿದೆ.

		1881.
ತರಿ	ಎಕರೆಗಳು.	5,54,554
ಖುಷ್ಕಿ	,,	35,20,687
ಬಾಗಾಯಿತು	,,	1,38,264
	ಒಟ್ಟು...	4?,13,505

			1903. ಎಕರೆಗಳು.
ಖುಷ್ಕಿ	..	..	55'57,331
ತರಿ	...	...	7,98,904
ಬಾಗಾಯಿತು	..	..	2,43,866
		ಒಟ್ಟು..	66,00,101

ರಾಜ್ಯವನ್ನು ವಹಿಸಿದಂದಿನಿಂದೀಚೆ ವ್ಯವಸಾಯದ ಜಮೀನಿನ ವಿಸ್ತಾರವು ನೂರಕ್ಕೆ 56ರಂತೆ ಹೆಚ್ಚಿದೆ. ಕಳೆದವರ್ಷ 98,387 ರೂಪಾಯಿ ಕಂದಾಯವುಳ್ಳ 11,291 ಎಕರೆಗಳು ಹೊಸದಾಗಿ ವ್ಯವಸಾಯಕ್ಕೆ ಬಂದವು. 22,830 ರೂಪಾಯಿ ಕಂದಾಯವುಳ್ಳ 23,428 ಎಕರೆ ಜಮೀನುಗಳು ರಾಜೀನಾಮೆ ಕೊಡಲ್ಪಟ್ಟವು. ಖುಷ್ಕಿಜಮೀನಿನ ನಿವ್ವಳ ಹುಟ್ಟುವಳಿಯು ಎಕರೆ ಒಂದಕ್ಕೆ 12 ರೂಪಾಯಂತೆಯೂ ತರೀಜಮೀನಿನದು 50 ರೂಪಾಯಂತೆಯೂ ಬಾಗಾಯತ್ತಿನದು 80 ರೂಪಾಯಂತೆಯೂ ಆಗುವದಾಗಿ ಪರಿಗಣಿಸಲ್ಪಟ್ಟಿದೆ. ಈ ಅಂದಾಜು ಪ್ರಾಯಶಃ ಸರಿಯಾದ್ದೆಂದು ಇಟ್ಟುಕೊಂಡು, ಸುಮಾರಾಗಿ ಫಸಲು ಬಂದ 1902—3 ನೆಯ ವರ್ಷದ ಬೆಳೆಗೆ ಬೆಲೆಕಟ್ಟಿದರೆ ಆ ವರ್ಷದ ಒಟ್ಟು ಫಸಲಿನ ಬೆಲೆಯು $55,57,331 \times 12 + 7,98,904 \times 50 + 2,43,866 \times 80$ ರೂಪಾಯಿ ಎಂದರೆ $12\frac{1}{2}$ ಲಕ್ಷಕ್ಕೆ ಸ್ವಲ್ಪ ಹೆಚ್ಚಾಗಿ ಆಗುತ್ತದೆ. ರಾಜ್ಯವನ್ನು ವಹಿಸಿಕೊಂಡ ಕಾಲದಿಂದೀಚೆ ವ್ಯವಸಾಯಕ್ರಮದಲ್ಲಿ ಯಾವ ಅಭಿವೃದ್ಧಿಯೂ ಇಲ್ಲದೆ ಹೆಚ್ಚು ಜಮೀನುಮಾತ್ರ ಕೃಷಿಗೆ ಬಂದಿರುವದರಿಂದ, ಎಕರೆ ಒಂದಕ್ಕೆ ಆಗುವ ಉತ್ಪತ್ತಿಯಲ್ಲಿ ಏನೂ ವ್ಯತ್ಯಾಸವಾಗಿಲ್ಲವೆಂದು ಧಾರಾಳವಾಗಿ ಹೇಳಬಹುದು. ಆದ್ದರಿಂದ 1903ನೆಯ ವರ್ಷದ ಹುಟ್ಟುವಳಿಯ ಬೆಲೆಯಿಂದಲೇ 1881ನೆಯ ವರ್ಷದ ಫಸಲಿನ ಒಟ್ಟು ಬೆಲೆಯನ್ನೂ ನಿಶ್ಚಯಿಸಬಹುದು. ಹೀಗೆ ನಿಶ್ಚಯಿಸಿದಲ್ಲಿ ಇದು $35,20,687 \times 12, +$

5,54×50,+1,38,264×80 ರೂಪಾಯಿಗಳು ಎಂದರೆ ಸುಮಾರು $9\frac{1}{2}$ ಕೋಟಿಗಿಂತ ಸ್ವಲ್ಪ ಹೆಚ್ಚಾಗುತ್ತದೆ. 1903ನೆಯ ವರ್ಷದ ಅತ್ಯಧಿಕವಾದ ಬೆಲೆಗಳನ್ನೇ 1881ನೆಯ ವರ್ಷದ ಫಸಲುಗಳಿಗೂ ಕಟ್ಟಿರುವದರಿಂದ ಈ ಗಣನೆಯಲ್ಲಿ ಏನಾದರೂ ತಪ್ಪಿದ್ದರೂಕೂಡ ಅದು ಆವರ್ಷದ ಲೆಕ್ಕಕ್ಕೇ ಅನುಕೂಲವಾಗಿ ಇದೆ.

1901ನೆಯ ಸೆನ್ಸಸಿನ ಪ್ರಕಾರ ರೈತರ ಒಟ್ಟುಸಂಖ್ಯೆ $36\frac{1}{2}$ ಲಕ್ಷವಾದ್ದರಿಂದ ಈ ವರಮಾನವು, ತಲೆ ಒಂದಕ್ಕೆ 35 ರೂಪಾಯಂತೆ ಆಗುತ್ತದೆ. ರೈತರ ಸಂಖ್ಯೆ 33 ಲಕ್ಷವಾಗಿದ್ದ 1881ರಲ್ಲಿ ತಲೆಗೆ ಸುಮಾರು $24\frac{1}{2}$ ರೂಪಾಯಂತೆ ಬಿತ್ತು.

ಆದ್ದರಿಂದ ಒಟ್ಟುಸಾಗುವಳಿ ಜಮೀನು ಹೆಚ್ಚಿದ್ದರಿಂದಲೂ ತರೀ ಸಾಗುವಳಿ ಹೆಚ್ಚಿದ್ದರಿಂದಲೂ ಬೆಲೆಗಳುಹೆಚ್ಚಿದ್ದರಿಂದಲೂ ದೇಶದ ವ್ಯವಸಾಯಸಂಪತ್ತು ಹೆಚ್ಚಾಯಿತೆನ್ನುವದರಲ್ಲಿ ಸಂದೇಹವಿಲ್ಲ. ಒಟ್ಟಿನಲ್ಲಿ ನೋಡಿದರೆ ರೈತರಸ್ಥಿತಿಯು ಒಂದೇರೀತಿಯಾಗಿ ಅಭಿವೃದ್ಧಿಗೆ ಬರುತ್ತಿದೆಯೇ ಹೊರತುಅದಕ್ಕೆ ಯಾವಪ್ರಬಲವಾದ ಪ್ರತಿಬಂಧಕವೂ ಇರುವ ಹಾಗೆ ಕಾಣುವದಿಲ್ಲ. ಕಳೆದ ಹತ್ತುವರ್ಷದ ಜಮೀನು ವರ್ಗಾವರ್ಗಿಯ ಲೆಕ್ಕಗಳೇನೆಂದರೆ :—

	ಕೋರ್ಟು ಮೂಲಕ.		ಸ್ವಂತ ವಿಕ್ರಯದ ಮೂಲಕ.	
	ಜಮೀನು ಸಂಖ್ಯೆ.	ವಿಸ್ತಾರ.	ಜಮೀನುಸಂಖ್ಯೆ.	ವಿಸ್ತಾರ.
ಮೊದಲೈದು ವರ್ಷಗಳಲ್ಲಿ	1,400	7,220 ಎಕರೆ	16,279	86,218 ಎಕರೆ
ಕಡೆಯ ಐದುವರ್ಷಗಳಲ್ಲಿ	589	3,451 ,,	16,084	83,133 ,,

ಈ ಎರಡು ಪಂಚಕಗಳಲ್ಲಿಯೂ ಸ್ವಂತ ವಿಕ್ರಯದಿಂದುಂಟಾದ ವರ್ಗಾವರ್ಗಿಗಳಲ್ಲಿ ವಿಶೇಷ ವ್ಯತ್ಯಾಸ ಕಾಣದಿದ್ದರೂ ಕೋರ್ಟು ಮೂಲಕವಾಗಿ ಆದ ವರ್ಗಾವರ್ಗಿ ಕಡಿಮೆಯಾಗಿದೆ. ಕೋರ್ಟಿನ ನಿರ್ಬಂಧದಿಂದ ರೈತರ ಕೈಬಿಟ್ಟುಹೋಗುವ ಜಮೀನಿನ ಸಂಖ್ಯೆಯು ಕಡಿಮೆಯಾದ್ದನ್ನು ನೋಡಿದರೆ ಸಾಮಾನ್ಯ ರೈತನು ವಿಶೇಷ ಪುಷ್ಟನಾಗದೆ ಹೋದಾಗ್ಯೂ ತನ್ನ ಆಸ್ತಿಯನ್ನು ಉಳಿಸಿಕೊಳ್ಳುವ ಹಾಗಾದರೂ ಇದ್ದಾನೆಂಬುದಕ್ಕೆ ಒಳ್ಳೆ ಪ್ರಮಾಣವಾಗಿದೆ. ಈ ಅಭಿಪ್ರಾಯವೇ ಸರಿಯಾದ್ದೆಂಬುದಕ್ಕೆ, ಭೋಗ್ಯಾಧಾರಗಳ ರಿಜಿಸ್ಟ್ರೇಷನ್ ಲೆಕ್ಕಗಳೂ ಕೂಡ ಸಾಕ್ಷಿಗಳಾಗಿವೆ. ಸ್ಥಿರಸ್ವತ್ತಿನ ಆಧಾರದಿಂದ ಪಡೆದ ಸಾಲದ ಒಟ್ಟು ಮೊಬಲಗನ್ನು ಹೋಲಿಸಿ ನೋಡಿದರೆ 1901—02ಕ್ಕೆ ಮುಗಿದ ಪಂಚಕದಲ್ಲಿದ್ದದ್ದಕ್ಕಿಂತ ಸುಮಾರು $1\frac{1}{2}$ ಲಕ್ಷ ರೂಪಾಯಷ್ಟು ಕಡಿಮೆಯಾಗಿದೆ. ಈ ಸಾಲದಲ್ಲಿ ಇಷ್ಟೇ ಭಾಗ ಮನೆಗೆ ಸಂಬಂಧಪಟ್ಟದ್ದು, ಇಷ್ಟೇ ಭಾಗ ಜಮೀನಿಗೆ ಸಂಬಂಧಪಟ್ಟದ್ದು ಎಂದು ನಿಷ್ಕರ್ಷಿಸಿ ಹೇಳಲಾಗುವದಿಲ್ಲ. ಆದರೆ ಹಳ್ಳಿಗಾಡುಗಳಲ್ಲಿ ಭೋಗ್ಯಾಧಾರಗಳ ವಿಷಯದಲ್ಲಿ ಮನೆಗಿಂತಲೂ ಜಮೀನಿನಲ್ಲಿ ಅಪೇಕ್ಷೆ ಹೆಚ್ಚೆಂಬ ಅಂಶವು ಅನುಭವಸಿದ್ಧವಾಗಿದೆ.

	ರೂ.
[illegible]ಯ ಪಂಚಕ ...	50,94,535
ಎರಡನೆಯ ಪಂಚಕ ...	49,34,546
ವ್ಯತ್ಯಾಸ ...	1,59,988

ಮನೆಗಳ ಸಂಖ್ಯೆಯು ಜಮೀನುಗಳ ಸಂಖ್ಯೆಗಿಂತ ಕಡಿಮೆಯಾಗಿರುವದರಿಂದ ಸ್ಥಿರಾಧಾರಸಾಲದ ಮೊಬಲಗು ವಿಶೇಷವಾಗಿ ಜಮೀನಿಗೇ ಸಂಬಂಧಪಟ್ಟಿರಬೇಕು. ಈ ಸಾಲದ ಮೊಬಲಗನ್ನು ಈ ದೇಶದ ರೈತರುಗಳ ಒಟ್ಟು ವರಮಾನದೊಡನೆ ಹೋಲಿಸಿ ನೋಡಿದರೆ ಅದು ಅತ್ಯಲ್ಪವಾಗಿಯೇ ಇದೆ. ಈಚೆಗೆ ಹೆಚ್ಚು ಜಮೀನು ವ್ಯವಸಾಯಕ್ಕೆ ಬಂದದ್ದನ್ನು ಜ್ಞಾಪಕದಲ್ಲಿಟ್ಟುಕೊಂಡು, ಅಲ್ಪವಾದ ಈ ಸಾಲವೂ ಕೂಡ ಎರಡನೆಯ ಪಂಚಕದಲ್ಲಿ ಕಡಿಮೆಯಾದ್ದನ್ನು ನೋಡಿದರೆ, ರೈತರ ಸ್ಥಿತಿಯು ಏಕರೀತಿಯಾಗಿ ಅಭಿವೃದ್ಧಿಗೆ ಬರುತ್ತಿದೆಯೆಂಬುದಕ್ಕೆ ಒಂದು ಪ್ರಬಲವಾದ ನಿದರ್ಶನವಾಗಿದೆ. 1893ರಿಂದ 1897 ರವರೆಗಿನ ಐದುವರ್ಷಗಳಲ್ಲಿದ್ದ ಪ್ರತಿಒಂದು ಹಿಡುವಳಿಯ ಸರಾಸರಿ ವಿಸ್ತೀರ್ಣವು 4·8 ಎಕರೆ ಇದ್ದದ್ದು ಎರಡನೆಯ ಪಂಚಕದಲ್ಲಿ 7·22 ಎಕರೆಗೆ ಏರಿತು; ಹಾಗೆಯೇ ಪ್ರತಿಒಂದು ಹಿಡುವಳಿಯ ಕಂದಾಯವೂ ಕೂಡ 6·3 ಇದ್ದದ್ದು 9·62ಕ್ಕೆ ಏರಿತು. ವ್ಯವಸಾಯದ ಲೆಕ್ಕಗಳ ಆಜಮಾಯಿಷಿಯಿಂದ ನಮಗೆ ತಿಳಿದುಬಂದ ಸಂಗತಿಗಳನ್ನೇ, ಹಿರಿಯೂರು ಮತ್ತು ದಾವಣಗೆರೆ ತಾಲೂಕುಗಳ ರಿವಿಷನ್ ಸೆಟಲ್ಮೆಂಟು ಸಂಬಂಧದಲ್ಲಿ ಕರ್ನಲ್ ಗ್ರಾಂಟಸಾಹೇಬರವರು ಮಾಡಿದ ವಿಚಾರಗಳೂ ದೃಢೀಕರಿಸುತ್ತವೆಯೆಂಬುದು, ತೃಪ್ತಿಕರವಾದ ವಿಷಯವಾಗಿದೆ.

ಮೊದಲನೆಯ ಸೆಟಲ್ಮೆಂಟಿನಿಂದ ಈಚೆಗೆ, ದಾವಣಗೆರೆ ತಾಲೂಕಿನಲ್ಲಿ 58,000 ಎಕರೆಗಳೂ ಹಿರಿಯೂರು ತಾಲೂಕಿನಲ್ಲಿ ಸುಮಾರು 41,000 ಎಕರೆಗಳೂ ಹೊಸದಾಗಿ ಸಾಗುವಳಿಗೆ ಬಂದಂತೆ ಈ ವಿಚಾರಗಳಿಂದ ತಿಳಿಯಬರುತ್ತದೆ. ರೇಲ್ವೆ ಹಾಕಿದ್ದರಿಂದಲೂ ದೇಶಾಟನಕ್ಕೆ ಬೇಕಾದ ಇತರ ಅನುಕೂಲ್ಯಗಳನ್ನು ಉಂಟುಮಾಡಿದ್ದರಿಂದಲೂ ಇಲ್ಲಿಯ ಧಾನ್ಯಗಳು ಹೊಸಸ್ಥಳಗಳಿಗೆ ರಫ್ತಾಗುವದಕ್ಕೆ ಅನುಕೂಲವಾಯಿತು. ಮೊದಲ ಸೆಟಲ್ಮೆಂಟಿನಿಂದೀಚೆ ಮುಖ್ಯವಾದ ಆಹಾರಧಾನ್ಯಗಳ ಬೆಲೆಗಳು, ಸೇಕಡ 30ರಿಂದ 40ಕ್ಕೆ ಏರಿದವು. ಜಮೀನುಗಳ ಭೋಗ್ಯದ ಮತ್ತು ಕ್ರಯದ ಮೊಬಲಗು ಕಂದಾಯದ 33ರಷ್ಟು ಇದ್ದದ್ದು 40ರಷ್ಟಕ್ಕೆ ಏರಿತು. 1881ರಲ್ಲಿ ದಾವಣಗೆರೆಯ ಪ್ರಜಾಸಂಖ್ಯೆ 94,560 ಇದ್ದದ್ದು 1901

ರಲ್ಲಿ 1,08,546ಕ್ಕೆ ಏರಿತು: ಹಿರಿಯೂರಿನಲ್ಲಿ 54,307 ರಿಂದ 66,290ಕ್ಕೆ ಏರಿತು. ಮನೆ, ಒ ನೇಗಿಲು ಇವುಗಳ ಸಂಖ್ಯೆಯೂ ಬಹಳವಾಗಿ ಹೆಚ್ಚಿತು. ಕಾಲ್ನಡಿಗೆಗಳ ಸಂಖ್ಯೆಮಾತ್ರ ಕಡಿಮೆಯಾಯಿತು. ಆದರೆ ಗಾಡಿಗಳೂ ನೇಗಿಲುಗಳೂ ಹೆಚ್ಚಾದ್ದರಿಂದ ದೊಡ್ಡಪ್ರಾಣಿಗಳ ಸಂಖ್ಯೆ ಬೇರೆ ಕಡಿಮೆಯಾಗಿರಲಾರದು.

ಮೇಲೆ ವಿವರಿಸಿದ ರೈತರ ಸ್ಥಿತಿಯು, ಅಭಿವೃದ್ಧಿಸೂಚಕವಾಗಿದ್ದಾಗ್ಯೂ ಇಷ್ಟುಮಾತ್ರಕ್ಕೇ ನಾವು ತೃಪ್ತರಾಗಿ ಉದಾಸೀನಭಾವವನ್ನು ವಹಿಸಕೂಡದು. ಮುಂದೆ ಸುಭಿಕ್ಷಕಾಲದಲ್ಲಿ ಜನಸಂಖ್ಯೆಯು ವಿಶೇಷವಾಗಿ ಹೆಚ್ಚಾಗಿ ಆಹಾರಸಮೃದ್ಧಿಯು ಕಡಿಮೆಯಾಗಬಹುದು. ಇದೂ ಅಲ್ಲದೆ ರೈತನು ಕೇವಲಗರಿದ್ರನಾಗಿಲ್ಲದಿದ್ದರೂ ಅವನ ವರಮಾನವು ಇತರರ ವರಮಾನಕ್ಕಿಂತಲೂ ಅಲ್ಪವಾಗಿರುವದರಿಂದ ಅವನ ಸ್ಥಿತಿಯನ್ನು ಇನ್ನೂ ಅಭಿವೃದ್ಧಿಗೆ ತರತಕ್ಕದ್ದಾಗಿದೆ. ಒಂದುಹುಲ್ಲುಗರಿ ಬೆಳೆಯುವಕಡೆ ಸಾಧ್ಯವಾದರೆ ಎರಡನ್ನು ಬೆಳಸುವದು ವಿವೇಕವೆಂಬ ವಿಷಯದಲ್ಲಿ ಯಾರೂ ಆಕ್ಷೇಪಿಸಲಾರರು. ಆದ್ದರಿಂದ ಈ ದೇಶದ ಈಗಿನ ಸ್ಥಿತಿಯಲ್ಲಿ ವ್ಯವಸಾಯವನ್ನು ಯಾವವಿಧವಾಗಿ ಅಭಿವೃದ್ಧಿಮಾಡಲು ಯತ್ನಿಸಬೇಕೆಂಬುದೇ ವಿಚಾರಣೀಯವಾದ ವಿಷಯವಾಗಿದೆ.

ಫಸಲಿನ ಅಜಮಾಯಿಷಿಕ್ರಮ.—ಫಸಲಿನ ಅಜಮಾಯಿಷಿಕ್ರಮವನ್ನು ಕೆಲವು ಮಾರ್ಗಗಳಲ್ಲಿ ಅಭಿವೃದ್ಧಿಪಡಿಸಬಹುದು. ಪ್ರಕೃತದಲ್ಲಿ ರೈತರಿಗೆ ಅಂತಹ ಕೆಲಸಗಳಲ್ಲಿ ಅಭಿರುಚಿಯಿಲ್ಲ. ಆದ್ದರಿಂದ ತಾಲೂಕುಗಳ ಸಮೀಪದಲ್ಲಿರುವ ಗ್ರಾಮಗಳಲ್ಲಿ ಬುದ್ಧಿವಂತರಾದ ಒಬ್ಬಿಬ್ಬರೈತರನ್ನು ಗೊತ್ತುಮಾಡಿ ಅವರಿಗೆ ಒಳ್ಳೆ ಬಿತ್ತನೆ ಕಾಳನ್ನೂ ಗೊಬ್ಬರವನ್ನೂ ಕೊಂಡುಕೊಳ್ಳುವದಕ್ಕೆ ಸಹಾಯಮಾಡಿ ಅವರ ಜಮೀನಿನ ಒಂದೆರಡು ತಾಕುಗಳಲ್ಲಿ ಸರಿಯಾದ ಕಾಲದಲ್ಲಿ ಪೈರು ಮಾಡುವಂತೆ ಏರ್ಪಾಡು ಮಾಡಬಹುದು. ಬೇರೆಬೇರೆ ತಾಲ್ಲೂಕುಗಳಲ್ಲಿ ಆದ ಬೆಳೆಯನ್ನು ಪ್ರತಿವರ್ಷವೂ ಆಯಾ ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರುಗಳಲ್ಲಿ ಮಿತವಾಗಿ ಪ್ರದರ್ಶನ ಮಾಡುವಂತೆ ಏರ್ಪಡಿಸಿ ಉತ್ತಮವಾದವುಗಳಿಗೆ ಬಹುಮಾನಗಳನ್ನು ಕೊಡಬಹುದು. ಈ ಕಾರ್ಯಕ್ಕಾಗಿ ಸರಕಾರದವರುಸ್ವಲ್ಪ ಹಣವನ್ನು ಖರ್ಚುಮಾಡಿದಲ್ಲಿ ರೈತರುಗಳಲ್ಲಿ ಪರಸ್ಪರ ಪೋಟಾಪೋಟಿಯುಂಟಾಗಿ ಅವರಿಗೆ ಅನೇಕ ಉಪಯುಕ್ತವಾದ ಅಂಶಗಳು ತಿಳಿಯುವದಕ್ಕೆ ಕಾರಣವಾಗುವದು. ಈ ಪ್ರದರ್ಶನಗಳಿಗೆ, ದನಗಳನ್ನೂ ಅವುಗಳಿಂದುಂಟಾಗುವ ಹಾಲು ಬೆಣ್ಣೆ ಮೊದಲಾದವುಗಳನ್ನೂ ಕೂಡ ಸೇರಿಸಬಹುದು.

ವ್ಯವಸಾಯ ವಿದ್ಯಾಭ್ಯಾಸ—ಇದರ ಮೇಲೂ ವ್ಯವಸಾಯ ವಿದ್ಯಾಭ್ಯಾಸ ವಿಷಯದಲ್ಲಿ ಈಗಲೇ ತಕ್ಕ ಏರ್ಪಾಡುಗಳನ್ನು ಮಾಡಬೇಕಾಗಿದೆ. ಈ ವಿಷಯದಲ್ಲಿ ಕನ್ನಡದಲ್ಲಿ ಒಂದು ಪುಸ್ತಕವನ್ನು ಬರೆದು ಅದನ್ನು ಸ್ಕೂಲುಗಳಲ್ಲಿ ಪಾಠ ಹೇಳಿಸುವ ಏರ್ಪಾಡು ಮಾಡಿದ್ದು ಒಂದು ಹೊರತು ಇನ್ನೇನೂ ಹೆಚ್ಚಾಗಿ ಮಾಡಿಲ್ಲ. ಮದ್ರಾಸ್ ಸೈದಾಪೇಟೆ ವ್ಯವಸಾಯ ಪಾಠಶಾಲೆಯಲ್ಲಿ ಶಿಕ್ಷಿತರಾದ ಮೈಸೂರು ವಿದ್ಯಾರ್ಥಿಗಳಿಂದ ಇಲ್ಲಿಯರೈತರಿಗೆ ವಿಶೇಷಪ್ರಯೋಜನವೇನೂ ಆದಹಾಗೆ ಕಾಣುವದಿಲ್ಲ. ಯದ್ಯಪಿ ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ವ್ಯಾಸಂಗಮಾಡುವ ಉಪಾಧ್ಯಾಯರುಗಳಿಗೆ ವ್ಯವಸಾಯವನ್ನು ಕಾರ್ಯತಃ ಕಲಿಸುತ್ತಾರೆ. ಆದರೆ ಈ ಉಪಾಧ್ಯಾಯರಲ್ಲಿ ಯಾರಿಗೂ, ತಮ್ಮ ಪಾಠಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ವ್ಯವಸಾಯ ವಿಷಯದಲ್ಲಿ ಉಪಯುಕ್ತಾಂಶಗಳನ್ನು ಬೋಧಿಸುವದಕ್ಕೆ ತಕ್ಕ ಉತ್ಸಾಹವೂ ಇಲ್ಲ ಉಪಪತ್ತಿಯೂ ಇಲ್ಲ, ಇದೂಅಲ್ಲದೆ ಆ ಉಪಾಧ್ಯಾಯರಿಗೆ ವ್ಯವಸಾಯವನ್ನು ಬೋಧನೆಮಾಡುವ ಕ್ರಮದಲ್ಲಿಯೇ ತಿದ್ದುಪಾಟುಮಾಡತಕ್ಕ ಅಂಶಗಳಿವೆ. ಈ ಉದ್ದೇಶದಿಂದಲೇ, ಆ ಉಪಾಧ್ಯಾಯರುಗಳ ತಿಳಿವಳಿಕೆಯು ಹೆಚ್ಚಿ ಕಾರ್ಯತಃ ಉಪಯೋಗವಾಗುವಂತೆ ಮಾಡುವದಕ್ಕಾಗಿ ಅವರು ವ್ಯಾಸಂಗ ಮಾಡುವ ಕಾಲವನ್ನು ಇನ್ನೂ ಸ್ವಲ್ಪ ಹೆಚ್ಚಿಸಬೇಕೆಂದು ಆಲೋಚಿಸಿದೆ. ಮೇಲೆಯೂ ಮುಖ್ಯವಾದ ಗ್ರಾಮಗಳಲ್ಲಿರುವ ಪಾಠಶಾಲೆಗಳಿಗೆ ಸಣ್ಣ ಸಣ್ಣ ತಾಕುಗಳನ್ನೂ, ಒಳ್ಳೇಬೀಜವನ್ನೂ ಗೊಬ್ಬರವನ್ನೂ ಕೊಂಡುಕೊಳ್ಳುವದಕ್ಕಾಗಿ ಸ್ವಲ್ಪ ಮೊಬಲಗನ್ನೂ, ಕೊಟ್ಟರೆ ಪ್ರಯೋಜನಕಾರಿಯಾಗುವದು. ಈ ತಾಕುಗಳಲ್ಲಿ ಪೈರುಮಾಡುವ ಕೆಲಸವನ್ನು, ಉಪಾಧ್ಯಾಯರು, ತಮ್ಮ ಮೇಲ್ವಿಚಾರಣೆಯಿಂದ, ಹುಡುಗರಿಂದಲೇ ಮಾಡಿಸಬೇಕು. ಒಂದೊಂದು ತಾಲೂಕಿಗೆ ಸೇರಿದ ಪಾಠಶಾಲೆಗಳ ಬೆಳೆಗಳಪ್ರದರ್ಶನವನ್ನು ಆಯಾ ತಾಲೂಕು ಹೆಡ್ಕ್ವಾರ್ಟರುಗಳಲ್ಲಿ ನಡಸಿ ಉತ್ತಮವಾದವುಗಳಿಗೆ ಬಹುಮಾನಗಳನ್ನುಕೊಟ್ಟರೆ ಹಾಗೆ ಬಹುಮಾನವನ್ನು ಪಡೆದ ಹುಡುಗರ ತಂದೆಗಳಿಗೆ ಈ ವಿಷಯದಲ್ಲಿ ಆಸಕ್ತಿಯುಂಟಾಗುವದು ಸಹಜವಾಗಿಯೇ ಇದೆ.

ಸಾಮಾನ್ಯ ವ್ಯವಸಾಯಾಭಿವೃದ್ಧಿ.—ಇತರ ವಿಷಯಗಳಲ್ಲಿಯೂ ಕೂಡ ತಕ್ಕಪ್ರಯತ್ನಗಳನ್ನು ಮಾಡಬೇಕಾಗಿದೆ. ರಾಜ್ಯವನ್ನು ವಹಿಸಿಕೊಂಡ ತರುಣದಲ್ಲಿ ನಮ್ಮ ರೈತರಿಗೆ ಮೇಲುಪಂಗ್ತಿಯಾಗಿರಬಹುದೆಂದು ನಿರೀಕ್ಷಿಸಿ ಯೂರೋಪಿಯರ್ನ ಜನರ ವ್ಯವಸಾಯಕ್ಕಾಗಿ ಮಾಡಿಕೊಟ್ಟ ವಸತಿಗಳು ಸಫಲವಾಗದೆಹೋದವು. ಇಂಡಿಯಾದೇಶದ ಇತರ ಭಾಗಗಳಲ್ಲಿರುವ ರೈತರಂತೆಯೇ ಮೈಸೂರು ರೈತನೂ ತನ್ನ ಹಳೆಪದ್ಧತಿಯನ್ನು ಜಾಗ್ರತೆ

ಯಾಗಿ ಬಿಡತಕ್ಕವನಲ್ಲವಾದರೂ ಕಾರ್ಯತಃ ಸುಲಭವಾದ ಮಾರ್ಗವನ್ನು ತೋರಿಸಿಕೊಟ್ಟಲ್ಲಿ ತನ್ನ ಸ್ಥಿತಿಯನ್ನು ಅಭಿವೃದ್ಧಿಪಡಿಸಿಕೊಳ್ಳುವದಕ್ಕೆ ಸಿದ್ಧನಾಗಿದ್ದಾನೆ. ಕಬ್ಬಿಣದಲ್ಲಿಮಾಡಿದ ಉತ್ತಮವಾದ ಕಬ್ಬಿನ ಗಾಣಗಳನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಿಕೊಳ್ಳುತ್ತಿರುವದೇ ಇದಕ್ಕೆ ದೃಷ್ಟಾಂತವಾಗಿದೆ. ಹೊಸ ನೇಗಿಲುಗಳನ್ನೂ ಇತರವಾದ ವ್ಯವಸಾಯದ ಉಪಕರಣಗಳನ್ನೂ ಇಲ್ಲಿ ಬಳಕೆಯಲ್ಲಿ ತರುವದಕ್ಕಾಗಿ ಹಿಂದೆ ಮಾಡಿದ ಪ್ರಯತ್ನಗಳು ವಿಶೇಷವಾಗಿ ಫಲಕಾರಿಗಳಾಗಲಿಲ್ಲ. ಸಣ್ಣಸಣ್ಣ ಹಿಡುವಳಿಗಳಿರುವ ಇಂಥ ದೇಶದಲ್ಲಿ ಉತ್ತಮವಾದ ಯಂತ್ರಗಳನ್ನು ಬಳಕೆಯಲ್ಲಿ ತರುವದಕ್ಕೆ ವಿಶೇಷ ಅವಕಾಶವಿಲ್ಲವೆಂಬುದನ್ನು ಜ್ಞಾಪಕದಲ್ಲಿಡಬೇಕು. ಪ್ರಕೃತಸ್ಥಿತಿಯಲ್ಲಿ ಉತ್ತಮ ಯಂತ್ರಗಳನ್ನು ಬಳಕೆಯಲ್ಲಿ ತರಲವಕಾಶವಿಲ್ಲವೆಂಬಂಶವನ್ನು, ಮೆ|| ಎ. ವೊಲೆಕ್ಕರವರು, ಇಂಡಿಯಾ ವ್ಯವಸಾಯಾಭಿವೃದ್ಧಿಯ ವಿಷಯವಾಗಿ ಬರೆದಿರುವ ತಮ್ಮ ರಿಪೋರ್ಟಿನಲ್ಲಿ ಹೇಳಿದ್ದಾರೆ. ಆದಕಾರಣ ಸಾಮಾನ್ಯ ರೈತನ ಶಕ್ತಿಗೆ ಮೀರಿದ ಬೆಲೆಯುಳ್ಳ ಅನ್ಯದೇಶದ ಯಂತ್ರಗಳನ್ನು ತಂದು ಅಜಮಾಯಿಷಿ ಮಾಡುವದಕ್ಕಿಂತಲೂ ಇಲ್ಲಿ ಪ್ರಕೃತದಲ್ಲಿ ಉಪಯೋಗದಲ್ಲಿರುವ ವ್ಯವಸಾಯದ ಮುಟ್ಟುಗಳನ್ನೇ ಅಭಿವೃದ್ಧಿಪಡಿಸುವದು ಉತ್ತಮವಾಗಿ ತೋರುತ್ತದೆ. 1901ನೆಯ ವರ್ಷದ ಫಾಮಿನ್ ಕಮಿಷನ್ ರಿಪೋರ್ಟಿನಿಂದ ತೆಗೆದು ಕೆಳಗೆ ಬರೆದಿರುವ ಅಂಶವು, ಸರ್ಕಾರೀ ವ್ಯವಸಾಯದ ಇಲಾಖೆಯಿಂದನಡೆಯಬೇಕಾದ ಕಾರ್ಯಗಳನ್ನು ಸರಿಯಾಗಿ ವಿವರಿಸುತ್ತದೆ ಎಂದು ನನಗೆ ತೋರುತ್ತದೆ. ಅದೇನೆಂದರೆ—"ಹಿಂದೂದೇಶದ ರೈತನಿಗೆ ಆರಂಭ ಮಾಡುವದು ತಿಳಿಯದೆಂದು ನಾವು ಎಂದಿಗೂ ಯೋಚಿಸಲಾರೆವು. ಕೇವಲ ವ್ಯವಸಾಯದ ವಿಷಯದಲ್ಲಿ, ವ್ಯವಸಾಯದ ಇಲಾಖೆಯವರು ರೈತರಿಂದ ಕಲಿಯತಕ್ಕ ಭಾಗವೇ ಬಹಳವಾಗಿದೆ. ಆದರೆ ಹಿಂದೂದೇಶದ ರೈತನು ತನಗೆ ತಲೆತಲಾಂತರದಿಂದ ಬಂದ ಜಾಣತನವನ್ನು ಉಪಯೋಗಿಸಿಕೊಳ್ಳುವದರಲ್ಲಿಯೂ ಬೆಳೆಮಾಡುವದಕ್ಕೆ ಬೇಕಾದ ಸಾಮಗ್ರಿಗಳನ್ನು ಮಿತವಾಗಿ ಬಳಸುವದರಲ್ಲಿಯೂ ಒಂದಾಗಿ ಸೇರಿ ಕೆಲಸಗಳನ್ನು ನೆರವೇರಿಸಿಕೊಳ್ಳುವದರಲ್ಲಿಯೂ ತಿಳಿವಳಿಕೆಯಿಲ್ಲದವನಾಗಿಯೂ ಹಿಂದಾಳಾಗಿಯೂ ಇದ್ದಾನೆ. ಈ ಕುಂದಕಗಳನ್ನು ತಪ್ಪಿಸುವ ವಿಷಯದಲ್ಲಿಮಾತ್ರ ವ್ಯವಸಾಯ ಇಲಾಖೆಯವರಿಗೆ ಅವಕಾಶವಿದೆ. ಈ ಇಲಾಖೆಯವರು ಸಫಲವಾಗಿ ಕೆಲಸಮಾಡಬಹುದಾದ ಎಲ್ಲಾ ವಿಷಯಗಳನ್ನೂ ಇಲ್ಲಿ ಹೇಳಿ ಮುಗಿಸುವ ದುರಭಿಮಾನವನ್ನು ಬಿಟ್ಟು ಈಕೆಳಗೆ ಬರೆದಿರುವ ಅಂಶಗಳನ್ನು ಮಾತ್ರ ಹೇಳುತ್ತೇನೆ. ಅವು ಯಾವವೆಂದರೆ—ಮೇಲುತರದ ಜನರಿಗೆವ್ಯವಸಾಯದ ಉತ್ತಮ ಮಾರ್ಗವನ್ನು ಬೋಧಿಸುವದು, ಅನ್ಯೋನ್ಯ ಸಹಾಯಕ ಸಂಘಗಳನ್ನು ಪ್ರೋತ್ಸಾಹಗೊಳಿಸುವದು, ವ್ಯವಸಾಯಕ್ಕೆ ಸಂಬಂಧಪಟ್ಟ ವಿಚಾರ ಮತ್ತು ಪರೀಕ್ಷೆ, ಉಳುಮೆ, ಗೊಬ್ಬರ ಇವುಗಳ ವಿಚಾರ, ಬೆಳೆಗಳಿಗೆ ತಗಲುವ ರೋಗಗಳ ಮತ್ತು ಪ್ರತಿ ಕ್ರಿಯೆಗಳ ವಿಚಾರ, ಒಳ್ಳೆ ಬೀಜಗಳನ್ನು ಒದಗಿಸಿ ಕೊಡುವದು, ಹೊಸ ಆಹಾರ ಧಾನ್ಯಗಳನ್ನು ಬಳಕೆಗೆ ತರುವದು, ದನಗಳ ತಳಿಯನ್ನು ಅಭಿವೃದ್ಧಿ ಮಾಡುವದು, ದನ ಕರುಗಳ ರೋಗವಿಚಾರ, ಅವುಗಳ ಮೇವಿನ ಅಭಿವೃದ್ಧಿ—ಇವೇ.

ಈ ವಿಷಯಗಳಲ್ಲಿ ಕೆಲವಕ್ಕೆ ಈ ವರೆಗೆ ಅವಧಾನವನ್ನು ಕೊಟ್ಟಿದೆ. ಅವು ಯಾವವೆಂದರೆ—ಬಿತ್ತಿದಿಂದ ಕಬ್ಬು ಬೆಳೆಯುವದು, ಅನ್ಯದೇಶದ ಒಳ್ಳೆ ಹತ್ತಿಯ ಬೀಜವನ್ನುತಂದು ಹತ್ತಿಯ ಪೈರನ್ನು ಅಭಿವೃದ್ಧಿ ಮಾಡುವದು, ಹೊಸ ಹಣ್ಣಿನಗಿಡಗಳನ್ನು ಬೆಳೆಸುವದು, ಮೈದಾನಗಳಲ್ಲಿ ಕಾಫಿ ಪೈರು ಮಾಡುವದು, ಇವೆ. ಆದರೆ ಈ ಪ್ರಯತ್ನಗಳು ಇನ್ನೂ ವಿಚಾರಸ್ಥಿತಿಯಲ್ಲಿಯೇ ಇವೆ. ವ್ಯವಸಾಯ ವಿಷಯದಲ್ಲಿ, ಪಂಡಿತರಾದವರ ವಿಚಾರವು ಅತ್ಯವಶ್ಯಕವೆಂಬುದು ವ್ಯಕ್ತವಾಗಿಯೇ ಇದೆ. ಆದಕಾರಣ ಡಾಕ್ಟರ್ ಲಿಮೆನ್ನರವರನ್ನು ಕೃಷಿರಸಾಯನ ಕಾರ್ಯದಲ್ಲಿ ಇನ್ನೂ 5 ವರ್ಷಕಾಲ ಇಟ್ಟುಕೊಂಡದ್ದು ಯುಕ್ತವಾದ ಕೆಲಸವಾಗಿದೆ. ಡಾಕ್ಟರ್ ಲಿಮೆನ್ನರವರು ಈ ದೇಶದ ವ್ಯವಸಾಯದ ಮತ್ತು ಕೈಗಾರಿಕೆಗಳ ವಿದ್ಯಮಾನವನ್ನು ತಿಳಿದುಕೊಳ್ಳುವದಕ್ಕೂ ಕೃಷಿರಸಾಯನ ಪರೀಕ್ಷಾಲಯವನ್ನು ಅಣಿಮಾಡಿಕೊಳ್ಳುವದಕ್ಕೂ ಇಷ್ಟು ಕಾಲ ಹಿಡಿಯಿತು. ಈಗ ಅವರು, ಇಲ್ಲಿಯ ರೈತರುಗಳ ಉದ್ದೇಶಗಳನ್ನೂ ಕೊರತೆಗಳನ್ನೂ ಕಷ್ಟಗಳನ್ನೂ ತಿಳಿದುಕೊಂಡಿರಬಹುದು. ಅವರು ಮಾಡುವ ಪರೀಕ್ಷೆಗಳು ಸಫಲವಾಗಬೇಕಾದರೆ, ರೈತನಿಗೆ ಉಪಯುಕ್ತವಾದ ಅಂಶಗಳನ್ನು ತಿಳಿಸುವದಕ್ಕಾಗಿಯೇ ಮಾಡಬೇಕು. ಅವರು ಸಂಸ್ಥಾನದ ಎಲ್ಲಾ ಭಾಗಗಳ ಭೂಗುಣಗಳನ್ನೂ ಕ್ರಮವಾಗಿ ಪರೀಕ್ಷಿಸುವದಕ್ಕೂ ಯಾವ ಯಾವ ಭೂಮಿಗೆ ಯಾವ ಯಾವ ವಿಧದ ಗೊಬ್ಬರ ಬೇಕೆಂಬುದನ್ನು ನಿರ್ಣಯಿಸುವದಕ್ಕೂ ಪೈರಿಗೆ ಅಪಾಯಮಾಡುವ ಹುಳುಗಳೇ ಮೊದಲಾದವುಗಳನ್ನು ತಪ್ಪಿಸುವದಕ್ಕೆ ತಕ್ಕ ವಿಧಾನಗಳನ್ನು ಕಲ್ಪಿಸುವದಕ್ಕೂ ಸಾಮಾನ್ಯವಾಗಿ ಉತ್ತಮ ವ್ಯವಸಾಯ ಕ್ರಮಗಳನ್ನು ಬಳಕೆಗೆ ತರುವದಕ್ಕೂ ಮತ್ತು ಇವಕ್ಕೆ ಸಂಬಂಧಪಟ್ಟ ಇತರ ಉದ್ದೇಶಗಳನ್ನು ನೆರವೇರಿಸುವದಕ್ಕೂ ಸಹ ಪ್ರಯತ್ನಿಸಬೇಕು. ಒಬ್ಬ ಕ್ರಿಮಿ ಶಾಸ್ತ್ರಜ್ಞನ ಸಹಾಯವೂ ಈ ಇಲಾಖೆಗೆ ಆವಶ್ಯಕವೆಂದು ಭಾವಿಸಿ ಕೃಷಿರಸಾಯನಜ್ಞರು ಬರೆದ ಅರ್ಜಿಯು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಕೈಗಾರಿಕೆಪದಾರ್ಥಗಳು ಕಡಿಮೆಯಾದ್ದು.—ರಸ್ತೆಗಳನ್ನೂ ರೇಲ್ವೆಗಳನ್ನೂ ಹೆಚ್ಚಿಸಿದ್ದು, ಹೆಚ್ಚು ಜಮೀನನ್ನು ಸಾಗುವಳಿಗೆ ತಂದು ಆ ಮೂಲಕ ಉತ್ಪತ್ತಿಯನ್ನು ಹೆಚ್ಚಿಸಿದರೂ ಅದೇ ಈ

ದೇಶದ ಕೈಗಾರಿಕೆಯ ಏಳಿಗೆಗೆ ಪ್ರತಿಬಂಧಕವಾಗಿ ಪರಿಣಮಿಸಿತು. ಈ ದೇಶದ ಕೈ[illegible]ರಿಕೆಯ ಕೆಲಸದವರು, ಹಿಂದೂದೇಶದ ಇತರ ಭಾಗಗಳಲ್ಲಿರುವವರಂತೆಯೇ, ಸಾಮಾನ್ಯವಾಗಿ ತಮ್ಮತಮ್ಮ ಮನೆಗಳಲ್ಲೆ ತಮ್ಮತಮ್ಮ ಉದ್ಯೋಗವನ್ನು ಮಾಡಿಕೊಂಡು ನೆರೆಹೊರೆಯವರಿಗೋ ಅಥವಾ ಸ್ವಲ್ಪ ದೂರದಲ್ಲಿರುವವರಿಗೋ ತಾವು ಮಾಡಿದ ಪದಾರ್ಥಗಳನ್ನು ಮಾರುತ್ತಾರೆ. ಪದಾರ್ಥಗಳನ್ನು ಸುಲಭವಾಗಿ ಸಾಗೆಹಾಕುವುದಕ್ಕೆ ಮಾಡಿಕೊಟ್ಟ ಅನುಕೂಲ್ಯವು, ಇಲ್ಲಿನ ದವಸಧಾನ್ಯಗಳ ಮಾರಾಟಕ್ಕೆ ಉತ್ತಾಸೆಯಾದರೂ, ಅದೇ, ಹೊರಗಿನಿಂದ ಅಗ್ಗವಾದ ಸಾಮಾನುಗಳು ನಮ್ಮ ದೇಶಕ್ಕೆ ಬರುವುದಕ್ಕೂ ತನ್ಮೂಲಕ ಇಲ್ಲಿನ ಕೈಗಾರಿಕೆ ಬಹಳ ಮಟ್ಟಿಗೆ ಕಡಿಮೆಯಾಗುವುದಕ್ಕೂ ಕಾರಣವಾಯಿತು. 1890 ರಿಂದ 1900 ರವರೆಗಿನ ಹತ್ತು ವರ್ಷಗಳಲ್ಲಿ ರೈಲುಗಳ ಮೂಲಕ ಸಾಗಿದ ಪದಾರ್ಥಗಳ ಲೆಕ್ಕವನ್ನು ನೋಡಿದರೆ, ಭತ್ತ, ಅಕ್ಕಿ, ಉದ್ದು, ಹೆಸರು ಮೊದಲಾದವು, ಚರ್ಮಗಳು, ಕೊಂಬುಗಳು, ಎಣ್ಣೆ ಬೀಜಗಳು, ಹಸಿಯರೇಷ್ಮೆ ಇತರ ಹಸಿಯಪದಾರ್ಥಗಳು—ಇವುಗಳು ಇಲ್ಲಿಂದ ರಪ್ತಾಗುತ್ತ ಬರುವುದಾಗಿಯೂ ಚರ್ಮದಿಂದಾದ ಪದಾರ್ಥಗಳು, ಹತ್ತಿಯ ಬಟ್ಟೆಗಳು, ಯೂರೋಪಿನ ಮದ್ಯಗಳು, ಎಣ್ಣೆಗಳು, ಉಪ್ಪು ಮತ್ತು ಇತರ ಪದಾರ್ಥಗಳು ಇಲ್ಲಿಗೆ ಆಮದಾಗುವದಾಗಿಯೂ ತಿಳಿಯಬರುತ್ತದೆ. ಇಲ್ಲಿಯ ಕೈಗಾರಿಕೆಯವರು ಇತರ ದೇಶದ ಕೈಗಾರಿಕೆಯವರೊಡನೆ ಯಾವ ವಿಧವಾದ ಸಂಬಂಧವನ್ನೂ ಇನ್ನೂ ಬೆಳಸದೆ ಬೇರೆಯಾಗಿಯೇ ಇದ್ದಾರೆ. ಕೈಗಾರಿಕೆಯವನು ಇನ್ನೂ ತನಗೆ ಇಷ್ಟಬಂದಂತೆ ಇದ್ದುಕೊಂಡು ರೈತನ ಹಾಗೆಯೇ ಇತರರ ಸಂಗಡ ಏಕೀಭವಿಸಿ ತನ್ನ ಗುಂಪಿಗೆ ಪ್ರಯೋಜನಕರವಾದ ಯಾವ ಕೆಲಸವನ್ನು ಮಾಡಿಕೊಳ್ಳುವುದಕ್ಕೂ ಅಸಮರ್ಥನಾಗಿದ್ದಾನೆ. ಈಗಿನ ಸೆನ್ಸಸ್ಸಿನ ಲೆಕ್ಕದಿಂದ, ಈ ದೇಶದ ಕೈಗಾರಿಕೆ ಕೆಲಸದವರ ಸಂಖ್ಯೆಯು ವಿಶೇಷವಾಗಿ ಹೆಚ್ಚಿದಾತೆ ತಿಳಿಯಬರುವುದಿಲ್ಲ. ಇದರಂತೆಯೇ ರಾಜ್ಯವನ್ನು ವಹಿಸಿಕೊಂಡಕಾಲದಲ್ಲಿದ್ದ ಕೈಗಾರಿಕೆ ಕೆಲಸಗಳು ವಿಶೇಷವಾಗಿ ವೃದ್ಧಿಯಾಗದೆ ಈಗಲೂ ಏಕರೀತಿಯಾಗಿರುತ್ತವೆ. ಅವು ಯಾವವೆಂದರೆ—ಲೋಹಕಾರರು, ಕುಂಬಾರರು, ಮರಗೆಲಸದವರು, ನೆಯ್ಗೆಯವರು ಈ ಮುಂತಾದವರ ಕಸಬುಗಳೇ. ರಾಜ್ಯವನ್ನು ವಹಿಸಿಕೊಂಡ ಈಚೆಗೆ ಕೆಲವು ಕಾರ್ಖಾನೆಗಳು—ಎಂದರೆ ಬೆಂಗಳೂರಲ್ಲಿ ಕಂಬಳಿ ಕಾರ್ಖಾನೆ, ಹತ್ತಿ ನೂಲು ಬಟ್ಟೆ ಇವುಗಳ ಕಾರ್ಖಾನೆ, ಹೆಂಚಿನ ಕಾರ್ಖಾನೆ, ಕಬ್ಬಿಣದ ಕಾರ್ಖಾನೆ; ಗೋರೀ ಬಿದನೂರಿನಲ್ಲಿ ಸಕ್ಕರೆ ಕಾರ್ಖಾನೆ—ಇವು ಏರ್ಪಾಡಾದವು. ಆದರೆ ಇವುಗಳು ಅನೇಕವಾಗಿ ಯೂರೋಪಿಯನರ ಮೇಲ್ವಿಚಾರಣೆಯಲ್ಲಿರುವುದರಿಂದ ಇವುಗಳಿಂದ ಇಲ್ಲಿಯವರಲ್ಲಿ ಕೈಗಾರಿಕೆಯ [illegible]ವಳಿಕೆ ಹೆಚ್ಚಿತೆಂದಾಗಲಿ ಸಂಘವಾಗಿ ಸೇರುವ ಸಾಮರ್ಥ್ಯವು ಹೆಚ್ಚಿತೆಂದಾಗಲಿ ತಿಳಿಯುವದಿಲ್ಲ. ಕಾಗ[illegible] ತಯಾರ್ಮಾಡುವದು, ಪ್ರಬಲವಾದ ಕಬ್ಬಿಣದ ಕಾರ್ಖಾನೆಗಳನ್ನು ಏರ್ಪಡಿಸುವುದು, ಯಂತ್ರದಿಂದ ರೇಷ್ಮೆಯನ್ನು ನೂತು ಕಂಟಿಗೆಯಾಗಿ ಸುತ್ತುವುದು, ಇವೇ ಮೊದಲಾದ ಕೈಗಾರಿಕೆಗಳಿಗೆ ಕೊಟ್ಟ ಪ್ರೋತ್ಸಾಹದಿಂದಲೂ ಏನೂ ಪ್ರಯೋಜನವಾಗಲಿಲ್ಲ.

ಈ ಕಾರಣಗಳಿಂದ, ಇಲ್ಲಿಯವರ ಪ್ರಕೃತಸ್ಥಿತಿಯಲ್ಲಿ, ಭಾರಿ ಬಂಡವಾಳವೂ ಬಹಳ ಜನಗಳ ಐಕಮತ್ಯವೂ ಬೇಕಾಗುವ ಕೆಲಸಕ್ಕೆ ಉಪಕ್ರಮಿಸಿದರೆ ಅದು ಒಂದುವೇಳೆ ಸುತರಾಂ ಕೆಟ್ಟುಹೋಗದೆ ನಡೆದರೂ ಅದರಿಂದ ಖಂಡಿತವಾಗಿಯೂ ಆಶಾಭಂಗವಾಗುವದೆಂದು ತೋರುತ್ತದೆ. ಕೆಲಸಗಳಿಗೆ ಬರುವ ಕೈಗಾರಿಕೆ ಪದಾರ್ಥಗಳನ್ನೂ ಮತ್ತು ಅವುಗಳನ್ನು ಉಪಯೋಗವಾಗುವಂತೆ ಮಾಡುವ ಸಾಧನಗಳ ತಿಳುವಳಿಕೆಯನ್ನೂ ನಾವು ಮೊದಲು ವಿಶೇಷವಾಗಿ ಅಭಿವೃದ್ಧಿ ಮಾಡಿಕೊಳ್ಳಬೇಕು. ಸಾವಕಾರಿ ಕಂಪೆನಿಗಳಲ್ಲಿ ಜನಗಳಿಗಿರುವ ನಂಬಿಕೆಯನ್ನು ನೋಡಿದರೆ ಪ್ರಕೃತದಲ್ಲಿ ಭಾರಿ ಬಂಡವಾಳವನ್ನು ಸೇರಿಸಲಾಗುವಂತಿಲ್ಲ; ಒಂದುವೇಳೆ ಸೇರಿಸಿದರೂ ಒಂದೆರಡು ಕಡೆಯಲ್ಲಿ ಮಾತ್ರವೇ ಸಾಧ್ಯವಾಗಬಹುದು. ವಸ್ತುತಃ ಇಂಥ ಕೆಲಸಗಳನ್ನು ಉಪಕ್ರಮಿಸುವವರು ನಷ್ಟಕ್ಕೆ ಹಿಂಜರಿಯದಿರಬೇಕು. ಮೈಸೂರಿನಲ್ಲಿರುವ ಸಾವಕಾರರು ವಿಶೇಷ ಬಂಡವಾಳವುಳ್ಳವರಲ್ಲ; ಅವರು ತಮಗೆ ಖಂಡಿತವಾಗಿಯೂ ಲಾಭಬರುವದೆಂದು ತಿಳಿದಹೊರತು, ಯಾವಕೆಲಸಗಳಿಗೂ ತಮ್ಮ ಬಂಡವಾಳದ ಸ್ವಲ್ಪಭಾಗವನ್ನೂ ಕೂಡ ಹಾಕುವದಿಲ್ಲ. ಈ ವಿಷಯವು ಎಲ್ಲರಿಗೂ ಗೊತ್ತೇ ಇದೆ. ಕೋಲಾರದ ಚಿನ್ನದಗಣಿಯ ಕೆಲಸವೇ ಇದಕ್ಕೆ ಸಾಕಾದ ದೃಷ್ಟಾಂತವಾಗಿದೆ. 1883 ರಲ್ಲಿ ಮೈಸೂರು ಕಂಪೆನಿಯವರ ಬಂಡವಾಳವೆಲ್ಲಾ ಮುಗಿದುಹೋಗಿ 13,000 ಪೌನಿನಷ್ಟು ಮಾತ್ರ ಉಳಿದಿತ್ತು. ಆಕಾಲದಲ್ಲಿ ಆ ಮೊಬಲಗನ್ನು ಷೇರುದಾರರು[illegible]ಗೆ ಹಂಚಬೇಕೆ ಇಲ್ಲವೇ ಲಾಭನಷ್ಟಗಳಿಗೆ ಹೆದರದೆ ಅದನ್ನು ಗಣಿಯ ಕೆಲಸಕ್ಕೇ ಉಪಯೋಗಿಸಬೇಕೇ ಎಂಬದಾಗಿ ವಿಚಾರವುಂಟಾಯಿತು. ಆಗ ಕೆಲಧೈರ್ಯಶಾಲಿಗಳ ಅಭಿಪ್ರಾಯವನ್ನೇ ಅಂಗೀಕರಿಸಿ ನಡೆಸಿದ ವಿಷಯವು ಎಲ್ಲರಿಗೂ ತಿಳಿದೇ ಇದೆ. ಇಲ್ಲಿಯ ಧನಸಂಪತ್ತಿನ ಸ್ಥಿತಿಯನ್ನು ನೋಡಿದರೆ, ಲಾಭನಷ್ಟಗಳು ಗೊತ್ತಿಲ್ಲದ ಇಂಥ ಕಾರ್ಯಗಳನ್ನು ಕೈಕೊಳ್ಳುವದು ಪ್ರಕೃತದಲ್ಲಿ ಸಾಧ್ಯವಲ್ಲ. ಆದುದರಿಂದ ನಮ್ಮ ಆಶೋತ್ತರಗಳನ್ನೆಲ್ಲಾ ಕೈಗಾರಿಕೆಯ ವಿದ್ಯಾಭ್ಯಾಸದಲ್ಲಿ ಅಡಕ ಮಾಡಿದ್ದೇ ವಿವೇಕವಾಯಿತೆಂದು ತೋರುತ್ತದೆ. ಈ ವಿದ್ಯಾಭ್ಯಾಸದ ಏರ್ಪಾಡನ್ನು ಶ್ರೀಮನ್ಮಹಾರಾಜರವರು ಕಳೆದ ಏಪ್ರಿಲ್ ತಿಂಗಳಲ್ಲಿ ಮಂಜೂರ್ಮಾಡಿದ್ದಾರೆ.

ಕೈಗಾರಿಕೆ ವಿದ್ಯಾಭ್ಯಾಸ.—"ಈ ಕೈಗಾರಿಕೆ ವಿದ್ಯಾಭ್ಯಾಸವನ್ನು ಏರ್ಪಡಿಸಿದ್ದು ಕೇವಲ ಶಾಸ್ತ್ರೀಯ ವಿಷಯಗಳನ್ನಾಗಲಿ ಕೇವಲ ವಿಚಾರಭಾಗಗಳನ್ನಾಗಲಿ ಕಲಿಸುವ ಉದ್ದೇಶದಿಂದ ಮಾಡಿದ್ದಲ್ಲ; ಮತ್ತೇನೆಂದರೆ ಪ್ರಜೆಗಳಿಗೆ ಈಗ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಡುವದಕ್ಕಾಗಿ, ಮರಗೆಲಸ, ನೆಯ್ಗೆಕೆಲಸ, ರೇಶ್ಮೆಪೈರುಮಾಡುವುದು, ಕಬ್ಬಿಣದಕೆಲಸ, ಚಿತ್ತದಕೆಲಸ, ಬಣ್ಣಗಾರಿಕೆ ಇವೇ ಮೊದಲಾದ ಕೆಲಸಗಳನ್ನೂ ವ್ಯಾಪಾರಗಳನ್ನೂ ಉತ್ತಮವಾದ ಮಾರ್ಗದಲ್ಲಿ ಕಲಿಸುವ ಉದ್ದೇಶದಿಂದಲೂ ಪ್ರತಿವರ್ಷದಲ್ಲೂ ಕೆಲವು ಹುಡುಗರಿಗೆ ತಮ್ಮ ಜೀವನೋಪಾಯವನ್ನು ಸಂಪಾದಿಸಿಕೊಳ್ಳುವಂತೆ ಕಸಬನ್ನೂ ಕಲಿಸುವ ಉದ್ದೇಶದಿಂದಲೂ ಏರ್ಪಾಡುಮಾಡಿದೆ." ಈ ಕೈಗಾರಿಕೆಯ ಪಾಠಶಾಲೆಗಳನ್ನು, ಕಾರ್ಖಾನೆಗಳಂತೆ, ಬಹಳಮಟ್ಟಿಗೆ ಲಾಭದಮೇಲೆ ದೃಷ್ಟಿಯಿಟ್ಟು ನಡಿಸಬೇಕು. ಇದಕ್ಕೆ ಅಂಕುರಪ್ರಾಯವಾಗಿ ಮೊದಲು ಚೆನ್ನಪಟ್ಟಣ, ಸಾಗರ, ಚಿತ್ರದುರ್ಗ, ಚಿಕ್ಕಮಗಳೂರು, ಶಿವಮೊಗ್ಗ ಈ ಸ್ಥಳಗಳಲ್ಲಿ ಕೈಗಾರಿಕೆ ಪಾಠಶಾಲೆಗಳನ್ನು ಇಡುವಂತೆ ಮಾಡಿದೆ. ಯಾವಯಾವ ಪಾಠಶಾಲೆಗಳಲ್ಲಿ ಮರಗೆಲಸವೂ ಕಬ್ಬಿಣಗೆಲಸವೂ ನಡೆಯುತ್ತವೆಯೋ ಅಲ್ಲಲ್ಲಿ ಇತರ ಪದಾರ್ಥಗಳನ್ನು ಮಾಡುವದಲ್ಲದೆ, ಸುಲಭಕ್ರಯಕ್ಕೆ ದೊರಕುವ ಹಳ್ಳಿಯ ಬಂಡಿಗಳು, ಒಳ್ಳೆ ನೇಗಿಲುಗಳು ಇವೇ ಮೊದಲಾದ ಉತ್ತಮವಾದ ವ್ಯವಸಾಯದ ಮುಟ್ಟುಗಳನ್ನೂ ತಯಾರ್ಮಾಡಲಾಗುತ್ತದೆ. ಹೀಗೆ ಅಭಿವೃದ್ಧಿಗೆ ತಂದ ಮುಟ್ಟುಗಳನ್ನು ಉಪಯೋಗಿಸಿ ಕಾರ್ಯತಃ ಪರೀಕ್ಷಿಸಿ ನೋಡಿ ಅವುಗಳು ಇಲ್ಲಿಯ ಸನ್ನಿವೇಶಗಳಿಗೆ ತಕ್ಕವಾಗಿ ಕಂಡು ಬಂದಲ್ಲಿ ಅವುಗಳ ಮಾದರಿಗಳನ್ನು ಇಂಥ ತರಗತಿಗಳಿರುವ ಎಲ್ಲಾ ಕೈಗಾರಿಕೆಯ ಪಾಠಶಾಲೆಗಳಿಗೂ ಕಳುಹಿಸಿ ಕೊಡಲಾಗುತ್ತದೆ. ಈ ಸಂಸ್ಥಾನದಲ್ಲಿ ಕಲಿಸಲು ಅನುಕೂಲವಿಲ್ಲದ ಕೈಗಾರಿಕೆಗಳನ್ನು ಅನ್ಯತ್ರ ಕಲಿಸುವದಕ್ಕಾಗಿ ತಿಂಗಳಿಗೆ ತಲಾ 20 ರೂಪಾಯಂತೆ 20 ವಿದ್ಯಾರ್ಥಿ ವೇತನಗಳನ್ನು ಕೊಡಲಾಗುತ್ತದೆ. ಈ ವಿದ್ಯಾರ್ಥಿಗಳು ಮದ್ರಾಸಿನ ಅಥವಾ ಬೊಂಬಾಯಿನ ಕಲಾಪಾಠಶಾಲೆಯಲ್ಲಾಗಲಿ, ಇಲ್ಲವೇ ಬೊಂಬಾಯಿ ವಿಕ್ಟೋರಿಯಾ ಜ್ಯೂಬಿಲಿ ಇನ್ಸ್ಟಿಟ್ಯೂಟ್ ಎಂಬ ಪಾಠಶಾಲೆಯಲ್ಲಾಗಲಿ ಅಥವಾ ಇಂಥ ಕೈಗಾರಿಕೆಗಳನ್ನು ಕಲಿಸುವ ಇತರ ಪಾಠಶಾಲೆಗಳಲ್ಲಾಗಲಿ ಓದಬೇಕು.

ಹೊಳೆ ನರಸೀಪುರ, ದೊಡ್ಡಬಳ್ಳಾಪುರ, ಚಿಕ್ಕನಾಯಕನಹಳ್ಳಿ, ಮೊಳಕಾಲ್ಮುರು ಈ ಸ್ಥಳಗಳಲ್ಲಿ ನೆಯ್ಗೆ ಪಾಠಶಾಲೆಗಳನ್ನು ಇಡುವದಕ್ಕೂ ಅವುಗಳಿಗೆ ಸೇರಿದಹಾಗೆ ಮರಗೆಲಸವನ್ನೂ ಚಿತ್ರದ ಕೆಲಸವನ್ನೂ ಕಲಿಸುವ ತರಗತಿಯನ್ನು ಇಡುವದಕ್ಕೂ ಅಪ್ಪಣೆ ಕೊಟ್ಟಿದೆ. ನಾಡು ಮಗ್ಗಗಳಲ್ಲಿ, ತಾನಾಗಿ ಹಾರುವ ಲಾಳಿಯನ್ನು (fly shuttle) ಉಪಯೋಗಿಸಿ ಈ ಮಗ್ಗಗಳಲ್ಲಿ ನಾನಾತರದ ಬಟ್ಟೆಗಳ ನೆಯ್ಗೆಯನ್ನು ಈ ದೇಶದ ಹುಡುಗರಿಗೆ ಕಲಿಸುವದೇ ಈ ನೆಯ್ಗೆ ಪಾಠಶಾಲೆಗಳಲ್ಲಿ ನಡೆಯುವ ವಿಶೇಷ ವಿಷಯವಾಗಿದೆ. ಈ ನೆಯ್ಗೆ ಪಾಠಶಾಲೆಗಳು ಒಂದು ಕ್ರಮಕ್ಕೆ ಬಂದು ಕೆಲಸಕ್ಕೆ ಮೊದಲು ಮಾಡಿದಬಳಿಕ ಅವುಗಳಿಗೆ ಸೇರಿದಹಾಗೆ ಬಣ್ಣಹಾಕುವ ತರಗತಿಗಳನ್ನೂ ಇಡಲಾಗುತ್ತದೆ.

ಬೆಂಗಳೂರಲ್ಲಿ ಮಿ॥ ತಾತಾಯವರ ಪರೀಕ್ಷಾಕ್ಷೇತ್ರದಲ್ಲಿ ಹಿಪ್ಪಲ್ನೇರಲೆಯನ್ನು ಚೆನ್ನಾಗಿ ಬೆಳೆಯುವ ಕ್ರಮವನ್ನೂ, ರೇಶ್ಮೆಹುಳು ಸಾಕುವದನ್ನೂ, ರೇಶ್ಮೆದಾರದ ಕಂಟಿಗೆ ಸುತ್ತುವದನ್ನೂ ಕಲಿಯುವದಕ್ಕಾಗಿ, ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಕೆಲವರು ಉಪಾಧ್ಯಾಯರುಗಳನ್ನು ಆರಿಸಿಕೊಂಡು ಪರೀಕ್ಷಾರ್ಥವಾಗಿ ಅವರನ್ನು ಮೂರು ಮೂರು ತಿಂಗಳುಕಾಲ ಅಲ್ಲಿಗೆ ಕಳುಹಿಸಿಕೊಡಲಾಗುತ್ತದೆ. ಈ ಉಪಾಧ್ಯಾಯರು ಜಪಾನ್ ದೇಶದಲ್ಲಿರುವ ಸ್ಪೆಷಲ್ ಇನ್ಸ್ಪೆಕ್ಟರುಗಳ ಹಾಗೆಯೇ, ಸೂಕ್ಷ್ಮದರ್ಶಕಗಳ ಸಹಾಯದಿಂದ ರೋಗವಿದ್ದ ಹುಳುಗಳನ್ನು ತೆಗೆದುಹಾಕಿ ಸರ್ವದಾ ಒಳ್ಳೇ ಹುಳುಗಳನ್ನೇ ಪೈರು ಮಾಡುವದಕ್ಕೆ ಸಹಾಯವಾಗುವಂತೆ, ಅವರಿಗೆ ವಿದ್ಯೆಯನ್ನು ಕಲಿಸುವದೇ ಈ ಏರ್ಪಾಡಿನ ಮುಖ್ಯೋದ್ದೇಶವಾಗಿದೆ.

ಈ ಕಾರ್ಯಗಳಿಗಾಗಿಯೂ ಇದೇ ರೀತಿಯಾಗಿ ಕೆಲಸ ಮಾಡುತ್ತಿರುವ ಸಾವ್ಕಾರಿ ಪಾಠಶಾಲೆಗಳಿಗೆ ಸಹಾಯ ಮಾಡುವದಕ್ಕಾಗಿಯೂ ಶ್ರೀಮನ್ಮಹಾರಾಜರವರು ಕಳೆದ ಏಪ್ರಿಲ್ ತಿಂಗಳಲ್ಲಿ ಲೋಕಲ್‌ಫಂಡ್ ಜನರಲ್ ಬಾಬಿನಿಂದ ವರ್ಷಕ್ಕೆ 30,000 ರೂಪಾಯನ್ನು ಕೊಡುವಂತೆ ಅಪ್ಪಣೆ ಮಾಡಿದ್ದಾರೆ.

ಇನ್ನು ಕೆಲವು ವರ್ಷಗಳವರೆಗೆ ಈಗಿರುವ ಕೈಗಾರಿಕೆ ಕೆಲಸಗಳನ್ನು ಪ್ರಕೃತದಲ್ಲಿ ಸಾಧ್ಯವಾಗಿರುವದಕ್ಕಿಂತಲೂ ವಿಶೇಷವಾಗಿ ಕ್ರಮಪಡಿಸಿ ಅಭಿವೃದ್ಧಿಗೆ ತಂದರೆ ಸಾಕಾಗಿರುವದೆಂದು ನನಗೆ ತೋರುತ್ತದೆ. ಇದಕ್ಕಾಗಿ ಇಲ್ಲಿಯ ಕೈಗಾರಿಕೆ ಕೆಲಸದವರ ತಿಳವಳಿಕೆಯನ್ನು ಬಲಪಡಿಸುವದು ಅತ್ಯವಶ್ಯಕವಾಗಿದೆ. ಕೈಗಾರಿಕೆ ಕೆಲಸದವರಿಗೆ ತಮ್ಮ ಕಸಬುಗಳ ವಿಷಯವಾಗಿ ಸಮಂಜಸವಾಗಿಯೂ ಕ್ರಮವಾಗಿಯೂ ಪರ್ಯಾಲೋಚನೆ ಮಾಡುವಂತೆ ಕಲಿಸಿದರೆ ಬಹಳ ಕೆಲಸ ಮಾಡಿದಂತಾಗುತ್ತದೆ. ಕೈಗಾರಿಕೆಯ ಪಾಠಶಾಲೆಗಳಿಗೆ ಹುಡುಗರನ್ನು ಸೇರಿಸಿಕೊಳ್ಳುವ ವಿಷಯದಲ್ಲಿ ಅವರ ತಾಯಿತಂದೆಗಳ ಕಸಬುಗಳಿಗೆ ವಿಶೇಷವಾಗಿ ಗಮನವನ್ನು ಕೊಡುವದು ಮಾತ್ರವೇ ಅಲ್ಲದೆ ಈ ಹುಡುಗರು ಅಲ್ಲಿಯ ಓದಿನಿಂದ ಪ್ರಯೋಜನಹೊಂದಿ ಅಲ್ಲಿ ಉಪಯೋಗಿ

ಸುವ ಶ್ರೇಷ್ಠವಾದ ಉಪಕರಣಗಳ ಪ್ರಯೋಜನವನ್ನು ತಿಳಿದುಕೊಳ್ಳುವಷ್ಟು ಜಾಣತನವುಳ್ಳವರೇ ಎಂಬುದನ್ನು ವಿಚಾರಿಸುವದೂ ಅವಶ್ಯಕವಾಗಿದೆ. ಇದೂ ಅಲ್ಲದೆ, ಆ ಹುಡುಗರಿಗೆ, ಸಂಘೀಭವಿಸಿ ಕೆಲಸಮಾಡುವದರಿಂದ ಉಂಟಾಗುವ ಪ್ರಯೋಜನವನ್ನು ಚೆನ್ನಾಗಿ ಮುಂಚಿಟ್ಟು ಮಾಡಿಕೊಡಬೇಕು. ಇದರಿಂದ ಅವರು ಮುಂದೆ ತಮ್ಮ ಕಸಬನ್ನು ಕೈಕೊಂಡಾಗ ಒಬ್ಬೊಬ್ಬರೆ ಬೇರೆ ಬೇರೆಯಾಗಿ ಕೆಲಸ ಮಾಡಿಕೊಂಡು ತಮ್ಮ ಬುದ್ಧಿಯನ್ನೂ ಸಾಮರ್ಥ್ಯವನ್ನೂ ವೃಥಾ ಪೋಲುಮಾಡದೆ ಸಂಘೀಭವಿಸಿ ವಿಶೇಷ ಪ್ರಯೋಜನವನ್ನು ಹೊಂದುವಂತೆ ಆಗಬೇಕು. ನೆಯ್ಗೆಯವರ ಪ್ರಯೋಜನಕ್ಕಾಗಿ ಅನ್ಯೋನ್ಯ ಸಹಾಯಕ ಸಂಘಗಳನ್ನು ಏರ್ಪಡಿಸಬೇಕೆಂದು ಮೆ॥ ಭಾಭಾಸಾಹೇಬರವರು ಕೊಟ್ಟ ಸಲಹೆಗಳ ವಿಷಯವಾಗಿ ಅಭಿಪ್ರಾಯ ಕೊಡುವಂತೆ, ಡೆಪ್ಯುಟಿಕಮಿಷನರುಗಳಿಗೆ ಕಳುಹಿಸಿದೆ. ವ್ಯವಸಾಯಗಾರರಿಗೆ ವ್ಯವಸಾಯದ ಬ್ಯಾಂಕುಗಳು ಹೇಗೆ ಅವಶ್ಯಕವಾಗಿವೆಯೋ ಹಾಗೆಯೇ ಎಲ್ಲಾ ತರದ ಕೈಗಾರಿಕೆ ಕೆಲಸದವರಿಗೂ ಅಂಥ ಸಂಘಗಳು ಅವಶ್ಯಕವಾಗಿವೆ.

ಕೈಗಾರಿಕೆಯವರ ಸಾಮರ್ಥ್ಯವನ್ನೂ ಅವರ ಉಪಕರಣಗಳನ್ನೂ ಅಭಿವೃದ್ಧಿಗೆ ತರುವದಲ್ಲದೆ ಅವರ ಕಸುಬುಗಳಿಗೂ ಗೌರವವನ್ನು ಉಂಟುಮಾಡಬೇಕು. ಈಗ ಅವುಗಳಿಗೆ ವಿಶೇಷ ಗೌರವವಿರುವದಿಲ್ಲವಾದ್ದರಿಂದ ಮೇಲುದರ್ಜೆಗೆ ಸೇರಿದ ಜನರು, ಅವುಗಳಿಗೆ ಗೌರವವಿದ್ದಲ್ಲಿ ಎಷ್ಟು ಧಾರಾಳವಾಗಿ ಪ್ರವೇಶಿಸುತ್ತಿದ್ದರೊ ಅಷ್ಟು ಧಾರಾಳವಾಗಿ ಪ್ರವೇಶಿಸುವದಿಲ್ಲ. ಈ ಉದ್ದೇಶವನ್ನು ನೆರವೇರಿಸುವದಕ್ಕಾಗಿ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಕೆಲವು ಕಸುಬುಗಳನ್ನು ಕಲಿಸಿಕೊಡುವದು ಒಳ್ಳೆಯದೆಂದು ತೋರುತ್ತದೆ. ಇದರಿಂದ ಅವರಿಗೆ ಆ ಕಸಬಿನಲ್ಲಿ ಪಾಂಡಿತ್ಯವನ್ನು ಉಂಟುಮಾಡಬೇಕಾದ್ದಿಲ್ಲ; ಆಯಾ ಕಸಬುಗಳ ಅಭಿವೃದ್ಧಿಯಲ್ಲಿ ಅವರಿಗೆ ಕುತೂಹಲವುಂಟಾಗುವಂತೆ ಮಾಡಿದರೆ ಸಾಕಾಗಿರುತ್ತದೆ. ಮತ್ತೂ ಮೇಲುದರ್ಜೆಯ ಜನರಲ್ಲಿ ಕೈಗಾರಿಕೆ ಕಲೆಗಳ ತಿಳುವಳಿಕೆಯನ್ನು ಹೆಚ್ಚಿಸುವದಕ್ಕಾಗಿ ಅನ್ಯದೇಶಗಳಲ್ಲಿ ಕೆಲವು ಉಪಯುಕ್ತವಾದ ಕೈಗಾರಿಕೆಗಳನ್ನು ಕಲಿತುಕೊಂಡು ಬರುವಂತೆ ಕೆಲ ವಿದ್ಯಾರ್ಥಿಗಳನ್ನು ಕಳುಹಿಸಿದರೆ ಬಹಳ ಪ್ರಯೋಜನವುಂಟು. ಪ್ರಕೃತದಲ್ಲಿ ಮೂರುಮಂದಿ ಮೈಸೂರು ವಿದ್ಯಾರ್ಥಿಗಳು ಷಿನಕ್ಟಾಡಿ ಎಂಬಲ್ಲಿ ಜನರಲ್ ಇಲೆಕ್ಟ್ರಿಕ್ ಕಂಪೆನಿಯವರ ಕಾರ್ಖಾನೆಯದಲ್ಲಿ ವಿದ್ಯುಚ್ಛಕ್ತಿ ಇಂಜನಿಯರಿಂಗ್ ಕೆಲಸವನ್ನೂ ಅದಕ್ಕೆ ಸಂಬಂಧಪಟ್ಟ ಇತರ ವಿಷಯಗಳನ್ನೂ ಕಲಿಯುತ್ತಿದಾರೆ. ಈವರ್ಷ, ಭೂಗರ್ಭಶಾಸ್ತ್ರದ ಪ್ರೌಢಭಾಗಗಳನ್ನು ಕಲಿಯುವದಕ್ಕಾಗಿ ಜಿಯೊಲಾಜಿಕಲ್ ಇಲಾಖೆಯ ಮೆ॥ ಬಿ. ಜಯರಾವ್ ಎಂಬವರನ್ನು ಶ್ರೀಮನ್ಮ[illegible] ರಾಜರವರು ಇಂಗ್ಲೆಂಡಿಗೆ ಕಳುಹಿಸಿಕೊಟ್ಟಿದ್ದಾರೆ. ಆದರೆ ಆ ವಿದ್ಯಾರ್ಥಿಗಳು ಹಿಂತಿರುಗಿ ಇಲ್ಲಿಗೆ ಬಂದಾಗ ಕೆಲಸ ದೊರೆಯದೆ ನಿರಾಶರಾಗಿ ಹೋಗದಂತೆ ನೋಡಿಕೊಳ್ಳುವದಕ್ಕಾಗಿ, ವಿದ್ಯಾರ್ಥಿಗಳನ್ನು ಆರಿಸುವಾಗಲೇ, ಮೊದಲೇ ಊನದಾದರೂ ಕಸುಬಿನಲ್ಲಿದ್ದವರಲ್ಲಾಗಲಿ ಇತರ ವಿಧವಾದ ಯೋಗ್ಯತೆಯುಳ್ಳವರಲ್ಲಾಗಲಿ ನಮ್ಮ ಕೆಲಸಗಳಿಗೆ ಎಷ್ಟುಮಂದಿ ಪ್ರಕೃತವೊ ಅಷ್ಟಕ್ಕೆ ಮೀರದಂತೆ ವಿದ್ಯಾರ್ಥಿಗಳನ್ನು ಆರಿಸಿಕೊಳ್ಳಬೇಕು.

ಸಾಮಾನ್ಯ ವಿದ್ಯಾಭ್ಯಾಸ.—ಈ ವರ್ಷವಿದ್ದ ಸರಕಾರಿ ಪಾಠಶಾಲೆಗಳ ಸಂಖ್ಯೆ 2,232; ಇವುಗಳಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ 92,959 ಸರ್ಕಾರಿಯಲ್ಲದ ಪಾಠಶಾಲೆಗಳ ಸಂಖ್ಯೆ 1,646, ಅಲ್ಲಿನ ವಿದ್ಯಾರ್ಥಿಗಳ ಸಂಖ್ಯೆ 19,105. ಈ ವಿದ್ಯಾರ್ಥಿಗಳ ಸಂಖ್ಯೆಯು ಹಿಂದಿನ ವರ್ಷಕ್ಕಿಂತ ಕಡಿಮೆಯಾಗಿದೆ. ಓದುವ ಗಂಡುಹುಡುಗರ ಸಂಖ್ಯೆ 95,278 ಹೆಣ್ಣುಹುಡುಗರ ಸಂಖ್ಯೆಯು 16,786.

ಅಲಿಘರ್ರಲ್ಲಿ ಸರ್ ಸಯ್ಯದ್ ಅಹಮದ್‌ಖಾನರವರಿಂದ ಸ್ಥಾಪಿಸಲ್ಪಟ್ಟ ಪ್ರಖ್ಯಾತವಾದ ಪಾಠಶಾಲೆಯಲ್ಲಿ ಓದುವದಕ್ಕೆಹೋದ ಇಬ್ಬರು ಮುಹಮ್ಮದೀಯ ವಿದ್ಯಾರ್ಥಿಗಳಿಗೆ ಪ್ರಥಮತಃ ಈ ವರ್ಷ ಎರಡು ವಿದ್ಯಾರ್ಥಿ ವೇತನಗಳು ಕೊಡಲ್ಪಟ್ಟವು. ಸ್ಕೂಲಿಗೆ ಹೋಗುವ ವಯಸ್ಸಿನ ಮುಹಮ್ಮದೀಯ ಹುಡುಗರ ಒಟ್ಟು ಸಂಖ್ಯೆ ಸುಮಾರು 35,000. ಈಪೈಕಿ ನೂರಕ್ಕೆ 42 ಕ್ಕಿಂತ ಹೆಚ್ಚಾಗಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಆದರೂ ಇವರಲ್ಲಿ 123 ಮಂದಿಮಾತ್ರವೇ 1902 ನೆಯ ವರ್ಷದಲ್ಲಿ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದದನ್ನು ನೋಡಿದರೆ ಇವರನ್ನು ಇನ್ನೂ ಪ್ರೋತ್ಸಾಹಪಡಿಸುವದು ಉಚಿತವಾಗಿ ಕಾಣುತ್ತದೆ.

ಮಹಾರಾಣಿಯವರ ಮೈಸೂರು ಕಾಲೇಜು, ಫಸ್ಟ್‌ಗ್ರೇಡ್ ಕಾಲೇಜಾಗಿ, ಮದರಾಸ್ ಯೂನಿವರ್ಸಿಟಿಗೆ ಸೇರಿಸಲ್ಪಟ್ಟಿತು. ಒಬ್ಬ ವಿದ್ಯಾರ್ಥಿನಿಯು ಬಿ. ಎ. ಪರೀಕ್ಷೆಯಲ್ಲಿ ಎರಡು ಭಾಗಗಳಲ್ಲಿಯೂ ಮತ್ತೊಬ್ಬಳು ಒಂದುಭಾಗದಲ್ಲಿಯೂ ಉತ್ತೀರ್ಣರಾದರು. ಇನ್ನೊಬ್ಬಳು ಎಫ್. ಎ. ಪರೀಕ್ಷೆಯಲ್ಲಿ ಗೆದ್ದಳು. ಈ ಕಾಲೇಜಿಗೆ ಸತ್ಕುಲ ಪ್ರಸೂತರಾದ ನೇಟಿವ್ ಕ್ರಿಶ್ಚಿಯನ್ ವಿದ್ಯಾರ್ಥಿನಿಯರನ್ನು ಸೇರಿಸುವದಾಗಿ ಹೊಸದಾದ ಒಂದು ಏರ್ಪಾಡು ಮಾಡಲಾಯಿತು. ಆದಿಭಾಗದಲ್ಲಿ ಜಾತಿ ನಿಯಮಗಳಿಗೆ ಒಳಪಟ್ಟವರಿಗೆಮಾತ್ರ ವಿದ್ಯಾಭ್ಯಾಸ ಮಾಡಿಸುತ್ತಿದ್ದ ಈ ಕಾಲೇಜು ಈ ಕಾಲದ ಸನ್ನಿವೇಶಕ್ಕೆ ಅನುಸಾರವಾಗಿ ಕ್ರಮ ಕ್ರಮವಾಗಿ ಆ ನಿರ್ಬಂಧಗಳನ್ನು ಬಿಡುತ್ತ ಬಂದು ಇತರರ ವಿದ್ಯಾಭ್ಯಾಸಕ್ಕೂ ಅವಕಾಶವನ್ನು ಉಂಟುಮಾಡಿದೆ.

ವೈದ್ಯ ಮತ್ತು ಇಂಜನಿಯರಿಂಗ್ ವಿದ್ಯಾರ್ಥಿಗಳ ವೇತನಕ್ಕೆ ಸಂಬಂಧಪಟ್ಟ ನಿಬಂಧನೆಗಳನ್ನೂ ತಿದ್ದುಪಾಟುಮಾಡಲಾಯಿತು. ಮೈಸೂರಿನಲ್ಲಿ ಹೊಸದಾಗಿ ಸ್ಥಾಪಿಸಿದ ಕಿವುಡು ಮೂಗರ ಪಾಠಶಾಲೆಗೆ ಹೊಸದಾಗಿ ಗ್ರಾಂಟುಕೊಡಲಾಯಿತು. ಕಳೆದ ಜೂನ್ 15ರಿಂದ ಮೈಸೂರಿನಲ್ಲಿ ಒಂದು ಪ್ರತ್ಯೇಕವಾದ ಇಂಜನಿಯರಿಂಗ್ ಪಾಠಶಾಲೆಯನ್ನೂ ಇಡಲಾಯಿತು. ಎಡಿಂಬರೊ ಇಂಡಿಯನ್ ಅಸೋಸಿಯೇಷನ್ ಎಂಬ ಸಂಘಕ್ಕಾಗಿ ಈವರ್ಷ ಶ್ರೀಮನ್ಮಹಾರಾಜರವರು 200 ಗಿನಿ ಚಂದಾವನ್ನು ಕೊಡಿಸಿದರು.

ರಾಜ್ಯವನ್ನು ವಹಿಸಿಕೊಂಡಂದಿನಿಂದೀಚೆಗೆ ಜನರ ಸಾಮಾನ್ಯವಿದ್ಯಾಭ್ಯಾಸವು ಬಹಳಮಟ್ಟಿಗೆ ಅಭಿವೃದ್ಧಿಗೆ ಬಂದಿದ್ದಾಗ್ಯೂ, ಪ್ರಜೆಗಳಲ್ಲಿ, ಇನ್ನೂ ಜ್ಞಾನವೆಂಬ ಬೆಳಕು ಸೋಕದ, ಅಪಾರವಾದ ಅಜ್ಞಾನಾಂಧಕಾರವು ನೆಲೆಗೊಂಡಿದೆ. 55 ಲಕ್ಷಪ್ರಜೆಗಳಲ್ಲಿ 2,62,092 ಮಂದಿ ಮಾತ್ರವೇ, ಎಂದರೆ ನೂರಕ್ಕೆ 4·8ರಷ್ಟು ಮಾತ್ರ—ಓದುಬರಹ ತಿಳಿದವರೆಂದು—ಎಂದರೆ ನೂರಕ್ಕೆ 95·2ರಂತೆ ಏನೂ ತಿಳಿಯದವರೆಂದು—1901 ನೆಯ ವರ್ಷದ ಸೆನ್ಸಸಿನಿಂದ ಗೊತ್ತಾಗುತ್ತದೆ. ಓದುಬರಹ ಬರುವ ಪುರುಷರ ಮತ್ತು ಸ್ತ್ರೀಯರ ಸಂಖ್ಯೆಯನ್ನು ಪ್ರತ್ಯೇಕವಾಗಿ ನೋಡುವಲ್ಲಿ ಪುರುಷರಲ್ಲಿ 2,46,886 ಮಂದಿ ಎಂದರೆ ನೂರಕ್ಕೆ 8·8 ರಂತೆಯೂ ಸ್ತ್ರೀಯರಲ್ಲಿ 17,206 ಮಂದಿ ಎಂದರೆ ನೂರಕ್ಕೆ ·6 ರಂತೆಯೂ ಓದುಬರಹ ಬಲ್ಲವರೆಂದು ತಿಳಿಯಬರುತ್ತದೆ. ಸ್ಕೂಲಿಗೆ ಹೋಗುವ ವಯಸ್ಸಿನ ಹುಡುಗರ ಲೆಕ್ಕವನ್ನು ನೋಡಿದಾಗಲೂ ಇದೇ ರೀತಿಯಾದ ಅಸಮಾಧಾನ ವುಂಟಾಗುತ್ತದೆ. ಓದುವ ಗಂಡುಹುಡುಗರ ಸಂಖ್ಯೆಯು ನೂರಕ್ಕೆ 23·9 ರಂತೆಯೂ ಹೆಣ್ಣು ಹುಡುಗಿಯರ ಸಂಖ್ಯೆಯು 4·15 ರಂತೆಯೂ ಎಂದರೆ ಹೆಣ್ಣು ಗಂಡು ಒಟ್ಟುಸಂಖ್ಯೆಯಲ್ಲಿ ನೂರಕ್ಕೆ 13·62 ರಂತೆ ಆಗುತ್ತದೆ. ಪಟ್ಟಣಗಳು ಹಳ್ಳಿಗಳು ಇವುಗಳ ಒಟ್ಟು ಸಂಖ್ಯೆಯನ್ನು ಪಾಠಶಾಲೆಗಳ ಒಟ್ಟು ಸಂಖ್ಯೆಯನ್ನೂ ಹೋಲಿಸಿನೋಡಿದರೆ ನೂರಕ್ಕೆ 23·29 ಪಾಠಶಾಲೆಗಳಿದ್ದಂತೆ ಆಗುತ್ತದೆ. ಆದಪ್ರಯುಕ್ತ ಕ್ಷಿಪ್ರದಲ್ಲಿಯೇ ಈ ಭಯಂಕರವಾದ ಅಜ್ಞಾನಾಂಧಕಾರವನ್ನು ತೊಲಗಿಸಿ ಸಾಮಾನ್ಯವಿದ್ಯಾಭಿವೃದ್ಧಿಗೆ ಸಹಾಯಮಾಡಿ, ಬುದ್ಧಿ ಸಂಸ್ಕಾರವನ್ನೂ ಉಂಟುಮಾಡಿ ಮುಖ್ಯವಾಗಿ ಕೈಗಾರಿಕೆಯಲ್ಲಿಯೂ ವ್ಯಾಪಾರದಲ್ಲಿಯೂ ಇತೋಪ್ಯಧಿಕವಾದ ತಿಳುವಳಿಕೆಯನ್ನು ಉಂಟುಮಾಡುವದು ಸುಲಭಸಾಧ್ಯವಾಗಿ ಕಾಣುವದಿಲ್ಲ. ಬಾಲ್ಯಪಾಠಶಾಲೆಗಳಲ್ಲಿಯೂ ಮಧ್ಯಪಾಠಶಾಲೆಗಳಲ್ಲಿಯೂ ನಡೆಯುವ ವಿದ್ಯಾಭ್ಯಾಸವನ್ನು ಇನ್ನೂ ವಿಸ್ತರಿಸಿ ಅವುಗಳನ್ನು ಬಲಪಡಿ[illegible]ದಕ್ಕಾಗಿ ವಿದ್ಯಾಭ್ಯಾಸದ ಇಲಾಖೆಗೆ, ಈಗ ನಮಗೆ ಇರುವ ಶಕ್ತಿಗೆ ಮೀರಿ, ಹಣವನ್ನು ಕೊಡಬೇಕಾಗುತ್ತದೆ. ಪ್ರಕೃತದಲ್ಲಿ ಲೋಕಲ್‌ಫಂಡ್ಸ್ ಜನರಲಿಂದ ವಿದ್ಯಾಭ್ಯಾಸಕ್ಕಾಗಿ ಸಲ್ಲುತ್ತಿದ್ದ ಹಣವನ್ನು ಶೇಕಡ 25ರಿಂದ 33 ಕ್ಕೆ ಹೆಚ್ಚಿಸಿ, ಈ ಕೆಲಸವನ್ನು ನೆರವೇರಿಸಲು ಯಥೋಚಿತವಾಗಿ ಪ್ರಯತ್ನಮಾಡಿದೆ.

ರೆವಿನ್ಯು ಇಲಾಖೆಯ ಹೊಸಏರ್ಪಾಡು.—1887ರಲ್ಲಿ ಇಲಾಖಾಧಿಕಾರಿಗಳನ್ನು ಬೇರೆಬೇರೆಯಾಗಿ ವಿಭಾಗಮಾಡುವ ಉದ್ದೇಶದಿಂದ ಆರಂಭಿಸಿದ ಕಾರ್ಯವು, ರೆವಿನ್ಯೂ ಇಲಾಖೆಯ ಮುಖ್ಯಾಧಿಕಾರಿಯಾಗಿ ಒಬ್ಬ ರೆವಿನ್ಯೂಕಮಿಷನರನ್ನು ನೇಮಿಸಿದ್ದರಲ್ಲಿ ಪೂರ್ತಿಗೆ ಬಂದಿದೆ. ಇನ್ನು ಮೇಲೆ ಈ ಏರ್ಪಾಡಿನಿಂದ ಆ ಇಲಾಖೆಯ ನಡವಳಿಕೆಗಳು ಸ್ಥಳಭೇದವಿಲ್ಲದೆ ಒಂದೇ ರೀತಿಯಾಗಿ ನಡೆದು ತಕ್ಕಷ್ಟು ಮೇಲ್ವಿಚಾರಣೆಗೆ ಸಹಾಯವಾಗುವದೆಂದು ನಿರೀಕ್ಷಿಸಿದೆ. ರೆವಿನ್ಯೂ ಅಸಿಸ್ಟೆಂಟು ಕಮಿಷನರುಗಳ ಕೆಲಸವನ್ನೂ ಅಧಿಕಾರವನ್ನೂ ಕ್ಲಿಪ್ತಮಾಡಿದೆ. ಅವರಿಂದ ಆಗುವ ಪ್ರಯೋಜನಗಳನ್ನು ಹೆಚ್ಚಿಸುವ ಉದ್ದೇಶದಿಂದ ಅವರನ್ನು ತರಬಿಯತ್ತು ಮಾಡುವದಕ್ಕಾಗಿ ಕೆಲವು ಏರ್ಪಾಡುಗಳನ್ನೂ ಮಾಡಿದೆ. ಹೀಗೆಯೇ ಅಮಲ್ದಾರರಿಗೆ ಚೆನ್ನಾಗಿ ಸವಾರಿ ಬರುವದು ಒಂದು ಅವಶ್ಯಕವಾದ ಯೋಗ್ಯತೆ ಎಂದು ಗೊತ್ತುಮಾಡಿದೆ.

ಆಬ್ಕಾರಿ.—ಸಾರಾಯಿಮಾಡಿ ಸರಬರಾಯಿಮಾಡುವ ಹೊಸಕಂಟ್ರಾಕ್ಟಿನಪ್ರಕಾರ ಗ್ಯಾಲನ್ ಒಂದಕ್ಕೆ $6\frac{1}{3}$ ಆಣೆಗೆ ಬದಲಾಗಿ $8\frac{1}{3}$ ಆಣೆಯ ಹೆಚ್ಚು ದರಕ್ಕೆ ಕೊಡಲಾಯಿತು. ಡಿಸ್ಟಿಲರಿಯಿಂದ ಮಾರಾಟಕ್ಕೆ ಕಳುಹಿಸಿದ್ದು 330,800 ಗ್ಯಾಲನ್ ಸಾರಾಯಿ. ಇದು ಹಿಂದಿನ ವರ್ಷಕ್ಕಿಂತ 20,000 ಗ್ಯಾಲೆನ್ನಷ್ಟು ಹೆಚ್ಚಾಗಿದೆ. ಕಳ್ಳತನದಿಂದ ಸಾರಾಯಿ ಮಾಡುವದನ್ನೂ ಕಳ್ಳತನದಿಂದ ಒಟ್ಟಿ ಇಳಿಸುವುದನ್ನೂ ಕಂಡು ಹಿಡಿದು ಅರವತ್ತೇಳಕ್ಕಿಂತ ಹೆಚ್ಚಾದ ಮೊಕದ್ದಮೆಗಳಲ್ಲಿ ಅಪರಾಧಿಗಳಿಗೆ ಶಿಕ್ಷೆ ಮಾಡಿಸಲಾಯಿತು.

ಹಿಂದಿನ ವರ್ಷ ಖರ್ಚಾದ ಸಾರಾಯಿಯೊಡನೆ ಹೋಲಿಸಿ ನೋಡಿದಾಗ ಮಾತ್ರ ಕಳೆದ ವರ್ಷದ ಖರ್ಚು ಹೆಚ್ಚಾಗಿ ಕಾಣುತ್ತದೆ. ಚಿಲ್ಲರೆ ಮಾರಾಟದ ದರವನ್ನು ಡ್ರಾಂ ಒಂದಕ್ಕೆ 1 ಆಣೆ 6ಪೈಯಿಂದ 2 ಆಣೆಗೆ ಹೆಚ್ಚುಮಾಡಿದ್ದರಿಂದ 1896—97ನೆಯ ವರ್ಷದಲಾಗಾಯಿತು ಸಾಮಾನ್ಯವಾಗಿ ಕುಡಿಯೋಣವು ಬಹಳ ಕಡಿಮೆಯಾಗಿದೆ. ಕಳೆದ ವರ್ಷಕ್ಕೆ ಹಿಂದಿನ 5 ವರ್ಷಗಳಲ್ಲಿ, ವರ್ಷ ಒಂದಕ್ಕೆ ಸರಾಸರಿ 410,136 ಗ್ಯಾಲನ್‌ಗಳು ಖರ್ಚಾಗುತ್ತಿದ್ದವು. ಇದು ಕಳೆದ ವರ್ಷದ ಖರ್ಚಿಗಿಂತ 79,136 ಗ್ಯಾಲನ್ನಷ್ಟು ಹೆಚ್ಚಾಗಿದೆ. ಇದರಿಂದ, ಸಾರಾಯಿನ ತೆರಿಗೆಯನ್ನೂ ಚಿಲ್ಲರೆ ಮಾರಾಟದ ದರವನ್ನೂ ಹೆಚ್ಚಿಸುವದರ ಮೂಲಕ, ಕುಡಿತ

664

ಆಹಾರದ ಧಾನ್ಯಗಳು ಅಗ್ಗವಾಗಿದ್ದದ್ದೇ ಹೀಗೆ ಎಲ್ಲಾ ಕಡೆಯಲ್ಲಿಯೂ ಕುಡಿತ ಹೆಚ್ಚುವದಕ್ಕೆ ಕಾರಣವಾಯಿತು.

4,46,748 ಮರಗಳಿಂದ ಸೇಂದಿ ಇಳಿಸಲ್ಪಟ್ಟಿತು. ಇದು ಹಿಂದಿನ ವರ್ಷಕ್ಕಿಂತ ಸುಮಾರು 12,000 ಹಷ್ಟು ಕಡಿಮೆಯಾಯಿತು. ಸರಾಸರಿ 6 ಗ್ರಾಮಗಳಿಗೊಂದು ಅಂಗಡಿಯಾಗುವಂತೆ, 2,890 ಸೇಂದಿ ಅಂಗಡಿಗಳಿದ್ದವು. ಅಕ್ಕಿಭೋಜವನ್ನು ಮಾರುವ ಅಂಗಡಿಗಳಿಗೆ ಲೈಸನ್ಸು ಕೊಡುವ ಪದ್ಧತಿಯು ಹೊಸದಾಗಿ ಜಾರಿಗೆ ತರಲ್ಪಟ್ಟಿತು.

ಸೇಂದಿ ಮರಗಳಿರುವ ಜಮೀನುಗಳು ಆಬ್ಕಾರಿ ಇಲಾಖೆಗೆ ಬೇಕಾದಪಕ್ಷದಲ್ಲಿ ಅವುಗಳನ್ನು ಸಂಪೂರ್ಣವಾಗಿ ಉಳಿಸಿಕೊಳ್ಳ ಬೇಕೆಂದೂ ಮರಗಳನ್ನುಮಾತ್ರ ಉಳಿಸಿಕೊಂಡು ಅಂಥ ಜಮೀನುಗಳನ್ನು ಸಾಗುವಳಿಗೆ ಕೊಡುತ್ತಿದ್ದ ಪದ್ಧತಿಯನ್ನು ತಪ್ಪಿಸಿ ಬಿಡಬೇಕೆಂದೂ ಶ್ರೀಮನ್ಮಹಾರಾಜರವರು ಆಜ್ಞಾಪಿಸಿದ್ದಾರೆ.

ಮರಗಳನ್ನು ಮಾತ್ರ ಉಳಿಸಿಕೊಳ್ಳುವದರಿಂದ ರೈತರಿಗೆ ಉಂಟಾಗಬಹುದಾದ ತೊಂದರೆಯನ್ನು ತಪ್ಪಿಸುವದಕ್ಕೋಸ್ಕರ ಹೀಗೆ ಮಾಡಲಾಯಿತು. ಹೀಗೆ ಸರಕಾರದವರು ಮಾಡಿಕೊಟ್ಟ ಸಹಾಯವು ರೈತರಿಗೆ ಅನುಕೂಲವಾಗಿರುವದೆಂದೂ ಇದರಿಂದ ಹಿಡುವಳಿದಾರರ ಜಮೀನುಗಳಲ್ಲಿರುವ ಮರಗಳೂ ಪೋಲಾಗದೆ ಉಳಿದು, ಮರದೆರಿಗೆಯೇರ್ಪಾಡಿನ ಪ್ರಕಾರ, ಅವರ ಮರಗಳ ಮೇಲೆ ಮರವಳಿಯುತ್ಪತ್ತಿಯಾಗಿ ಅವರಿಗೆ ನಿರಂತರವಾದ ಲಾಭವುಂಟಾಗುವದೆಂದೂ ನಂಬಿದೆ.

ಜಂಗಲು—ಈ ಇಲಾಖೆಯ ನಿಬಂಧನೆಗಳ ಕಾನೂನು ಬಹಳ ಕಾಲದಿಂದ ಸರ್ಕಾರದವರ ಪರ್ಯಾಲೋಚನೆಯಲ್ಲಿತ್ತು. ಇದರಲ್ಲಿ ಲೆಕ್ಕಕ್ಕೆ ಸಂಬಂಧಪಟ್ಟ ಮೊದಲನೆಯ ಭಾಗವು 1902ನೆಯ ಇಸವಿ ಸೆಪ್ಟಂಬರು ಗುರ್ರೆಲಾಗಾಯಿತು ಜಾರಿಗೆ ತರಲ್ಪಟ್ಟಿತು. ಡಿಸ್ಟ್ರಿಕ್ಟು ಜಂಗಲುಗಳಿಂದ ತರಲ್ಪಡುವ ಸೌದೆಯ ತಲೆಹೊರೆಗಳಿಗೆ ಸುಂಕ ವಸೂಲ್ಮಾಡುವದನ್ನು ನಿಲ್ಲಿಸಿಬಿಟ್ಟಿತು. ಸ್ವಂತಹಿಡುವಳಿಯಲ್ಲಿರುವ ಗಂಧದಮರಗಳಿಗೆ ಸಂಭವಿಸುವ ನಷ್ಟವನ್ನು ಸರ್ಕಾರದವರಿಗೆ ತಿಳಿಸದೆ ತಪ್ಪಿದರೆ, ಕ್ರಿಮಿನಲ್ ಶಿಕ್ಷೆಯಾಗಬಹುದೆಂದು ಜಂಗಲಿ ಕಾನೂನಿನ 76 ನೆಯ ಪ್ರಕರಣಕ್ಕೆ ಅನುಸಾರವಾಗಿ ಮಾಡಲ್ಪಟ್ಟಿದ್ದ ನಿಬಂಧನೆಯನ್ನು ಗತವರ್ಷದಲ್ಲಿ ರದ್ದುಮಾಡಲಾಯಿತು.

ಸ್ಟೇಟ್ ಫಾರೆಸ್ಟಿಗೆ ಈಸಲ ಯಾವಪ್ರದೇಶವನ್ನೂ ಹೊಸದಾಗಿ ಸೇರಿಸಲಿಲ್ಲ; 329 ಚದರು ಮೈ[illegible]ಷ್ಟು ವಿಸ್ತೀರ್ಣವಾದ ಹೆಚ್ಚು ಭೂಮಿಯನ್ನು ಜಂಗ್ಲಿಗೋಸ್ಕರ ಉಳಿಸಿಕೊಂಡಿತು. ಸುಮಾರು 20 ಜಂಗ್ಲುಗಳ ಸೆಟಲ್ಮೆಂಟ್ ಪೂರ್ತಿಯಾಯಿತು. 511 ಮೈಲಿಗಳಷ್ಟು ಜಂಗಲಿ ಎಲ್ಲೆಮಾರ್ಗಗಳು ಗುರುತುಮಾಡಲ್ಪಟ್ಟವು. 800 ಮೈಲಿಯಷ್ಟು ಹಳೆಮಾರ್ಗಗಳಲ್ಲಿದ್ದ ಕಾಡು ಕಡಿಯಲ್ಪಟ್ಟಿತು. ಮುಖ್ಯವಾಗಿ ಶಿವಮೊಗ್ಗಾ, ತುಮಕೂರು, ಕೋಲಾರ ಡಿಸ್ಟ್ರಿಕ್ಟುಗಳಲ್ಲಿ 196 ಚದರಮೈಲಿಯಷ್ಟು ಕಾಡನ್ನು ಸರ್ವೆಮಾಡಲಾಯಿತು.

ಮರಮ್ಮತ್ತುಕಾಂಗಾರಿಗಳು ಕಟ್ಟಡಗಳು.—ಮುಖ್ಯವಾದ ಕಟ್ಟಡದ ಕೆಲಸಗಳಲ್ಲಿ ಮೈಸೂರು ಹೊಸ ಅರಮನೆಯನ್ನು ಕಟ್ಟುವ ಕೆಲಸವು ಬಹಳ ತೃಪ್ತಿಕರವಾಗಿ ನಡೆಯಿತು. ಇದಕ್ಕಾಗಿ ಈ ವರ್ಷ 2,60,000 ರೂಪಾಯಿ ಖರ್ಚಾಯಿತು. ದಸರಾ ದರ್ಬಾರ್ ಹಜಾರ, ಒಳತೊಟ್ಟಿ, ಕಲ್ಯಾಣಮಂಟಪ, ಹೊರಬಾಗಿಲ ಮುಂದುಗಡೆಯ ಮೊಗಸಾಲೆ, ಉತ್ತರದಕ್ಷಿಣದ ಮಹಡಿ ಮೆಟ್ಟಲುಗಳು, ಸರಸ್ವತೀಭಂಡಾರದ ಕಟ್ಟಡ, ಇವು ಮೊದಲನೆಯ ಅಂತಸ್ತಿನ ಮಾಳಿಗೆಯವರೆಗೆ ಸುಮಾರಾಗಿ ಮುಗಿದಿದ್ದವು.

4,63,582 ರೂಪಾಯಿ ಅಂದಾಜಾಗಿದ್ದ ಬೆಂಗಳೂರಲ್ಲಿರುವ ರಾಷ್ಟ್ರೀಯ ಯುದ್ಧಸಾಮಗ್ರಿವಾಹಕ ಸೈನ್ಯಗಳ (ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್) ಲೈನುಗಳು ತೃಪ್ತಿಕರವಾಗಿ ಮುಗಿದು ವಾಸಕ್ಕಾಗಿ ಮಿಲಿಟರಿ ಇಲಾಖೆಯವರಿಗೆ ಕೊಡಲ್ಪಟ್ಟವು.

ಬೆಂಗಳೂರಿನಲ್ಲಿರುವ ಹೊಸರೆವಿನ್ಯೂ ಸರ್ವೆ ಮತ್ತು ಲ್ಯಾಂಡ್ ರಿಕಾರ್ಡ್ಸ್ ಫೀಸು, ಶಿವಮೊಗ್ಗೆ ಆಂಗ್ಲೋವರ್ನಾಕ್ಯುಲರ್ ಸ್ಕೂಲ್, ಶ್ರೀನಿವಾಸಪುರದ ಹೊಸ ತಾಲೂಕು ಕಚೇರಿ, ಈ ಕಟ್ಟಡಗಳು ಕಾರ್ಯತಃ ಮುಗಿದವು.

ನೀರುಸರಬರಾಯಿ:—ಈ ಬಾಬಿಗೆ ಸಂಬಂಧಪಟ್ಟ ಮುಖ್ಯ ಕಾರ್ಯಗಳು ಯಾವವೆಂದರೆ—ಬೇತಮಂಗಲ, ಹೊಳಲಿ ಈ ಕೆರೆಗಳಿಂದ ಕೋಲಾರದ ಚಿನ್ನದ ಗಣಿಗೆ ನೀರು ಸರಬರಾಯ್ಮಾಡುವದಕ್ಕಾಗಿ 11ಲಕ್ಷ ಅಂದಾಜು ಮಂಜೂರಾಗಿ ಈವರ್ಷದಲ್ಲಿ ಕೆಲಸವನ್ನು ಚೆನ್ನಾಗಿ ಆರಂಭಿಸಲಾಯಿತು. ಇದರಿಂದ, ಬಂಡವಾಳದ ಮೇಲೆ, ಮೊದಲು 5 ವರ್ಷಕಾಲ ಸೇಕಡ 27 ರಂತೆಯೂ, ಆಮೇಲೆ 5 ವರ್ಷಕಾಲ ಸೇಕಡ 15 ರಂತೆಯೂ, ಉತ್ಪತ್ತಿಯಾಗುವ ಕಾರಣ ಈ ಕೆಲಸವು ಪೂರ್ತಿಯಾದಾಗ ಸರಕಾರಕ್ಕೆ ವಿಶೇಷ ಲಾಭಕರವಾಗಿರುವದು.

ನೀರಾವರಿ ಕಾಂಗಾರಿ.—ಮಾರಿಕಣಿವೆಯಲ್ಲಿ ನಡೆದ ಕೆಲಸವು ಪರಿಮಾಣದಲ್ಲಿಯೂ ಗುಣದಲ್ಲಿಯೂ ಎಂದಿನಂತೆ ತೃಪ್ತಿಕರವಾಗಿತ್ತು. ಈವರ್ಷದಲ್ಲಿ ಸುಮಾರು 12,28,000 ಸಲೆಅಡಿ ಕಲ್ಲುಕೆಲಸವು ನಡೆಯಿತು.

ಇದರಿಂದ ಕೆರೆಕಟ್ಟೆಯ ಎತ್ತರವು 50 ಅಡಿಯಿಂದ 86·75 ಅಡಿಗೆ ಹೆಚ್ಚಿತು. ಇಂಗ್ಲೆಂಡಿನಿಂದ ತರಿಸಿದ ತೂಬಿನ ಮುಚ್ಚಳಗಳು ಇಡಲ್ಪಟ್ಟವು. ತೂಬಿನ ಕಾಲುವೆಗಳೂ ಹಿಂದಿನ ತೊಟ್ಟಿಗಳೂ ಕಟ್ಟಿ ಮುಗಿದವು. ಮುಂದೆ ಪ್ರಕೃತಬಿದ್ದರೆ ಕೈಗಾರಿಕೆಯ ಕೆಲಸಗಳಿಗಾಗಿ ಜಲಪಾತದಿಂದ ವೈದ್ಯುತಶಕ್ತಿಯನ್ನು ಉಂಟುಮಾಡುವದಕ್ಕೋಸ್ಕರ ಕೀಳುಮಟ್ಟದ ಕಾಲುವೆಗಳನ್ನು ಕಟ್ಟುವ ವಿಷಯದಲ್ಲಿ ಆಖೈರ್ ತೀರ್ಮಾನ ಮಾಡಲಾಯಿತು. ಈ ಕಾಲುವೆಗಳ ಸರ್ವೆಯೂ ಮುಗಿಯಿತು. ಹಿಂದಿನ ವರ್ಷ ಇದ್ದ 46 ಅಡಿ ನೀರಿಗೆ ಬದಲಾಗಿ ಕಳೆದ ವರ್ಷ 71 ಅಡಿ ನೀರು ಸೇಕರಿಸಲ್ಪಟ್ಟಿತು. ಈ ಕಾಂಗಾರಿಯಲ್ಲಿ ಮೆ॥ ದಳ್ವಾಳರವರು ಮಾಡಿದ ಕೆಲಸದಿಂದ ಸಂತುಷ್ಟರಾಗಿ ಶ್ರೀಮನ್ಮಹಾರಾಜರವರು ಅವರನ್ನು ಸೂಪರಿಂಟೆಂಡಿಂಗ್ ಇಂಜನಿಯರ್ ಕೆಲಸದಲ್ಲಿ ಖಾಯಂಮಾಡಿದ್ದಾರೆ.

ಮುಂದೆ ಹೇಳುವ ಕಾಂಗಾರಿಗಳು ಈ ವರ್ಷ ಕಾರ್ಯತಃ ಮುಗಿದಹಾಗೆ ತಿಳಿಯಬರುತ್ತವೆ. ಅವು ಯಾವವೆಂದರೆ :—ತುಂಕೂರು ಡಿಸ್ಟ್ರಿಕ್ಟಿನಲ್ಲಿ ಸಂತನಪುರದ ಅಣೆಕಟ್ಟುವದು, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಹುಲ್ಲಹಳ್ಳಿನಾಲೆಯನ್ನು ವಿಸ್ತರಿಸಿ ಅಭಿವೃದ್ಧಿ ಮಾಡುವದು, ಕಲ್ಲಹಳ್ಳಿ ಅಣೆಯನ್ನು ಪುನಃ ಕಟ್ಟುವದು, ಕಂಪಸಾಗರ, ಕೋಟೆಬೆಟ್ಟ, ಕಿರುಗಾವಲು, ಮರಕಾಲು, ಹೊನ್ನಾವಾರ, ಇಲ್ಲಿಯ ಕೆರೆಗಳ ದುರಸ್ತು, ಇವೇ. ಅರಕಲಗೂಡು ತಾಲೂಕಿನಲ್ಲಿ 1902 ನೆಯ ಜುಲೈ ತಿಂಗಳಲ್ಲಿ ಒಡೆದುಹೋದ ಕೃಷ್ಣರಾಜ ಅಣೆಕಟ್ಟು ದುರಸ್ತಾಯಿತು. ಅದರ ಎಡಪಾರ್ಶ್ವದ ತೊಳೆಯುವ ತೂಬನ್ನು ಕಟ್ಟಲಾಯಿತು. ಈ ಅಣೆಕಟ್ಟಿನ ಕೆಳಗೆ ಉತ್ಪತ್ತಿಯಾಗುವ ಭಾರಿ ಹುಟ್ಟುವಳಿಯನ್ನು ಭದ್ರಪಡಿಸಿಕೊಳ್ಳುವದಕ್ಕಾಗಿ ಈ ಎರಡು ಕೆಲಸಗಳನ್ನೂ ತೀವ್ರವಾಗಿ ನಡಿಸಲಾಯಿತು.

ದುರ್ಭಿಕ್ಷ ಪರಿಹಾರದ ಕೆಲಸಗಳು.—ದುರ್ಭಿಕ್ಷ ಪರಿಹಾರಾರ್ಥವಾದ ಕೆಲಸಗಳಲ್ಲಿ ಗೊತ್ತಾದ 49 ನೀರಾವರಿ ಕಾರ್ಯಗಳ ವಿಷಯವಾಗಿ ಅಂದಾಜನ್ನು ತಯಾರ್ಮಾಡುವದಕ್ಕೋಸ್ಕರವೇ ನೇಮಿಸಿದ ಸೂಪರಿಂಟೆಂಡಿಂಗ್ ಇಂಜನಿಯರವರು ಅನೇಕ ಕಾಂಗಾರಿಗಳ ಅಂದಾಜನ್ನು ಮುಗಿಸಿ ಉಳಿದ ಕಾಂಗಾರಿಗಳ ವಿಷಯದಲ್ಲಿ (Field work) ಸ್ಥಳೀಯ ಕಾರ್ಯಗಳನ್ನು ಪೂರ್ತಿಮಾಡಿದ್ದಾರೆ. ಈ ಪೈಕಿ 49 ಲಕ್ಷ ರೂಪಾಯಿಂದಾಜಿನ 11 ಕಾರ್ಯಗಳನ್ನು ಈ ವರೆಗೆ ಮಂಜೂರ್ಮಾಡಲಾಯಿತು; ಲಾಭಕರವಲ್ಲವೆಂದು ಎಂಟನ್ನು ಬಿಟ್ಟು ಬಿಡಲಾಯಿತು; ಮಿಕ್ಕವು ಪರ್ಯಾಲೋಚನೆಯಲ್ಲಿವೆ. ಇದೂ ಅಲ್ಲದೆ ಬಹುಕಾಲದಿಂದ ಸರ್ಕಾರದವರ ಪರ್ಯಾಲೋಚನೆಯಲ್ಲಿದ್ದ ಒಟ್ಟು ಸಂಸ್ಥಾನದ ಕೆರೆಗಳ ನಕ್ಷೆಗಳನ್ನು ತಯಾರ್ಮಾಡುವ ಕೆಲಸವನ್ನು ಈಚೆಗೆ ಈ ಸೂಪರಿಂಟೆಂಡಿಂಗ್ ಇಂಜನಿಯರವರಿಗೇ ಕೊಟ್ಟಿದೆ.

ಕಾವೇರೀಪ್ರಪಾತದ ವೈದ್ಯುತಶಕ್ತಿಯನ್ನು ಹೆಚ್ಚಿಸುವದು.—12¼ ಲಕ್ಷರೂಪಾಯಿ ಮುಟ್ಟಸಿ 2,000 ಅಶ್ವಶಕ್ತಿ ಹುಟ್ಟುವ ಎರಡನೆಯ ಸ್ಥಾಪನೆಗೆ ಬೇಕಾದ ಏರ್ಪಾಡುಗಳನ್ನು ಮಾಡಿ ಕೆಲಸವನ್ನು ಉಪಕ್ರಮಿಸಿ ಈ ವರ್ಷದಲ್ಲಿ ಇದಕ್ಕಾಗಿ 97,644 ರೂಪಾಯಿ ಖರ್ಚು ಮಾಡಲಾಯಿತು.

ರೇಲ್ವೆಗಳ ಹುಟ್ಟುವಳಿ.—ಬಂಡವಾಳದ ಮೇಲೆ ಉತ್ಪತ್ತಿಯಾದ ನಿವ್ವಳನಫೆಯ ಸೇಕಡ ದರಗಳು ಯಾವವೆಂದರೆ :—

		1903	1902
ಕೋಲಾರದ ಚಿನ್ನದಗಣಿ ರೇಲ್ವೆ		6·73	8·71
ಮೈಸೂರು ಹರಿಹರ	,,	3·64	2·92
ಬೆಂಗಳೂರು ಹಿಂದೂಪುರ	,,	3·50	2·60
ನಂಜನಗೂಡು ಶಾಖೆ	,,	1·79	1·42
ಬೀರೂರು ಶಿವಮೊಗ್ಗ	,,	0·95	0·89

ಮುಜರಾಯಿ.—ಗತ ವರ್ಷದಲ್ಲಿ 44,882 ರೂಪಾಯಿ ಮುಟ್ಟಸಿ 108 ಕಟ್ಟಡಗಳನ್ನು ದುರಸ್ತು ಮಾಡಲಾಯಿತು. ಈ ಮೊಬಲಗಿನಲ್ಲಿ ಕೆಲಭಾಗವು ಆಯಾಯ ಕಟ್ಟಡಗಳ ಫಂಡಿನಿಂದಲೂ ಕೆಲಭಾಗವು ಭಕ್ತಾದಿಗಳು ಕೊಟ್ಟ ಹಣದಿಂದಲೂ ಬಂದವು. ದೇವಸ್ಥಾನಾದಿಗಳ ವಿಚಾರಣೆಯಬಗ್ಗೆ ಹತ್ತು ಸ್ಥಳೀಯ ಸಂಘಗಳು ನೇಮಿಸಲ್ಪಟ್ಟವು. ವ್ಯಾಸರಾಯಸ್ವಾಮಿಗಳವರ ಮಠದ ಆಡಳಿತವು ಅತೃಪ್ತಿಕರವಾಗಿದ್ದದ್ದರಿಂದ ಅವರ ಅಪೇಕ್ಷೆಯಮೇರೆ ಆ ಮಠಕ್ಕೆ ಸೇರಿದ ವಿಶಿಷ್ಟ ಇನಾಮು ಜಮೀನುಗಳನ್ನೂ ಗ್ರಾಮಗಳನ್ನೂ ಸರಕಾರದ ವಿಚಾರಣೆಗೆ ತೆಗೆದು ಕೊಳ್ಳಲಾಯಿತು. ಅಧಿಕಾರವಿಲ್ಲದೆ ಪರಾಧೀನಮಾಡಿದ್ದ ಉತ್ತರಾದಿಮಠದ ಒಂದು ಗ್ರಾಮವನ್ನೂ 7 ದೇವಸ್ಥಾನಗಳಿಗೆ ಸೇರಿದ ಜಮೀನುಗಳನ್ನೂ 1877 ನೆಯ ವರ್ಷದ ನಿಬಂಧನೆಗಳಪ್ರಕಾರ ಸರ್ಕಾರಕ್ಕೆ ಸ್ವಾಧೀನಪಡಿಸಿಕೊಳ್ಳಲಾಯಿತು. ಸರ್ವೆ ಸೆಟಲ್‌ಮೆಂಟ ಕಾಲದಲ್ಲಿ ಶಿಥಿಲವಾಗಿದ್ದಪ್ರಯುಕ್ತ ನೆಲಮಂಗಲದ ತಾಲುಕು ಮಲ್ಲೇನಹಳ್ಳಿ ಗ್ರಾಮದಲ್ಲಿರುವ ಶ್ರೀ ಆಂಜನೇಯಸ್ವಾಮಿಯವರ ದೇವಸ್ಥಾನ ಮತ್ತು ಹೊಸಕೋಟೆ ತಾಲ್ಲೂಕು ಸೂಲಿಬೆಲೆ ಗ್ರಾಮದಲ್ಲಿರುವ ಶ್ರೀ ಕಾಶೀ ವಿಶ್ವೇಶ್ವರಸ್ವಾಮಿ ದೇವಸ್ಥಾನ ಇವುಗಳ ಇನಾಂ ಜಮೀನುಗಳನ್ನು ಸರ್ಕಾರದವರು ಸ್ವಾಧೀನಕ್ಕೆ ತೆಗದುಕೊಂಡಿದ್ದರು. ಈಗ

666

ಆ ದೇವಸ್ಥಾನಗಳು ದುರಸ್ತಾಗಿ ಸೇವೆ ಸರಿಯಾಗಿ ನಡೆಯುತ್ತಿರುವದರಿಂದ, ಅವುಗಳನ್ನು ಆಯಾ ದೇವಸ್ಥಾನಗಳಿಗೆ ವಾಪಸ್ಸು ಕೊಡಲಾಯಿತು. ಅರಕಲ್ಗೂಡು ತಾಲೂಕಿನಲ್ಲಿ ಕೆಲವರ್ಷಗಳ ಹಿಂದೆ ಸರ್ಕಾರದವರು ಸುಫರ್ದು ಮಾಡಿಕೊಂಡ, ಶ್ರೀ ಅಗಸ್ತ್ಯೇಶ್ವರ ಸ್ವಾಮಿಯವರ ದೇವಸ್ಥಾನಕ್ಕೆ ಸೇರಿದ, ಇನಾಂ ಗ್ರಾಮಕ್ಕೆ ಬದಲಾಗಿ 120 ರೂಪಾಯಿ ನಗದಿಯಾತು ಇನಾಮನ್ನು ಮಂಜೂರ್ಮಾಡಲಾಯಿತು.

ಈ ವರ್ಷ 11 ಗಣಿಗಳಲ್ಲಿ ಕೆಲಸವು ನಡೆಯುತ್ತಿತ್ತು. ದಕ್ಷಿಣ ಅಂಬ್ಳೆ (ಹೊಸ ಕೆಂಪಿನಕೋಟೆ ಚಿನ್ನದ ಗಣಿ ಲಿಮಿಟೆಡ್) ಅಜ್ಜಂಪುರ (ಕಡೂರು ಮೈಸೂರು ಲಿಮಿಟೆಡ್) ಮತ್ತು ಹೊನ್ನೆಹಟ್ಟಿ (ಮೈಸೂರು ನಗರದ ಗಣಿ ಲಿಮಿಟೆಡ್) ಎಂಬ 3 ಗಣಿಗಳಲ್ಲಿ ಕೆಲಸವು ನಿಂತು ಹೋಯಿತು. ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಬೆಳ್ಳಾರದ ಪ್ರದೇಶದಲ್ಲಿಯೂ ಮತ್ತು ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿರುವ ಬೋಡಿಮಾರಿ ಪ್ರದೇಶದಲ್ಲಿಯೂ ಖನಿಜಗಳನ್ನು ಹುಡುಕುವದಕ್ಕೆ ಲೈಸೆನ್ಸುಗಳು ಕೊಡಲ್ಪಟ್ಟವು. ಇಂಡಿಯನ್ ಮೈನ್ಸ್ ಡೆವಲೆಪ್ಮೆಂಟ್ ಸಿಂಡಿಕೇಟ್ ಸಂಘದವರಿಂದ ಈ ಎರಡು ಸ್ಥಲಗಳಲ್ಲಿಯೂ ಕೆಲಸವು ಉಪಕ್ರಮಿಸಲ್ಪಟ್ಟಿತು.

ಗಣಿಗಳಲ್ಲಿ ಇನ್ಸ್ಪೆಕ್ಷನ್ ಕೆಲಸ ಹೆಚ್ಚುತ್ತಿರುವದರಿಂದ ಹೊಸದಾಗಿ ಮತ್ತೊಬ್ಬ ಗಣಿಗಳ ಇನ್ಸ್ಪೆಕ್ಟರನ್ನು ನೇಮಿಸಬೇಕಾಯಿತು.

ಎಲ್ಲಾ ಗಣಿಗಳಿಂದ ಒಟ್ಟು 330 ಲಕ್ಷಕ್ಕೆ ಮೀರಿ ಬೆಲೆ ಬಾಳತಕ್ಕ ಚಿನ್ನವು ಉತ್ಪತ್ತಿಯಾಯಿತು. ಹಿಂದಿನವರ್ಷ 277 ಲಕ್ಷ ಬಾಳತಕ್ಕ ಚಿನ್ನಮಾತ್ರ ಉತ್ಪತ್ತಿ ಯಾಗಿತ್ತು.

ವ್ಯವಹಾರವಿಷಯ (Judicial).— ಕಳೆದವರ್ಷದ ಉಪನ್ಯಾಸದಲ್ಲಿ ಸೂಚಿಸಿದಂತೆ ಕೋರ್ಟುಗಳಲ್ಲಿ ವ್ಯವಸ್ಥೆಯಾಗದೆ ನಿಂತಿರುವ ಸಿವಿಲ್ ಕಾರ್ಯಗಳಿಂದುಂಟಾದ ಅನಾನುಕೂಲ್ಯವನ್ನು ತಪ್ಪಿಸುವದಕ್ಕಾಗಿ ಈವರ್ಷ ಕೆಲವು ಬದಲಾವಣೆಗಳು ಜಾರಿಯಲ್ಲಿ ತರಲ್ಪಟ್ಟವು. 1898 ನೆಯ ವರ್ಷದಲ್ಲಿ ಚೀಪ್‌ಕೋರ್ಟಿಗೆ ವಹಿಸಿದ ಬೆಂಗಳೂರು, ಕೋಲಾರ, ತುಂಕೂರು ಡಿಸ್ಟ್ರಿಕ್ಟುಗಳ ಸಿವಿಲ್ ಮತ್ತು ಕ್ರಿಮಿನಲ್ ಒರಿಜನಲ್ ಅಧಿಕಾರವು ವಾಪಸ್ಸು ತೆಗದುಕೊಂಡು ಬೆಂಗಳೂರಿನಲ್ಲಿ ಒಂದು ಡಿಸ್ಟ್ರಿಕ್ಟು ಮತ್ತು ಸೆಷನ್ಸ್‌ಕೋರ್ಟನ್ನು ಪುನಃ ಸ್ಥಾಪಿಸಿ 1903 ನೆಯ ಜನವರಿ ತಿಂಗಳಿಂದ ಮೇಲ್ಕಂಡ ಮೂರು ಡಿಸ್ಟ್ರಿಕ್ಟುಗಳ ಅಧಿಕಾರವನ್ನೂ ಆ ಕೋರ್ಟಿಗೆ ಕೊಟ್ಟಿತು. ಅದೇತಾರೀಖಿನಿಂದಲಾಗಾಯತು ಹಾಸನ, ಚಿಕ್ಕಮಗಳೂರು, ಚಿತ್ರದುರ್ಗಗಳಲ್ಲಿ ಮೂರು ಸಬಾರ್ಡಿನೇಟ್ ಜಡ್ಜಿ ಕೋರ್ಟುಗಳನ್ನು ಸ್ಥಾಪಿಸಿ ಅವುಗಳಿಗೆ 10,000 ರೂಪಾಯಿ ವರೆಗೂ ಒರಿಜನಲ್ ಅಧಿಕಾರವನ್ನೂ 300 ರೂಪಾಯಿನವರೆಗೂ ಸ್ಮಾಲ್‌ಕಾಸ್ ಅಧಿಕಾರವನ್ನೂ ಕೊಟ್ಟು ಆ ಸ್ಥಳಗಳಲ್ಲಿದ್ದ ಮುನಿಸೀಫ್ ಕೋರ್ಟುಗಳನ್ನು ತೆಗೆದುಹಾಕಲಾಯಿತು. ಸಬ್‌ಜಡ್ಜಿಗಳಿಗೆ ಅಸಿಸ್ಟೆಂಟ್ ಸೆಷನ್ಸ್ ಜಡ್ಜಿಗಳ ಅಧಿಕಾರವನ್ನು ಕೊಟ್ಟು, ಜಡ್ಜಿಗಳು ನ್ಯಾಯವ್ಯವಸ್ಥೆಗಾಗಿ ಸಂಚಾರ ಹೋಗುವ ಪದ್ಧತಿಯನ್ನು ಪುನಃ ಉಪಕ್ರಮಿಸಲಾಯಿತು. ಈಚೆಗೆ ಅವರಿಗೆ, ಇನ್‌ಸಾಲ್ವೆನ್ಸಿ ಮೊಕದ್ದಮೆಗಳಲ್ಲಿಯೂ, ವಾರಸ್ ಸರ್ಟಿಫಿಕೇಟು ರೆಗ್ಯುಲೇಷನ್ ಮತ್ತು ಮೈನರ್ ರೂಲ್ಸುಗಳಿಗನುಸಾರವಾಗಿ ಬರುವ ಅರ್ಜಿಗಳ ವಿಷಯ ದಲ್ಲಿಯೂ ಡಿಸ್ಟ್ರಿಕ್ಟ್‌ಕೋರ್ಟಿನ ಅಧಿಕಾರವನ್ನು ಕೊಡಲಾಯಿತು. ಬೆಂಗಳೂರು ಸಬ್‌ಜಡ್ಜಿಯ ಸ್ಮಾಲ್‌ಕಾಸ್ ಅಧಿಕಾರವನ್ನು 300 ರೂಪಾಯಿಗಳಿಗೆ ಹೆಚ್ಚಿಸಲಾಯಿತು.

ಕಳೆದ ಜನವರಿಯಲ್ಲಿ ಜುಡಿಷಿಯಲ್ ಇಲಾಖೆ ಅಧಿಕಾರಿಗಳ ಸಂಬಳದ ಪಟ್ಟಿಯು ಪುನಃ ವಿಮರ್ಶಿಸಲ್ಪಟ್ಟಿತು. ಸಬ್‌ಜಡ್ಜಿಗಳು 600, 500, 450 ರೂಪಾಯಿ ಸಂಬಳಗಳುಳ್ಳ ಮೂರು ತರಗತಿಗಳಾಗಿ ವಿಭಾಗಿಸಲ್ಪಟ್ಟಿದಾರೆ. ಚೀಫ್‌ಕೋರ್ಟು ರಿಜಿಸ್ಟ್ರಾರೂ ಸಬ್‌ಜಡ್ಜಿಗಳ ಪಟ್ಟಿಗೆ ಸೇರಿದ್ದಾರೆ. ಮುನಿಸೀಫರುಗಳು 350ರೂ, 300ರೂ, 250ರೂ, ಮತ್ತು 150ರಿಂದ 200ರೂ, ಈಮೇರೆಗೆ ಸಂಬಳಗಳುಳ್ಳ ನಾಲ್ಕುತರಗತಿಗಳಾಗಿ ವಿಭಾಗಿಸಲ್ಪಟ್ಟಿದಾರೆ. ಮೊದಲನೆಯ ಮತ್ತು ಎರಡನೆಯ ತರಗತಿಯ ಮುನಸೀಫರುಗಳು ಗ್ರೇಡೆಡ್ ಆಫೀಸರುಗಳ ತರಗತಿಗೆ ಸೇರಿರುತ್ತಾರೆ.

ಸ್ಮಾಲ್‌ಕಾಸ್‌ಮೊಕದ್ದಮೆಗಳೂ ಸೇರಿ ಸಿವಿಲ್ ಮೊಕದ್ದಮೆಗಳ ಸಂಖ್ಯೆಯು ಹಿಂದಿನವರ್ಷ 20,602 ಇದ್ದದ್ದು ಗತವರ್ಷದಲ್ಲಿ 18,532ಕ್ಕೆ ಇಳಿದಿದ್ದರಿಂದ ಸಿವಿಲ್ ವ್ಯಾಜ್ಯವು ಬಹಳಮಟ್ಟಿಗೆ ಕಡಿಮೆಯಾಯಿತು. ಫೈಸಲಾದ ಮೊಕದ್ದಮೆಗಳ ಸಂಖ್ಯೆ 18,424. ಇದು ಹಿಂದಿನವರ್ಷದ ಸಂಖ್ಯೆಗಿಂತ 2,057ರಷ್ಟು ಕಡಿಮೆಯಾಗಿಯೂ ದಾಖಲ್ಮಾಡಿದ ಮೊಕದ್ದಮೆಗಳ ಸಂಖ್ಯೆಗಿಂತ 8 ಕಡಿಮೆಯಾಗಿಯೂ ಇದೆ. ಕ್ರಿಮಿನಲ್ ಮೊಕದ್ದಮೆಗಳು ಕೂಡ 14,457 ರಿಂದ 13,375ಕ್ಕೆ ಇಳಿದವು.

ಚೀಫ್‌ಕೋರ್ಟಿನ ಮುಖ್ಯವಾದ ತೀರ್ಮಾನಗಳನ್ನೂ ನಿಬಂಧನೆಗಳನ್ನೂ ಸಂಗ್ರಹಿಸಿ ಪ್ರತಿವರ್ಷವೂ ಪ್ರಕಟಿಸುವದಕ್ಕಾಗಿ ಒಬ್ಬ ಲಾರಿಪೋರ್ಟರನ್ನು ಮೊಕರರ್ಮಾಡಲಾಯಿತು.

ಪೋಲೀಸು.— ಹೊಸದಾಗಿ ಏರ್ಪಾಡುಮಾಡಿದ ಹೊಸದುರ್ಗದ ತಾಲೂಕಿಗೆ ಒಬ್ಬ ಇನ್ಸ್ಪೆಕ್ಟರನ್ನೂ ಚಿಕ್ಕಬಳ್ಳಾಪುರಕ್ಕೆ ಇಬ್ಬರು ದಫೇದಾರರನ್ನೂ 12 ಮಂದಿ ಕಾನ್ಸ್ಟೆಬಲರನ್ನೂ ಇಟ್ಟದ್ದರಿಂದ ಪೋಲೀಸ್ ಸ್ಟೆನ್ಸವು ಸ್ವಲ್ಪ ಜಾಸ್ತಿಯಾದಹಾಗಾಯಿತು.

ಗತವರ್ಷದಲ್ಲಿ ಪೊಲೀಸಿನವರಿಗೆ ತಿಳಿಸಿದ ಕಾರ್ಯಗಳ ಸಂಖ್ಯೆಯು 6,082 ಆಗಿತ್ತು—ಎಂದರೆ ಹಿಂದಿನ ವರ್ಷಕ್ಕಿಂತ 503 ಕಡಮೆಯಾಗಿತ್ತು. ಪೊಲೀಸಿನವರಲ್ಲಿ ಬಾಕಿ ಇದ್ದದ್ದು ಸೇರಿ ಫೈಸಲಾತಿಗೆ ನಿಂತಿದ್ದ ಒಟ್ಟು 9,386 ಕಾರ್ಯಗಳಲ್ಲಿ 6,063 ಕಾರ್ಯಗಳು ಫೈಸಲಾದವು. ಈಪೈಕಿ 2,636 ರಲ್ಲಿ ಎಂದರೆ ಸೇಕಡ 28ರಲ್ಲಿ ತಪ್ಪು ಸಾಬೀತಾಯಿತು. ಇದು ಹಿಂದಿನವರ್ಷದ ಸೇಕಡ ದರಕ್ಕಿಂತ 3 ಕಡಿಮೆಯಾಯಿತು. 6,483 ಜನರು—ಎಂದರೆ ಹಿಂದಿನ ವರ್ಷಕ್ಕಿಂತ ಸುಮಾರು 400 ಕಡಿಮೆಯಾಗಿ— ದಸ್ತಗಿರಿ ಮಾಡಲ್ಪಟ್ಟರು. ಅವರಲ್ಲಿ ಸೇಕಡ 58 (ಹಿಂದಿನವರ್ಷದಲ್ಲಿ ಸೇಕಡ 61) ರಮೇಲೆ ಅಪರಾಧ ನಿರ್ಣಯವಾಯಿತು.

ಕಳವಾದ ಸೊತ್ತುಗಳ ಪೈಕಿ ಸಿಕ್ಕಿತೆಂದು ರಿಪೋರ್ಟಾದವುಗಳ ಶೇಕಡದರವೂ ಸ್ವಲ್ಪ ಕಡಿಮೆಯಾಯಿತು.

ಲೆಜಿಸ್ಲೇಷನ್ (ವಿಧಿಪ್ರಕಲ್ಪನೆ).—ಈವರ್ಷ ಮಂಜೂರಾದ ಕಾನೂನುಗಳು ಯಾವವೆಂದರೆ :—ಅಳತೆ ಮತ್ತು ತೂಕದ ಸಾಧನಗಳ ರೆಗ್ಯುಲೇಷನ್ (1902ನೆಯ 3), ಎಕ್ಸೈಸ ರೆಗ್ಯುಲೇಷನ್ನು ತಿದ್ದುಪಾಟು (1902ನೆಯ 4) ಬ್ಯಾಂಕು ಬುಕ್ಕುಗಳ ವಿಷಯವಾಗಿ ಸಾಕ್ಷಿಯ ಕಾನೂನಿನ ತಿದ್ದುಪಾಟು ಮಾಡುವ ರೆಗ್ಯುಲೇಷನ್ (1902ನೆಯ 5) ಮತ್ತು ತಿದ್ದುಪಾಟಾದ ರಿಜಿಸ್ಟ್ರೇಷನ್ ರೆಗ್ಯುಲೇಷನ್ (1903ನೆಯ 1), ಇವೇ.

ಮೈಸೂರು ಸಂಸ್ಥಾನಕ್ಕೆ ಅನ್ವಯಿಸುವ ಬ್ರಿಟಿಷ್ ಕಾನೂನುಗಳಲ್ಲಿ ಆದ ತಿದ್ದುಪಾಟುಗಳನ್ನೆಲ್ಲಾ ಒಳಕೊಂಡಿರುವ ಪೀನಲ್ ಮತ್ತು ಕ್ರಿಮಿನಲ್ ಪ್ರೊಸಿಜರ್ ಕೋಡೂ ವಿಪ್ಪಿಂಗ್ ಆಕ್ಟುಗಳ ಪುನರ್ವಿಮರ್ಶೆಯೂ ಚೀಫ್‌ಕೋರ್ಟ ರೆಗ್ಯುಲೇಷನ ತಿದ್ದುಪಾಟೂ ತಯಾರಾಗಿ ಪರ್ಯಾಲೋಚಿಸಲ್ಪಟ್ಟಿವೆ. ಇವು ಕ್ಷಿಪ್ರದಲ್ಲಿಯೇ ಜಾರಿಗೆ ಬರುತ್ತವೆ.

ಲೋಕಲ್‌ಬೋರ್ಡ್ ರೆಗ್ಯುಲೇಷನಿಗೆ ಅನುಸಾರವಾದ ನಿಬಂಧನೆಗಳು ಸಂಪೂರ್ಣವಾಗಿ ಪರಿಷ್ಕರಿಸಲ್ಪಟ್ಟು ಈಗತಾನೆ ಮಂಜೂರಾಗಿವೆ. ಇವುಗಳಲ್ಲಿ ರೆಗ್ಯುಲೇಷನಿಗೆ ಒಳಪಡದ ಎಲ್ಲಾ ಮ್ಯುನಿಸಿಪಾಲಿಟಿಗಳನ್ನು ಸಂಘಗಳನ್ನಾಗಿ (Unions) ಮಾಡುವದಕ್ಕೂ ಪ್ರತಿ ಒಂದು ರೆವಿನ್ಯೂ ಡಿಸ್ಟ್ರಿಕ್ಟಿನಲ್ಲಿಯೂ ಒಂದೊಂದು ಡಿಸ್ಟ್ರಿಕ್ಟ್ ಮೇಲ್ವಿಚಾರಣೆ ಸಂಘವನ್ನು ಏರ್ಪಡಿಸುವದಕ್ಕೂ ಪ್ರತಿ ಒಂದು ತಾಲ್ಲೂಕು ಮತ್ತು ಸಬ್ ತಾಲ್ಲೂಕುಗಳಲ್ಲಿಯೂ ತಾಲ್ಲೂಕು ಮೇಲ್ವಿಚಾರಣೆ ಸಂಘಗಳನ್ನು ಏರ್ಪಡಿಸುವದಕ್ಕೂ ಪ್ರತಿ ಒಂದು ಸಂಘಕ್ಕೂ ಒಂದು ಪಂಚಾಯಿತರ ಸಭೆಯನ್ನು ಏರ್ಪಡಿಸುವದಕ್ಕೂ ಅವಕಾಶವನ್ನು ಕಲ್ಪಿಸಿದೆ. ಈ ಮೇಲ್ವಿಚಾರಣೆ ಸಂಘಗಳ ಮತ್ತು ಪಂಚಾಯಿತರ ಸಭೆಯ ಅಧಿಕಾರಗಳನ್ನೂ ಕರ್ತವ್ಯಗಳನ್ನೂ ಸರಿಯಾಗಿ ನಿಶ್ಚಯಿಸಿದೆ. ಈ ಸಭೆಗಳನ್ನು ಉತ್ತಮಸ್ಥಿತಿಗೆ ತರಬೇಕೆಂದು 1883 ರಲ್ಲಿ ಪ್ರಥಮತಃ [illegible]ಸಿದ ಕಾರ್ಯವು ಈಗ ತೀರ್ಮಾನವಾಯಿತು. ಈ ಸಭೆಗಳು ಈಗ ಮಾಡಿರುವ ಏರ್ಪಾಡುಗಳಿಂದ, ಮುಂದೆ ವಿಶೇಷೋತ್ಸಾಹವುಳ್ಳವುಗಳಾಗಿ ಕೆಲಸ ಮಾಡುವವೆಂದು ಕೋರುತ್ತೇವೆ.

ಇದೇ ಶ್ರೀಮನ್ಮಹಾರಾಜರವರ ಆಳ್ವಿಕೆಯ ಪ್ರಥಮ ವರ್ಷದ ವೃತ್ತಾಂತವು. ಈ ಕಾಲದಲ್ಲಿ ನಮ್ಮ ಅವಧಾನಕ್ಕೆ ಬಂದ ವಿಷಯಗಳ ಮನನದಿಂದ ಈ ಸಂಸ್ಥಾನದ ಪ್ರಕೃತಸ್ಥಿತಿಯನ್ನು ಸಂಗ್ರಹವಾಗಿ ಪರೀಕ್ಷಿಸಿ, ಅದು ಮುಂದೆ ಎಂದರೆ ಕೊನೆಯ ಪಕ್ಷ ಸ್ವಲ್ಪಕಾಲದವರೆಗಾದರೂ ಹೇಗಾಗಬಹುದೆಂದು ವಿಶದವಾಗಿ ತಿಳಿದುಕೊಳ್ಳುವದಕ್ಕೋಸ್ಕರ, ಶ್ರೀಮನ್ಮಹಾರಾಜರವರ ರಾಜ್ಯಭಾರ ವರ್ಣನಾಪ್ರಕರಣದಲ್ಲಿ ನನ್ನ ಸ್ವಾನುಭವಗಳನ್ನು ಅಲ್ಲಲ್ಲಿ ಸೂಚಿಸುವದು ಉಚಿತವೆಂದು ಭಾವಿಸಿ ಹಾಗೆ ಮಾಡಿದ್ದೇನೆ. ಸಭಾಸ್ತರರೇ, ಈ ಮೈಸೂರು ದೇಶವನ್ನೂ ಅದರ ಆಡಳಿತಗಳನ್ನೂ ಕೂಲಂಕಷವಾಗಿ ತಿಳಿದುಕೊಳ್ಳಲು ಅಸದೃಶವಾದ ಅವಕಾಶವನ್ನು ಪಡೆದವರಾಗಿಯೂ ಪರಪ್ರಯೋಜನಕರವಾದ ತಮ್ಮ ದೀರ್ಘಕಾಲೋದ್ಯೋಗದಿಂದ ನಿವೃತ್ತರಾಗಿ ತಮ್ಮ ನ್ಯಾಯಾರ್ಜಿತವಾದ ವಿಶ್ರಾಂತಿ ಸುಖವನ್ನು ಅನುಭವಿಸಲು ಸ್ವದೇಶಕ್ಕೆ ತೆರಳುವವರಾಗಿಯೂ ಇರುವ ಸರ್ ಡೊನಾಲ್ಡ್ ರಾಬರ್ಟ್‌ಸನ್ ಸಾಹೇಬರವರು, ತಮ್ಮ ಹೆಸರನ್ನು ಶಾಶ್ವತಗೊಳಿಸುವ ರಾಬರ್ಟ‌ಸನ್ ಪೇಟೆಯಲ್ಲಿ ಸ್ವಲ್ಪಕಾಲಕ್ಕೆ ಮುಂಚೆ ಆಶ್ಚರ್ಯಯುಕ್ತರಾಗಿ ವಿವರಿಸಿದಂತೆ, ರಾಜಭಕ್ತಿಯುಕ್ತರಾದ ನಾವೂ ಕೂಡ, ಶ್ರೀಮನ್ಮಹಾರಾಜರವರ ರಾಜ್ಯಭಾರೋಪಕ್ರಮ ಮಾರ್ಗವನ್ನೂ ಮುಂದೆ ಮಹಾರಾಜರವರ ಆಳ್ವಿಕೆಯಲ್ಲಿ ಈ ಸಂಸ್ಥಾನಕ್ಕೆ ಉಂಟಾಗಬಹುದಾದ ಶುಭೋದರ್ಕವನ್ನು ಸೂಚಿಸುವವೊ ಎಂಬಂತಿರುವ ಅವರ ರಾಜ್ಯಕಾರ್ಯದ ಆದರಾತಿಶಯವನ್ನೂ ನೋಡಿ ಆಶ್ಚರ್ಯಭರಿತರಾಗಿ ಶ್ಲಾಘಿಸುವದು ಯೋಗ್ಯವಾಗಿಯೇ ಇದೆ.

ಮೈಸೂರು,
5ನೇ ಅಕ್ಟೋಬರ್ 1903.

ಪಿ. ಎನ್. ಕೃಷ್ಣಮೂರ್ತಿ,
ಮೈಸೂರು ಸಂಸ್ಥಾನದ ದಿವಾನರವರು.